ಪುಸ್ತಕ ಪ್ರಪಂಚ

ಸಂಪುಟ ೩೯ ೧೯೮೪ ಸೆಪ್ಟೆಂಬರ್ ಸಂಚಿಕೆ ೨



ವಿಷಯ ಸೂಚಿ

ಮುಖಚಿತ್ರ : ಟಿ. ಪಿ. ಕೈಲಾಸಂ

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆ

ಸಂಪುಟ ೩೯ ಸೆಪ್ಟೆಂಬರ್ ೧೯೮೪ ಸಂಚಿಕೆ ೨

ಕೈಲಾಸಂ ಸ್ಮರಣೆ

'ಕೈ' ಎಂಬ ಸಂಕ್ಷಿಪ್ತ ಹೆಸರಿನಿಂದ ಕನ್ನಡನಾಡಿನಲ್ಲಿ ಪ್ರಸಿದ್ಧರಾಗಿದ್ದ ತ್ಯಾಗರಾಜ ಪರಮಶಿವ ಅಯ್ಯರ್ ಕೈಲಾಸಂ (೧೮೮೪–೧೯೪೬) ಹೊಸ ದೃಷ್ಟಿಯ ನಾಟಕಗಳನ್ನು ಬರೆದು ಕನ್ನಡ ನಾಟಕ ಕ್ಷೇತ್ರವನ್ನು ಬೆಳಗಿದ ಜನಪ್ರಿಯ ನಾಟಕಕಾರರು; ನಟರು ಮತ್ತು ನಿರ್ದೇಶಕರು. ಹಳೆಯ ಜಾಡಿನಲ್ಲಿಯೇ ಸಾಗುತ್ತಿದ್ದ ಕನ್ನಡ ರಂಗಭೂಮಿಗೆ ತಮ್ಮ ವೈಚಾರಿಕ ಕೃತಿಗಳಿಂದ 'ಹೊಸ ಜೀವಕಳೆ' ತುಂಬಿದ ಕೈಲಾಸಂ, 'ಆಧುನಿಕ ಕನ್ನಡ ರಂಗಭೂಮಿಯ ಶಿಲ್ಪಿ' ಎಂಬ ಕೀರ್ತಿಗೂ ಭಾಜನರಾದವರು.

ಕೈಲಾಸಂ ಹುಟ್ಟಿದ್ದು ಬೆಂಗಳೂರಿನಲ್ಲಿ; ತಾ|| ೨೯–೭–೧೮೮೪ ರಂದು. ಅವರದು ಶ್ರೀಮಂತ—ಸುಸಂಸ್ಕೃತ ಮನೆತನ. ಅವರ ತಂದೆ ತ್ಯಾಗರಾಜ ಪರಮಶಿವ ಅಯ್ಯರ್ ಅವರು ಆಗಿನ ಮೈಸೂರು ಸಂಸ್ಥಾನದ ಮುಖ್ಯ ನ್ಯಾಯಾಧೀಶರಾಗಿದ್ದರು. ತಾಯಿ ಕಮಲಮ್ಮ ಸಾಧು ಸ್ವಭಾವದ ಸದ್ಗೃಹಿಣಿ. ಕೈಲಾಸಂ ಮನೆಯವರೆಲ್ಲ ರಾಮಾಯಣ-ಮಹಾಭಾರತದ ಆರಾಧಕರಾಗಿದ್ದರು. ಆದರಿಂದಾಗಿ ಚಿಕ್ಕಂದಿನಲ್ಲಿಯೇ ಇವರು ಆ ಗ್ರಂಥಗಳಿಂದ ಪ್ರಭಾವಿತರಾದರು. ಬೆಂಗಳೂರು, ಹಾಸನ ಮತ್ತು ಮೈಸೂರಿನಲ್ಲಿ ಆರಂಭದ ವ್ಯಾಸಂಗವನ್ನು ಮುಗಿಸಿದರು. ಮದರಾಸಿನ ಹಿಂದೂ ಹೈಸ್ಕೂಲಿನಲ್ಲಿ ಓದಿ ಆಗಿನ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಅನಂತರ ಪ್ರೆಸಿಡೆನ್ಸಿ ಕಾಲೇಜಿನ ವಿದ್ಯಾರ್ಥಿಯಾಗಿ ಭೂವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯನ್ನು ಉನ್ನತದರ್ಜೆಯಲ್ಲಿ ಪಡೆದರು. ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದುದರಿಂದ ಸರ್ಕಾರದ ಶಿಷ್ಯ ವೇತನ ಪಡೆದು ಉನ್ನತ ವ್ಯಾಸಂಗಕ್ಕಾಗಿ ೧೯೦೮ರಲ್ಲಿ ಇಂಗ್ಲೆಂಡಿಗೆ ಹೋದರು. ಅಲ್ಲಿಯ ರಾಯಲ್ ಕಾಲೇಜ್ ಆಫ್ ಸೈನ್ಸ್‌ನಲ್ಲಿ

ಓದಿ, ತಮ್ಮ ಆಯ್ಕೆಯ ವಿಷಯಗಳಲ್ಲಿ ಮೊದಲ ದರ್ಜೆಯಲ್ಲಿ ತೇರ್ಗಡೆಯಾದರು. ಅನಂತರ ಭೂ ವಿಜ್ಞಾನ ವಿಷಯದಲ್ಲಿ ಒಂದು ಪ್ರೌಢ ಪ್ರಬಂಧ ಬರೆದು ರಾಯಲ್ ಜಿಯಾಲಾಜಿಕಲ್ ಸೊಸೈಟಿಗೆ ಒಪ್ಪಿಸಿ, ಅದರ 'ಫೆಲೋ' ಆದರು ; ಅಂಥ ಗೌರವ ಗಳಿಸಿದ ಮೊದಲ ಭಾರತೀಯ ಎಂಬ ಅಗ್ಗಳಿಕೆಗೂ ಪಾತ್ರರಾದರು. ಲಂಡನ್ನಿನಿಂದ ೧೯೧೫ರಲ್ಲಿ ಭಾರತಕ್ಕೆ ಹಿಂದಿರುಗಿ ಆಗಿನ ಮೈಸೂರು ಸರ್ಕಾರದ ಭೂ ವಿಜ್ಞಾನ ಇಲಾಖೆಯಲ್ಲಿ 'ಭೂ ವಿಜ್ಞಾನಿ' ಎಂದು ನೇಮಕಗೊಂಡು ತಮ್ಮ ವೃತ್ತಿ ಜೀವನ ಆರಂಭಿಸಿದರು. ಕೋಲಾರದ ಚಿನ್ನದಗಣಿ ಪ್ರದೇಶ, ಹಾಸನ ಮುಂತಾದ ಸ್ಥಳಗಳಲ್ಲಿ ಕೆಲಸಮಾಡಿದರು. ತಮ್ಮ ಕೆಲಸ–ಕಾರ್ಯಗಳನ್ನು ಉತ್ಸಾಹದಿಂದ ಮಾಡುತ್ತಿದ್ದರು, ಕೈ ಕೆಳಗಿನ ಕೆಲಸಗಾರರೊಂದಿಗೆ ಸರಳವಾಗಿ ಬೆರೆಯುತ್ತಿದ್ದರು.

ಕೈಲಾಸಂ ಸ್ವತಂತ್ರ ಪ್ರವೃತ್ತಿಯ ವ್ಯಕ್ತಿ. ಇದರಿಂದಾಗಿ ಒಂದು ನಿರ್ದಿಷ್ಟ ನಿಯಮಗಳಿಗೆ ಮತ್ತು ಸಮಯಕ್ಕೆ ಅಂಟಿಕೊಂಡು ಕೆಲಸಮಾಡುವುದು ಅವರಿಗೆ ಸಾಧ್ಯವಾಗದೇ ಹೋಯಿತು. ಹೀಗಾಗಿ ಬಹುಬೇಗ ಅವರು ಸರ್ಕಾರಿ ಕೆಲಸ ಬಿಟ್ಟು ಬಿಟ್ಟು (೧೯೨೦) ಸ್ವತಂತ್ರರಾದರು. ತಮ್ಮ ಜೀವನದ ಕೊನೆಯವರೆಗೂ ರಂಗಭೂಮಿಯ ಚಟುವಟಿಕೆಗಳನ್ನು ನಡೆಸುತ್ತ ಅದರಲ್ಲಿಯೇ ಬದುಕಿನ ಸೊಗಸನ್ನು, ನೆಮ್ಮದಿಯನ್ನು ಕಂಡುಕೊಂಡರು.

ಕೈಲಾಸಂ ಅವರದು ಅಸಾಧಾರಣ ವ್ಯಕ್ತಿತ್ವ; ಪ್ರತಿಭೆ, ಪಾಂಡಿತ್ಯ, ಮೇಧಾ ವಿತನಗಳಿಂದ ಮುಪ್ಪುರಿಗೊಂಡಿತ್ತು. ಮನೆಮಾತಾಗಿದ್ದ ತಮಿಳು ಭಾಷೆಯ ಜತೆಗೆ ಸಂಸ್ಕೃತ, ಇಂಗ್ಲಿಷ್, ಕನ್ನಡ, ಉರ್ದು ಭಾಷೆಗಳಲ್ಲೂ ಅವರು ಪ್ರಾವಿಣ್ಯ ಗಳಿಸಿಕೊಂಡಿದ್ದರು. ರಾಮಾಯಣ-ಮಹಾಭಾರತಗಳನ್ನು ಶ್ರದ್ಧೆಯಿಂದ ವ್ಯಾಸಂಗ ಮಾಡಿದ್ದರು. ಕಾಳಿದಾಸ, ಭಾಸ, ಭವಭೂತಿ ಮುಂತಾದ ಪ್ರಸಿದ್ಧ ಸಂಸ್ಕೃತ ಕವಿಗಳ ಕೃತಿಗಳನ್ನು ಓದಿಕೊಂಡಿದ್ದರು. ವ್ಯಾಸಂಗಕ್ಕೆಂದು ಇಂಗ್ಲೆಂಡಿಗೆ ಹೋಗಿದ್ದಾಗ, ಅಲ್ಲಿಯ ರಂಗಭೂಮಿಯ ಚಟುವಟಿಕೆಗಳನ್ನು ಹತ್ತಿರದಿಂದ ಕಂಡರು. ಷೇಕ್ಸ್‌ಪಿಯರ್, ಜಾನ್‌ಗಾಲ್ಸ್‌ವರ್ದಿ, ಬರ್ನಾರ್ಡ್‌ಷಾ ಮುಂತಾದ ಪ್ರಸಿದ್ಧ ನಾಟಕಕಾರರ ನಾಟಕಗಳನ್ನು ನೋಡಿ ಅವುಗಳಿಂದ ಪ್ರಭಾವಿತ ರಾದರು. ಪಾಶ್ಚಾತ್ಯ ಸಂಗೀತ ಕಲಿತುಕೊಂಡು, ಭಾರತೀಯ ಸಂಗೀತಕ್ಕೂ ಅದಕ್ಕೂ ಇರುವ ಸಾಮ್ಯ–ವೈಷಮ್ಯಗಳನ್ನು ಅರಿತುಕೊಂಡರು. ಅಲ್ಲಿಯ ಗಾಯಕರು ಇಂಗ್ಲಿಷಿನಲ್ಲಿ ಹಾಡುತ್ತಿದ್ದ ಹಾಡುಗಳಿಗೆ, ಕನ್ನಡ ಭಾಷೆಯ ಹಾಡುಗಳನ್ನು ಹೊಂದಿಸಿ ಹಾಡುತ್ತಿದ್ದುದ್ದು ಕೈಲಾಸಂ ವೈಶಿಷ್ಟ್ಯ. 'ಇಟೀಸ್

ಎ ಲಾಂಗ್ ವೇ ಟು ಟಿಪ್ಪರೇರೀ....? ಎಂಬ ಇಂಗ್ಲಿಷ್ ಹಾಡಿಗೆ ಪ್ರತಿಯಾಗಿ 'ನಮ್ಮ ತಿಪ್ಪಾರಳ್ಳಿ ಬಲುದೂರ–ನಡಿಯಾಕೆ ಬಲುದೂರ' ಎಂದು ಕೈಲಾಸಂ ಹಾಡಿದ ಹಾಡು ಪ್ರಸಿದ್ಧವಾದುದು.

ಸರ್ಕಾರಿ ಕೆಲಸ ಬಿಟ್ಟ ಮೇಲೆ ಅವರು ಬೆಂಗಳೂರಿನಲ್ಲಿ ನೆಲಸಿದರು. ಯಾವಾಗಲೂ ಕತ್ತಲು ತುಂಬಿರುತ್ತಿದ್ದ ಒಂದು ಸಣ್ಣ ಕೋಣೆಯಲ್ಲಿ ವಾಸ, ಹಗಲೆಲ್ಲಾ ನಿದ್ರಿಸುತ್ತ, ರಾತ್ರಿಯೆಲ್ಲ ಎಚ್ಚರವಾಗಿರುತ್ತಿದ್ದರು. ಆ ವೇಳೆ ಅವರನ್ನು ಕಾಣಲು ಬರುತ್ತಿದ್ದ ಗೆಳೆಯರಿಗೆ ತಾವು ಕಲ್ಪಿಸಿಕೊಂಡಿದ್ದ ನಾಟಕಗಳನ್ನು ಹೇಳಿ ಬರೆಸುತ್ತಿದ್ದರು. ಈ ರೀತಿ ಅವರ ನಾಟಕಗಳು ಸೃಷ್ಟಿ ಆದದ್ದು. ಮಧ್ಯಮ ವರ್ಗದ ಜನರ ನೋವು-ನಲಿವುಗಳು ; ಅವರ ಆಸೆ–ಆಕಾಂಕ್ಷೆಗಳು ; ಜಂಬ-ಡೌಲುಗಳು ಈ ನಾಟಕಗಳ ವಸ್ತು. ಸಮಾಜದಲ್ಲಿದ್ದ ಮರೆ–ಮೋಸ; ಟೊಳ್ಳು–ಗಟ್ಟಿಯನ್ನು ಗೊಡ್ಡು ಸಂಪ್ರದಾಯಗಳನ್ನು ಕೈಲಾಸಂ ತಮ್ಮ ನಾಟಕಗಳಲ್ಲಿ ಗೇಲಿ ಮಾಡಿದ್ದಾರೆ. ಕೈಲಾಸಂರ ಮೊದಲ ನಾಟಕ 'ಮಕ್ಕಳ ಸ್ಕೂಲು ಮನೇಲಲ್ವೆ' ಅಥವಾ 'ಟೊಳ್ಳು–ಗಟ್ಟಿ'. ಶಾಲಾ ಶಿಕ್ಷಣದ ನಿರರ್ಥಕತೆಯನ್ನು ಸಾರುವ ಈ ನಾಟಕ ಆ ಕಾಲಕ್ಕೆ 'ಕ್ರಾಂತಿಕಾರಕ' ನಾಟಕ ಎಂದು ಹೆಸರಾಯಿತು. ವರದಕ್ಷಿಣೆ ಮತ್ತು ಅದರಿಂದ ಹೆಣ್ಣಿನ ಬಾಳಿನ ಮೇಲೆ ಆಗುವ ಪರಿಣಾಮವನ್ನು 'ತಾಳೀ ಕಟ್ಟೋಕ್ಕೂಲೀನೆ' ಎಂಬ ನಾಟಕದಲ್ಲಿ ವಿವರಿಸಿದ್ದಾರೆ. ಒಣ ಪ್ರತಿಷ್ಠೆಯ ವ್ಯಕ್ತಿಗಳನ್ನು ಕುರಿತದ್ದು 'ಬಂಡ್ವಾಳಿಲ್ಲದ ಬಡಾಯಿ' ನಾಟಕ. ಸಮಾಜದಲ್ಲಿ ಸ್ವಾರ್ಥಪರರ ವಿಲಾಸದಿಂದ ವೇಶ್ಯಾವೃತ್ತಿ ಹುಟ್ಟಿ ಬೆಳೆದ ಬಗೆಯನ್ನು 'ಸೂಳೆ' ನಾಟಕದಲ್ಲಿ ಚಿತ್ರಿಸಿದ್ದಾರೆ. ಅದೊಂದು ದುರಂತ ನಾಟಕ. ಅರ್ಥವಿಲ್ಲದ ಸಂಪ್ರದಾಯಗಳಿಂದ ಕುಟುಂಬ ಜೀವನ ಹೇಗೆ ಕಂಗೆಡುತ್ತದೆ ಎಂಬುದನ್ನು 'ಬಹಿಷ್ಕಾರ' ನಾಟಕದಲ್ಲಿ ಚಿತ್ರಿಸಿದ್ದಾರೆ. ಅವರ ಇತರ ನಾಟಕಗಳಿವು : ಹೋಂ ರೂಲು, ಗಂಡಸ್ಕತ್ರಿ, ನಮ್‌ಕ್ಳಬ್ಬು, ನಮ್ಬ್ರಹ್ಮಣಕ್ಕೆ, ಅಮ್ಮಾವ್ರ ಗಂಡ, ಸತ್ತವನ ಸಂತಾಪ, ಅನುಕೂಲಕ್ಕೊಬ್ಬಣ್ಣ, ಸೀಕರ್ಣೆ ಸಾವಿತ್ರಿ, ಪೋಲಿ ಕಿಟ್ಟಿ. "ಈಗ ಸದ್ಯ ಇರೋ ಜಾತಿಗಳೆರಡೇ ಜಾತಿ....ದುಡ್ಡಿರೋರು....ದುಡ್ಡಿಲ್ದೋರು ಅಂತ; ಲೋಕದಲ್ಲಿ ಕಷ್ಟದಿಂದ ನರಳುವವರು ದೇವರಿಗೆ ಸಮಾನ. ಈ ಭೂಮೀಲಿ ಜೀವಿಸೋಕೆ ದೇವರಿಗೆ ಕೊಡೋ ಬಾಡಿಗೆ ಅಂದರೆ ಸುತ್ತಮುತ್ತಲ ಇರೋ ಜನರಿಗೆ ಉಪಯೋಗವಾಗಿರುವುದೇ" ಈ ಮುಂತಾದ ಉದಾತ್ತ ಸಂದೇಶಗಳನ್ನು ಕೈಲಾಸಂ ತಮ್ಮ ನಾಟಕ ಕೃತಿಗಳ ಮೂಲಕ ಜನತೆಗೆ ನೀಡಿದರು.

ಆಗ್ಗೆ ಕನ್ನಡ ರಂಗಭೂಮಿ ಹಳೆಯ ಜಾಡಿನಲ್ಲಿಯೇ ನಡೆಯುತ್ತಿತ್ತು. ನಾಟಕ

ಗಳನ್ನು ಆಡಿ ಅದರಿಂದಲೇ ಜೀವನ ಮಾಡುತ್ತಿದ್ದ ನಟರು ಆಡುತ್ತಿದ್ದದ್ದು ಪೌರಾಣಿಕ ನಾಟಕಗಳನ್ನು. ಅವುಗಳಲ್ಲಿ ಹೊಸದೇನೂ ಇರಲಿಲ್ಲ; ಯಾವುದೋ ಕಾಲದಲ್ಲಿದ್ದ ರಾಜಮಹಾರಾಜರುಗಳ ಕಥೆಗಳು. ಅಂಥ ನಾಟಕಗಳನ್ನು ಒಂದೇ ಸಮನೆ ನೋಡಿ ಜನತೆಗೂ ಬೇಸರವಾಗಿತ್ತು; ಹೊಸ ಬಗೆಯ ನಾಟಕಗಳಿಗಾಗಿ ಹಂಬಲಿಸುತ್ತಿದ್ದರು. ಅಂಥ ಸಮಯದಲ್ಲಿ ಕೈಲಾಸಂ ಅವರ ಹೊಸ ದೃಷ್ಟಿಯ— ವೈಚಾರಿಕ ನಾಟಕಗಳು ರಂಗಭೂಮಿಯ ಮೇಲೆ ಪ್ರದರ್ಶನಗೊಂಡು ಬಹುಬೇಗ ಜನಪ್ರಿಯವಾದುವು; 'ಕೈಲಾಸಂ ಕರ್ನಾಟಕ ಪ್ರಹಸನ ಪ್ರಪಿತಾಮಹರೇ' ಆದರು.

ಕೈಲಾಸಂ ಕನ್ನಡದಲ್ಲಿ ಮಾತ್ರವಲ್ಲದೆ ಇಂಗ್ಲಿಷಿನಲ್ಲೂ ನಾಟಕಗಳನ್ನು ರಚಿಸಿ ದ್ದಾರೆ. ಅಂಥ ನಾಟಕಗಳಲ್ಲಿ 'ಕರ್ಣ', 'ಪರ್ಪಸ್', 'ಕೀಚಕ' ಮತ್ತು 'ದಿ ಬರ್ಡನ್' ಮುಖ್ಯವಾದುವು. ಭಾರತದ ಪುರಾತನ ಸಂಸ್ಕೃತಿಯ ತಿರುಳನ್ನು ಅವರು ಈ ನಾಟಕಗಳಲ್ಲಿ ಪ್ರತಿಪಾದಿಸಿದ್ದಾರೆ.

ಅವರ ಅನೇಕ ನಾಟಕಗಳು ಭಾರತದ ವಿವಿಧ ಭಾಷೆಗಳಿಗೂ, ವಿದೇಶೀ ಭಾಷೆ ಗಳಿಗೂ ಭಾಷಾಂತರವಾಗಿವೆ. 'ಅಮ್ಮಾವ್ರ ಗಂಡ' ನಾಟಕ ಹಿಂದಿ, ತೆಲುಗಿಗೆ; 'ಸೂಳೆ' ನಾಟಕ ಮರಾಠಿ, ಇಂಗ್ಲಿಷ್, ರಷ್ಯಕ್ಕೂ; 'ಹೋಂ ರೂಲು' ನಾಟಕ ತೆಲುಗು, ಕೊಂಕಣಿಗೆ; 'ಕರ್ಣ' ನಾಟಕ ಹಿಂದಿ, ಮರಾಠಿಗೆ ಅನುವಾದ ಗೊಂಡಿವೆ. 'ದಿ ಪರ್ಪೊಸದ' ನಾಟಕ ಭಾರತದ ಎಲ್ಲ ಭಾಷೆಗಳಿಗೂ ಭಾಷಾಂತರ ಗೊಂಡಿದೆ.

ಅವರು ನಾಟಕಕಾರರು ಮಾತ್ರವಲ್ಲದೆ ನಟರೂ ನಿರ್ದೇಶಕರೂ ಆಗಿದ್ದರು. ಚಲನಚಿತ್ರ ಕ್ಷೇತ್ರದಲ್ಲೂ ಕೆಲಸಮಾಡಿದ್ದರು. 'ವಸಂತಸೇನ' ಎಂಬ ಚಿತ್ರದಲ್ಲಿ ಶಕಾರನಾಗಿ ಕಾಣಿಸಿಕೊಂಡಿದ್ದರು.


'ತಾವರೆ ಕೆರೆ' ಅವರ ಒಂದು ಕಥಾ ಸಂಕಲನ. ತಾವರೆ ಕೆರೆಯನ್ನು ಕೇಂದ್ರ ಮಾಡಿಕೊಂಡು ಸಮಾಜದ ವಿವಿಧ ವೃತ್ತಿಯ, ವಿವಿಧ ಮನೋಭಾವದ ವ್ಯಕ್ತಿಗಳ ಚಿತ್ರಗಳನ್ನೂ ಇಲ್ಲಿಯ ಕಥೆಗಳಲ್ಲಿ ರೇಖಿಸಿದ್ದಾರೆ. ಲೇವಾದೇವಿ ಸುಬ್ಬಣ್ಣ, ಸವಕಲು ಕಾಸಿನ ಆದಿಮೂರ್ತಿ, ದಳ್ಳಾಳಿ ಪುಟ್ಟಮಲ್ಲು, ಕಂಟ್ರಾಕ್ಟರ್ ಗಫ಼್ ಖಾನ್ ಮುಂತಾದವರ ಚಿತ್ರಗಳು ಜೀವಂತವಾಗಿ ಮೂಡಿವೆ. ಸಣ್ಣ ಕಥೆಗಳ ರಚನೆಯಲ್ಲೂ ಕೈಲಾಸಂ ಅವರಿಗಿದ್ದ ನೈಪುಣ್ಯಕ್ಕೆ 'ತಾವರೆಕೆರೆ' ಸಂಕಲನ ಸಾಕ್ಷಿಯಾಗಿದೆ.

ಕೈಲಾಸಂ ಅವರು ಹೀಗೆ ತಮ್ಮ ವಿಚಾರ ಬೋಧಕ ಕೃತಿಗಳಿಂದ; ಅಭಿನಯ

ಚಾತುರ್ಯದಿಂದ; ಹಾಸ್ಯದ ಹೊನಲಿನಿಂದ ಕನ್ನಡಿಗರನ್ನು ರಂಜಿಸಿದರು; ಕನ್ನಡ ರಂಗಭೂಮಿಯನ್ನು ಮುನ್ನಡೆಸಿದರು. ತಾವು ಬದುಕಿನ ವಿಷ ಉಂಡು ಜನತೆಗೆ ಅಮೃತ ಊಡಿದರು. ಅವರನ್ನು ಮದರಾಸಿನಲ್ಲಿ ೧೯೪೫ರಲ್ಲಿ ನಡೆದ ೨೯ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಮಾಡಿ ಗೌರವಿಸಲಾಯಿತು. ಅಧ್ಯಕ್ಷ ಭಾಷಣದಲ್ಲಿ ಅವರೆಂದರು "ಹಿರಿಯರುಂ ಕಿರಿಯರುಂ ಕಿಲಕಿಲನೆ ನಕ್ಕೆರಡು ಕಣ್ಣಹನಿಯಿತ್ತರೆನಗದು ಸಾಕು". ಮರು ವರ್ಷವೇ ಅಂದರೆ ೧೯೪೬ರ ನವೆಂಬರ್ ೨೩ರಂದು ಬೆಂಗಳೂರಿನಲ್ಲಿ ತೀರಿಹೋದರು.

'ವಾಕ್ಚತುರ', 'ಅಭಿನಯ ಚತುರ', 'ನಗೆಗಾರ' ಮತ್ತು 'ವೇದಾಂತಿಯೂ' ಆಗಿದ್ದ ಕೈಲಾಸಂ ಕನ್ನಡ ನಾಡಿನಲ್ಲಿ ಆಗಿ ಹೋದ ಒಬ್ಬ 'ವಿಸ್ಮಯಕಾರಿ ವ್ಯಕ್ತಿ'. ಅವರ ಜನ್ಮ ಶತಮಾನೋತ್ಸವವನ್ನು ಈ ವರ್ಷ ನಾಡಿನಾದ್ಯಂತ ಆಚ್ಚರಿಸಲಾಗುತ್ತಿದೆ.

ಎಸ್. ಚನ್ನಪ್ಪ



ಉಪದೇಶ ಮಾಡುವುದಕ್ಕಿಂತ ಅದರ ಪ್ರಯೋಜನ ಪಡೆಯುವುದಕ್ಕೆ ಹೆಚ್ಚು ಬುದ್ಧಿ ಬೇಕು.

—ಕೋಲಿನ್ಸ್

ಒಳ್ಳೆಯ ಕಾನೂನು ಮತ್ತಷ್ಟು ಒಳ್ಳೆಯ ಕಾನೂನುಗಳಿಗೂ ಕೆಟ್ಟ ಕಾನೂನು ಮತ್ತೂ ಕೆಟ್ಟ ಕಾನೂನುಗಳಿಗೂ ಅವಕಾಶ ಕಲ್ಪಿಸುತ್ತವೆ.

—ರೂಸೋ

ಸಕ್ಕರೆಯ ಬಗೆಗಿನ ಮಧುರ ಸತ್ಯಗಳು

ಸಕ್ಕರೆ ಕಪ್ಪುಪ್ಲೇಗಿನಂತೆ ಪ್ರಪಂಚದ ಅತ್ಯಂತ ಭಯಾನಕ ಉಪದ್ರವಗಳಲ್ಲಿ ಒಂದೆಂದು ಹೇಳುವುದು ಇತ್ತೀಚಿನ ವರ್ಷಗಳಲ್ಲಿ ಜಾಸ್ತಿಯಾಗಿದೆ. ಸ್ಥೂಲಕಾಯ ದಿಂದ ಹಿಡಿದು ಜ್ಞಾನಾರ್ಜನೆಗೆ ತಡೆ ಉಂಟುಮಾಡುವವರೆಗೂ ಸಕ್ಕರೆಯೇ ಕಾರಣವಾಗುತ್ತದೆಂದು ಹೇಳಲಾಗಿದೆ. ಮಕ್ಕಳಿಂದ ಹಿಡಿದು ಶತವೃದ್ಧರವರೆಗೂ ಯಾರೂ ಇದರ ಮಾರಕ ಹೊಡೆತದಿಂದ ರಕ್ಷಿತರಾಗಿರುವಂತೆ ಕಾಣುವುದಿಲ್ಲ.

ಸಕ್ಕರೆ ಎಂದರೆ ಅರ್ಥವಾದರೂ ಏನು? ರಾಸಾಯನಿಕವಾಗಿ 'ಸಕ್ಕರೆ' ಎನ್ನ ಬಹುದಾದ ಅನೇಕ ಮಿಶ್ರಣಗಳಿವೆ. ಆದರೆ ಕೆಲವು ಮಾತ್ರ ನಾವು ತಿನ್ನುವ ಆಹಾರದಲ್ಲಿ ಸಹಜವಾಗಿರುತ್ತವೆ. ಸಿಹಿಗಾಗಿ ಸೇರಿಸುವ ಪದಾರ್ಥಗಳಲ್ಲಿ ತೀರ ಸಾಮಾನ್ಯವಾದುದು ಕಬ್ಬಿನಿಂದ ಅಥವಾ ಬೀಟ್ರೂಟ್‌ನಿಂದ ಶುದ್ಧೀಕರಿಸಿ ತೆಗೆದ ಸುಕ್ರೋಸ್. ಹಾಲಿನಲ್ಲಿರುವ ಗ್ಲೂಕೋಸ್ ಮತ್ತು ಫ್ರುಕ್ಟೋಸ್ ಸಹಜ ಸಕ್ಕರೆಗಳಲ್ಲಿ ಸೇರುತ್ತವೆ. ನಮ್ಮ ದೇಹದ ಉಪಯೋಗಕ್ಕಾಗಿ ಎಲ್ಲ ರೀತಿಯ ಸಕ್ಕರೆಗಳೂ ರಕ್ತದಲ್ಲಿರುವ ಸಕ್ಕರೆಯಾದ ಗ್ಲೂಕೋಸಾಗಿ ಬದಲಾವಣೆ ಹೊಂದಬೇಕಾಗುತ್ತದೆ. ಮಾನವದೇಹಕ್ಕೆ ಈ ಸಕ್ಕರೆಗಳು ಯಾವ ಮೂಲದಿಂದ ಬರುತ್ತಿವೆ ಎಂಬುದು ಬೇಕಾಗಿಲ್ಲ.

ಆರೋಗ್ಯದ ಅತ್ಯಭಿಮಾನಿಗಳ ಪ್ರಕಾರ ಶುದ್ಧೀಕರಿಸಿದ ಸಕ್ಕರೆ ಅಪಾಯ ಕಾರಿ, ಸಹಜವಾಗಿ ಸಿಹಿಗೊಳಿಸುವ ಪದಾರ್ಥಗಳು ಒಳ್ಳೆಯವು ಎಂದಿದೆ. ಆದರೆ ಒಂದು ಸಕ್ಕರೆಯ ಅಣು, ಶುದ್ಧೀಕೃತವಾದರೂ ಆಗದಿದ್ದರೂ ಅದು ಸಕ್ಕರೆಯ ಅಣುವೇ ಆಗಿರುತ್ತದೆ. ಬಿಳಿ ಸಕ್ಕರೆಯಲ್ಲಿ ಜೀವಸತ್ವ, ಖನಿಜ ಅಥವಾ ಪ್ರೊಟೀನು ಗಳು ಇರುವುದಿಲ್ಲವೆಂಬುದೇನೋ ನಿಜ. ಕಚ್ಚಾ ಸಕ್ಕರೆ, ಕಂದು ಬಣ್ಣದ ಸಕ್ಕರೆ ಅಥವಾ ಜೇನುತುಪ್ಪ ಬಿಳಿಸಕ್ಕರೆಗಿಂತ ರುಚಿಕರವೆನಿಸಿದರೆ ಉಪಯೋಗಿಸಿ. ಆದರೆ, ಉನ್ನತ ಪ್ರಮಾಣದ ಪುಷ್ಟಿಕರ ಪದಾರ್ಥ ಸೇವಿಸುತ್ತಿದ್ದೀರೆಂದು ಮಾತ್ರ ಭಾವಿಸಬೇಡಿ.

"ಇದು ನಿಮಗೆ ಒಳ್ಳೆಯದಲ್ಲ" ಎಂದು ಸಕ್ಕರೆಯ ಬಗೆಗೆ ಅಸ್ಫುಟವಾಗಿ ಹೇಳಿಬಿಡಬಹುದು. ಆದರೆ ಇದನ್ನೂ ಮೀರಿ ತಪ್ಪು ಕಲ್ಪನೆಗಳು ಉಂಟಾಗಿವೆ.

೧೯೮೪ರ ಮಾರ್ಚ್ ರೀಡರ್ಸ್ ಡೈಜೆಸ್ಟ್ ಮಾಸಪತ್ರಿಕೆಯಲ್ಲಿ ಪ್ರಕಟವಾದ 'ಸ್ವೀಟ್ ಟ್ರೂತ್ಸ್ ಎಬೌಟ್ ಶುಗರ್' ಲೇಖನದ ಅನುವಾದ.

ಸಕ್ಕರೆಯ ಬಗೆಗೆ ನಿರ್ದಿಷ್ಟವಾಗಿ ಮಾಡಲಾಗಿರುವ ಕೆಲವು ಆಪಾದನೆಗಳನ್ನು ಪರಿಶೀಲಿಸೋಣ:

ಸ್ಥೂಲಕಾಯ: ಹೆಚ್ಚಿನ ಕ್ಯಾಲೊರಿಗಳು ಯಾವ ಮೂಲದಿಂದ ಬಂದರೂ ಕೊಬ್ಬನ್ನು ಸೇರಿಸುವಂಥವೇ ಆಗಿರುತ್ತವೆ. ಯಾವುದೇ ಒಂದು ರೀತಿಯ ಕ್ಯಾಲೊರಿ ಬೇರೆ ರೀತಿಯ ಕ್ಯಾಲೊರಿಗಿಂತ ಹೆಚ್ಚು ಕೊಬ್ಬನ್ನು ಸೇರಿಸುವುದಿಲ್ಲ. ಇದೇನಿದ್ದರೂ ಒಂದು ಗ್ರಾಮ್ ಕಾರ್ಬೋಹೈಡ್ರೇಟ್ (ಸಕ್ಕರೆಯೂ ಸೇರಿದಂತೆ) ಅಥವಾ ಪ್ರೊಟೀನುಗಳಿಗೆ ಹೋಲಿಸಿದರೆ ಒಂದು ಗ್ರಾಮ್ ಕೊಬ್ಬಿನ ಪದಾರ್ಥ ಗಳಲ್ಲಿ ಎರಡುಮಡಿಗಿಂತ ಹೆಚ್ಚು ಕ್ಯಾಲೊರಿಗಳಿರುತ್ತವೆ. ಆದ್ದರಿಂದ ಒಂದು ಚೂರು ಸುಟ್ಟರೊಟ್ಟಿಯ ಮೇಲೆ ಹಾಕಿಕೊಂಡ ಬೆಣ್ಣೆ ಅದೇ ಪ್ರಮಾಣದ ಜೆಲ್ಲಿ ಗಿಂತ (ಹಣ್ಣಿನಪಾಕ) ಹೆಚ್ಚು ಕೊಬ್ಬನ್ನು ಸೇರಿಸುತ್ತದೆ. ಸಕ್ಕರೆಗೆ ಬದಲಾಗಿ ಮಾಂಸದ ಸಾರ, ಹುರಿದ ಆಲೂಗೆಡ್ಡೆ ಮತ್ತಿತರ ಕೊಬ್ಬಿನ ಪದಾರ್ಥಗಳನ್ನು ಸ್ವೀಕರಿಸಿ ಸಕ್ಕರೆಯಿಂದ ಮುಕ್ತವಾದ, ಸ್ಥೂಲಕಾಯ ಇಳಿಸುವ ಆಹಾರ ಸೇವಿಸುತ್ತಿದ್ದೇನೆ ಎಂದುಕೊಳ್ಳುವುದರಲ್ಲಿ ಅರ್ಥವಿಲ್ಲ.

ಸಿಹಿಮೂತ್ರ ರೋಗ: ಮೇದೋಜೀರಕ ಗ್ರಂಥಿ ಉತ್ಪಾದಿಸುವ ಇನ್ಸುಲಿನ್ ಎಂಬ ಹಾರ್ಮೋನ್ ಗ್ಲೂಕೋಸನ್ನು ರಕ್ತ ಹೀರಿಕೊಳ್ಳಲು ನೆರವಾಗುತ್ತದೆ. ಸಿಹಿಮೂತ್ರರೋಗ ಬಂದಾಗ ಮೇದೋಜೀರಕ ಗ್ರಂಥಿ ಸಾಕಷ್ಟು ಇನ್ಸುಲಿನ್ ಅನ್ನು ಉತ್ಪಾದಿಸಲು ಅಶಕ್ತವಾಗಿರುತ್ತದೆ ಅಥವಾ ಉತ್ಪತ್ತಿಯಾದ ಇನ್ಸುಲಿನ್ ಸರಿಯಾಗಿ ಕೆಲಸ ಮಾಡುವುದಿಲ್ಲ. ಆದ್ದರಿಂದ ಸಿಹಿಮೂತ್ರ ರೋಗಿಗಳು ಹೆಚ್ಚು ಮೊತ್ತದ ರಕ್ತ-ಸಕ್ಕರೆಯನ್ನು ಹೊಂದಿರುತ್ತಾರೆ; ಅದರಲ್ಲೂ ಮುಖ್ಯವಾಗಿ ಸಕ್ಕರೆ ತೆಗೆದುಕೊಂಡ ಮೇಲೆ ಹೀಗಾಗುತ್ತದೆ. ಸಕ್ಕರೆಯುಕ್ತ ಪದಾರ್ಥಗಳನ್ನು ತಿನ್ನುವುದೇ ಈ ರೋಗಕ್ಕೆ ಕಾರಣವೆಂಬುದು ಇನ್ನೂ ಸಾಬೀತಾಗಿಲ್ಲ.

ಹೈಪೋಗ್ಲೈಸೀಮಿಯ: ಮೇದೋಜೀರಕ ಗ್ರಂಥಿ ಹೆಚ್ಚು ಇನ್ಸುಲಿನನ್ನು ಉತ್ಪತ್ತಿ ಮಾಡಿದಾಗ ಸಿಹಿಮೂತ್ರಕ್ಕೆ ವಿರುದ್ಧ ಪರಿಸ್ಥಿತಿ ಏರ್ಪಡುತ್ತದೆ. ಆಗ ರಕ್ತ-ಸಕ್ಕರೆಯ ಪ್ರಮಾಣ ತೀರ ಕಡಿಮೆಯಾಗುತ್ತದೆ. ಹೈಪೋಗ್ಲೈಸೀಮಿಯ ತೀರ ಅಪರೂಪದ ಸ್ಥಿತಿ ಎಂಬುದು ನಿಜ. ಇದು ಉದ್ವೇಗಾತ್ಮಕ ನರರೋಗದ ಲಕ್ಷಣಗಳನ್ನು ಹೋಲುತ್ತದೆ. ರೋಗಭ್ರಾಂತಿಯುಳ್ಳ ಕೆಲವರು ಅಸ್ಫುಟವಾದ ಕೆಲವು ಲಕ್ಷಣಗಳಿಗೆ ಏನಾದರೊಂದು ಹೆಸರು ನೀಡಬೇಕೆಂದು ಭಾವಿಸಿದ್ದರಿಂದ ಹೈಪೋಗ್ಲೈಸೀಮಿಯ ಎಂಬುದು ಅಸ್ತಿತ್ವಕ್ಕೆ ಬಂತು.

ಮೇದೋಜೀರಕ ಗ್ರಂಥಿಯಲ್ಲಿ ಗೆಡ್ಡೆಯಾಗಿ ನಿಜವಾದ ಹೈಪೋಗ್ಲೈಸೀಮಿಯ

ಉಳ್ಳವರಿಗೆ ರಕ್ತ-ಸಕ್ಕರೆಯ ಕೊರತೆ ಉಂಟಾಗಬಹುದು. ಆದರೆ, ಆಹಾರದಲ್ಲಿ ಹೆಚ್ಚಿನ ಸಕ್ಕರೆಯ ಅಂಶ (ಮುಖ್ಯವಾಗಿ ಶುದ್ಧೀಕರಿಸಿದ ಸಕ್ಕರೆ) ಮೇದೋಜೀರಕ ಗ್ರಂಥಿ ಹೆಚ್ಚಿನ ಇನ್ಸುಲಿನ್ ಉತ್ಪತ್ತಿ ಮಾಡುವಂತೆ ಪ್ರಚೋದಿಸುತ್ತದೆಂದೂ ಅದರಿಂದ ರಕ್ತ-ಸಕ್ಕರೆ ಕಡಿಮೆಯಾಗುತ್ತದೆಂದೂ ಜನಜನಿತ "ವಿವೇಕ" ನಿರ್ಣಯಿಸಿದೆ. ಇದು ಶುದ್ಧ ಅವಿವೇಕ.

ದಂತಕ್ಷಯ: ಸಕ್ಕರೆಯಿಂದ ಹಲ್ಲು ತೂತಾಗುವ ಸಾಧ್ಯತೆಯಿದ್ದರೂ ಹಲ್ಲಿನ ತೊಂದರೆಗಳನ್ನು ನಿವಾರಿಸಲು ಬಿಳಿಸಕ್ಕರೆ ಬಿಟ್ಟು ಒಳ್ಳೆಯ ಹಳೆಯ "ಸಹಜ" ಜೇನುತುಪ್ಪ ಅಥವಾ ಒಣಹಣ್ಣು ಬಳಸುವುದೇ ಪರಿಹಾರವೆಂದು ತಿಳಿಯಬೇಡಿ. ದಂತಕ್ಷಯಕ್ಕೆ ಎಷ್ಟರಮಟ್ಟಿಗೆ ಅವಕಾಶ ನೀಡುತ್ತಿದ್ದೇವೆಂಬುದೇ ಇಲ್ಲಿ ಮುಖ್ಯ. ಸಿಹಿ ಪದಾರ್ಥ ಅಂಟಿಕೊಳ್ಳುವಂಥದ್ದಾದರೆ, ಹೆಚ್ಚು ಕಾಲ ಅದು ಹಲ್ಲಿನಲ್ಲೇ ಇದ್ದರೆ ಮಾತ್ರ ಕೆಡುಕನ್ನುಂಟುಮಾಡುತ್ತದೆ. ದಂತಕ್ಷಯವನ್ನು ಕಡಿಮೆ ಮಾಡಬೇಕಾದರೆ ಅಂಟುವ ಸಿಹಿ ತಿಂಡಿಗಳನ್ನು ಎರಡು ಹೊತ್ತಿನ ಊಟದ ನಡುವಿನ ಕಾಲದಲ್ಲಿ ತಿನ್ನದಿರಬೇಕು. ಹಲ್ಲನ್ನು ಆಗಾಗ್ಗೆ ಶುಚಿ ಮಾಡುತ್ತಿರಬೇಕು. ತೂತನ್ನು ಉಂಟುಮಾಡುವ ಬಾಯಿಯ ಸೂಕ್ಷ್ಮ ಜೀವಿಗಳು ತಮಗೆ ಬೇಕಾದ ಸಕ್ಕರೆ ಯಾವ ತರಹದ್ದೆಂಬುದನ್ನು ನೋಡುವುದಿಲ್ಲ. ನಿಜ ಹೇಳಬೇಕಾದರೆ, ಒಣದ್ರಾಕ್ಷಿಯಂಥ ಕೆಲವು "ಆರೋಗ್ಯಕರ" ಪದಾರ್ಥಗಳೂ ಇಡೀ ದಿನ ಹಲ್ಲಿಗೆ ಅಂಟಿಕೊಂಡಿದ್ದು, ಸೂಕ್ಷ್ಮ ಜೀವಿಗಳಿಗೆ ಒಳ್ಳೆಯ ರುಚಿಕರ ಆಹಾರವನ್ನು ಒದಗಿಸಬಲ್ಲವು.

ಹೃದ್ರೋಗ: ೧೯೬೪ರಲ್ಲಿ ಜಾನ್ ಯೂಡ್ಕಿನ್ ಎಂಬ ಇಂಗ್ಲಿಷ್ ವೈದ್ಯರು ಹೃದ್ರೋಗಕ್ಕೆ ಸಕ್ಕರೆ ಕಾರಣವೆಂಬ ಅತ್ಯಂತ ಪ್ರಚಾರಾತ್ಮಕ ಆಪಾದನೆ ಹೊರಡಿಸಿದರು. ಅಪಘಾತಕ್ಕೀಡಾಗಿ ಆಸ್ಪತ್ರೆಗೆ ಸೇರಿದ ೧೩ ಜನ, ಹತ್ತಿರದಲ್ಲೇ ವಾಸವಿದ್ದ ೧೨ ಜನರೊಂದಿಗೆ ೪೫ ಜನ ಹೃದ್ರೋಗಿಗಳ ಸಕ್ಕರೆ ಸೇವನೆಗೆ ಹೋಲಿಸಿ ಯೂಡ್ಕಿನ್ ಇಂಥ ಸಿದ್ಧಾಂತ ಮಾಡಿದರು. ಇವರ ಅಧ್ಯಯನದಿಂದ ಹೃದ್ರೋಗಿಗಳು ಹೆಚ್ಚಿನ ಸಕ್ಕರೆ ಸೇವಿಸುವರೆಂದು ತಿಳಿದು ಬಂತು. ಇದರಿಂದ ಸಕ್ಕರೆ ಹೃದಯಕ್ಕೆ ಕೆಟ್ಟದ್ದೆಂದು ಅವರು ನಿರ್ಣಯಿಸಿದರು, ಪತ್ರಿಕೆಗಳೂ ತಕ್ಕಂತೆ ವರದಿ ಮಾಡಿದುವು.

ಕೆಲವು ಸುಲಭ ಅಂಕೆ ಅಂಶಗಳತ್ತ ಒಂದು ನೋಟ ಬೀರಿದಾಗ ಸಕ್ಕರೆ-ಹೃದ್ರೋಗ ಸಿದ್ಧಾಂತ ವಿವೇಕಯುತವಾದುದಲ್ಲ ಎಂಬುದು ಮನಗಾಣುವುದು. ಈ ಸಂಬಂಧ ನಿಜವಾದುದೇ ಆದರೆ ಸಕ್ಕರೆಯ ಬಳಕೆ ಹೆಚ್ಚಾಗಿರುವ ದೇಶಗಳಲ್ಲಿ

ಹೃದ್ರೋಗಗಳೂ ಹೆಚ್ಚಿರಬೇಕು. ನಿಜ ಹೇಳಬೇಕಾದರೆ ವೆನಿಜುಲ, ಕ್ಯೂಬ, ಬ್ರೆಜಿಲ್, ಕೋಸ್ಟರಿಕ ಮುಂತಾದ ದೇಶಗಳು ಕಡಿಮೆ ಪ್ರಮಾಣದ ಹೃದ್ರೋಗವುಳ್ಳವಾಗಿವೆ.

ಜ್ಞಾನಾರ್ಜನೆಗೆ ತಡೆ: ಈ ವಿಷಯದಲ್ಲಿ ಇದು ತಪ್ಪೆಂದು ಖಂಡಿಸಲು ಕೂಡ ವೈಜ್ಞಾನಿಕ ಅಧ್ಯಯನವೇನೂ ನಡೆದಿಲ್ಲ. ಸಕ್ಕರೆ ಜ್ಞಾನಾರ್ಜನೆಗೆ ತಡೆಯನ್ನುಂಟುಮಾಡುತ್ತದೆಂದು ಹೇಳುವುದನ್ನು ತುಂಬ ಕೇಳುತ್ತೇವೆ. ಆದರೆ ಆ ತರಹದ ಪ್ರಚಾರವಾಗುತ್ತಿರುವುವೆಲ್ಲ ಕ್ರಮಬದ್ಧವಲ್ಲದ ಅಧ್ಯಯನಗಳು, ಪ್ರಮಾಣ ಪತ್ರಗಳು, ಅಭಿಪ್ರಾಯಗಳು ಮತ್ತು ಊಹೆಗಳಾಗಿವೆ.

ಸಕ್ಕರೆ ಮತ್ತು ಸಕ್ಕರೆಯಿಂದ ತಯಾರಾದ ಪದಾರ್ಥಗಳು ವಿಪರೀತ ವರ್ತನೆಗೆ ಕಾರಣವಾಗುತ್ತವೆಂಬುದು ಕೂಡ ಸಾಬೀತಾಗದ ಇನ್ನೊಂದು ಅಭಿಪ್ರಾಯ. ೧೯೭೮ರಲ್ಲಿ ಸ್ಯಾನ್ ಫ್ರಾನ್ಸಿಸ್ಕೊದ ಮೇಯರನ್ನೂ, ಮೇಲ್ವಿಚಾರಕನನ್ನೂ ಕೊಂದ ಮೇಲೆ ಮಾಜಿ ಮೇಲ್ವಿಚಾರಕ ಡ್ಯಾನ್ ವೈಟ್ ನ್ಯಾಯ ಸಂಬಂಧವಾದ ಸಮರ್ಥನಾ ಪತ್ರ ಸಮರ್ಪಿಸುತ್ತ ಅದರಲ್ಲಿ ತಾನು ಕೊಲೆ ಮಾಡುವ ಮುಂಚೆ ಬಹಳಷ್ಟು ಕ್ರೀಮ್ ಕೇಕ್‌ಗಳನ್ನು ತಿಂದ ವಿಷಯ ತಿಳಿಸಿದನು. ಅಮೆರಿಕೆಯ ನಟಿ ಷರೊನ್ ಟೇಟ್ ಕೊಲೆ ನಡೆಸಿದ ಕುಪ್ರಸಿದ್ಧ ಮ್ಯಾನ್ಸನ್ 'ಕುಟುಂಬ' ಚಾಕ್ಲೆಟ್‌ಗಳಿಂದಲೇ ಜೀವಿಸುತ್ತಿತ್ತೆಂದು ಆರೋಗ್ಯಕರ ಆಹಾರದ ಬೆಂಬಲಿಗರೊಬ್ಬರು ಎತ್ತಿತೋರಿಸಿದರು. ಆಕೆಯ ಪ್ರಕಾರ "ಎಲ್ಲಿ ಆಹಾರ ಚೆನ್ನಾಗಿರುತ್ತದೆಯೋ ಅಲ್ಲಿ ಅಪರಾಧ ಇರುವುದಿಲ್ಲ". ಈ ಹೇಳಿಕೆಗೆ ಮತ್ತು ಇದೇ ತರಹದ ಕಲ್ಪನೆಗಳಿಗೆ ದೃಢ ವೈಜ್ಞಾನಿಕ ಆಧಾರ ಇಲ್ಲ.

ಶೂನ್ಯ ಕ್ಯಾಲೊರಿಗಳು: ಸಕ್ಕರೆಯಲ್ಲಿ ಪೂರ್ತಿ 'ಶೂನ್ಯ' ಕ್ಯಾಲೊರಿಗಳಿವೆ ಎಂಬ ಆಪಾದನೆ ಹಾಸ್ಯಾಸ್ಪದವಾದುದು. ಎಲ್ಲ ಕ್ಯಾಲೊರಿಗಳೂ ಪೂರ್ತಿ ಕ್ಯಾಲೊರಿಗಳೇ, ಶಕ್ತಿಪೂರ್ಣವಾದುವೇ. ಅಗತ್ಯ ಪೋಷಕ ವಸ್ತುಗಳಿಗೆ ಬದಲಾಗಿ ಸಕ್ಕರೆ ಉತ್ಪನ್ನಗಳನ್ನು ಬಳಸಿದರೆ ಆಹಾರ ಸಂಬಂಧವಾದ ನ್ಯೂನತೆಗಳುಂಟಾಗಬಹುದು. ಆದರೆ ವಿವೇಕಯುತವಾಗಿ ಸರಿಯಾದ ಆಹಾರ ಸೇವನೆಯ ಕಡೆ ನೀವು ಗಮನ ಕೊಟ್ಟಷ್ಟು ಕಾಲ, ಅಧಿಕ ಕ್ಯಾಲೊರಿಗಳ ಅಗತ್ಯಕ್ಕೆ ತಕ್ಕಂತೆ ನೀವು ಉಪಾಹಾರ ಸೇವಿಸುವುದರಲ್ಲಿ ತಪ್ಪೇನೂ ಇಲ್ಲ.

ಆದ್ದರಿಂದ, ಒಂದು ಮಾತ್ರ ಸ್ಪಷ್ಟ ಸಕ್ಕರೆ ಮಧುರವಾದುದು. ಅದರರ್ಥ ಸಕ್ಕರೆ ಕೆಟ್ಟದೆಂದಲ್ಲ.

ಅಕ್ಕ ಮಹಾದೇವಿ

ಊನ

(ಕಳೆದ ಸಂಚಿಕೆಯಿಂದ)

೨

ದೊಡ್ಡಪ್ಪನ ಹತ್ತಿರ ಬರಬಹುದೊ, ಬೇಡವೊ ಎಂದು ಸಂಕೋಚಪಡುತ್ತಿದ್ದ ಅಮ್ಮು, ಈಗ ಧೈರ್ಯದಿಂದ ಅವರ ಪಕ್ಕದಲ್ಲಿ ಬಂದುನಿಂತಳು. ತಮ್ಮ ಭಾವೋದ್ವೇಗದ ಪ್ರವಾಹವನ್ನು ಎತ್ತ ತಿರುಗಿಸಬೇಕೆಂದು ಅರಿಯದೆ ಶಂಕರನ್ ಕೆಳಗೆ ಬಗ್ಗಿದರು. ಅಮ್ಮು ಅವರ ಅಂಗಿಯನ್ನು ಹಿಡಿದುಕೊಂಡಿದ್ದಳು. ಸಮುದ್ರದಲ್ಲಿ ಮುಳುಗುತ್ತಿದ್ದವನು ಸಿಕ್ಕಿದ ಆಧಾರವನ್ನು ಬಿಗಿಯಾಗಿ ಹಿಡಿಯುವಂತೆ, ಅವರು ಆ ಮಗುವನ್ನು ಎತ್ತಿ ಬಿಗಿಯಾಗಿ ತಬ್ಬಿ ಮುತ್ತಿನ ಮಳೆಗರೆದರು. ಈ ಪ್ರೀತಿಯ ಆವೇಶದಿಂದ ಗಾಬರಿಯಾದ ಆ ಮಗು, ಹೆದರಿ ಕಿರುಚಲು ಶುರುಮಾಡಿತು. ಗಣೇಶನೂ ಸ್ವಲ್ಪ ಹೆದರಿ "ಅಣ್ಣಾ, ಸ್ನಾನಮಾಡಲ್ಲವಾ?....ಅಮ್ಮು ಕೆಳಗಿಳಿಯೆ!"

ಮಗುವನ್ನು ಇಳಿಸಿ ಶಂಕರನ್ ಸ್ನಾನಮಾಡಲು ಹೊರಟರು.

ಹಿತ್ತಲಿನಲ್ಲಿ ಚಿಕ್ಕ ಕರುವೊಂದರ ಜೊತೆ ಆಟವಾಡುತ್ತಿದ್ದಳು ಉಮಾ. ಜೀವನದಲ್ಲಿ ಅವಳಿಗೆ ಸಂಭವಿಸಿದ ದುಃಖವನ್ನು ಅವಳಿಗಿಂತಲೂ ಹೆಚ್ಚಾಗಿ ಅವಳ ತಂದೆಯೇ ಅನುಭವಿಸುವಂತೆ ಶಂಕರರಿಗೆ ತೋರಿತು.

ದೊಡ್ಡಪ್ಪನನ್ನು ನೋಡಿದ್ದರಿಂದ ಅವಳು ಎದ್ದುನಿಂತಳು ಮುಖದಲ್ಲಿ ಮಂದಹಾಸ.

"ಒಳಗೆ ನೀರು ತುಂಬಿಸಿದ್ದೇನೆ...."

ಇಷ್ಟು ಸೌಂದರ್ಯವೂ, ಜೀವನದಲ್ಲಿ ಇಷ್ಟು ಆಸಕ್ತಿಯೂ ಹೊಂದಿರುವ ಈ ಹುಡುಗಿಗೆ ಈ ತರದ ಶೋಧನೆಯಾ!

ತನ್ನನ್ನು ಆಟವಾಡಿಸದೆ ಉಮಾ ದೂರ ನಿಂತಿದ್ದಾಳಲ್ಲ ಎಂದು ಆ ಕರು ಅವಳನ್ನು ತಿವಿಯಿತು ಅವಳು ಬಗ್ಗಿ ಅದರ ಮುಖವನ್ನು ತನ್ನ ಮುಖಕ್ಕೆ ಒತ್ತಿಕೊಂಡಳು.

ಹತ್ತು ದಿನಗಳಿಂದ ಸರಿಯಾಗಿ ಸ್ನಾನಮಾಡಿರಲಿಲ್ಲ.ತಣ್ಣನೆಯ ನೀರು ತಂಪಾಗಿ

ತಮಿಳು ಮೂಲ : ಇಂದಿರಾಪಾರ್ಥಸಾರಥಿ

ಅನುವಾದ : ಮಂದಾಕಿನಿರಾವ್

ಅವರ ನೆತ್ತಿಯ ಮೇಲೆ ಬಿದ್ದಾಗ, ಆ ಸುಖವನ್ನು ಒಂದು ಕ್ಷಣ ಅನುಭವಿಸಿದರು. ಅನುಭವವನ್ನೇ ಕಾರಣ–ಕಾರ್ಯವಾಗಿಟ್ಟುಕೊಂಡು ಅದು ತಂದ ನ್ಯಾಯವನ್ನೆ ತನ್ನ ಮನೋಧರ್ಮವೆಂದೂ ಜೀವನಸೂತ್ರವೆಂದೂ ಬಾಳಿದ ಅವರಿಗೆ, ಆ ಜೀವನ ತಂದಾಗ ಅವರು ತಮ್ಮನನ್ನು ನೋಡಲು ಮಾಂಗುಡಿಗೆ ಧಾವಿಸಿದರು.

ತಮ್ಮಂತೆ ಏಕಾಂತವಾಸಿಯಾಗದೆ, ಹಿಂದಿನವರು ನಡೆದ ದಾರಿಯಲ್ಲೇ ಸ್ವಲ್ಪವೂ ವ್ಯತ್ಯಾಸವಿಲ್ಲದೆ ಬಾಳುತ್ತಿರುವ ತಮ್ಮ ತಮ್ಮನ ಕುಟುಂಬದಲ್ಲಿ ಶಾಂತಿಯನ್ನೂ, ನೆಮ್ಮದಿಯನ್ನೂ ಅವರು ಕಾಣಬಯಸಿದ್ದರು. ಆದರೆ, ಇದಕ್ಕೆ ಏನು ಕಾರಣ ?....

ಯಾವುದಕ್ಕೇ ಆಗಲಿ ಕಾರಣವನ್ನು ಹುಡುಕುವುದು ಜಾಣತನವಲ್ಲ ಎನ್ನುವುದು ತಮ್ಮ ಸೂತ್ರವಾದರೂ, ಕಾರಣವನ್ನು ಹುಡುಕುವುದರಿಂದ ಪ್ರಪಂಚದಲ್ಲಿ ತೊಂದರೆಗಳು ಹೆಚ್ಚುತ್ತವೆಯೇ ಹೊರತು ಪ್ರಶ್ನೆಗಳು ಬಗೆಹರಿಯುವುದಿಲ್ಲ ಎಂದು ತಮಗನ್ನಿಸಿದರೂ ತಿರುಗಿ ತಿರುಗಿ ಇದಕ್ಕೆ ಕಾರಣವನ್ನು ಹುಡುಕುತ್ತಿದೆ ತಮ್ಮ ಮನಸ್ಸು, ವಿಧಿಯ ಕಾಲಕ್ರಮದ ಪಟ್ಟಿಯಲ್ಲಿ ಇದು ತಪ್ಪಿಸಲಾಗದ ಘಟನೆಯೊ ನಡೆದುಹೋದ ಘಟನೆಗಳನ್ನು ಸ್ವಾಭಾವಿಕವಾಗಿ ಪರಿಗಣಿಸುವುದೇ ವಿಧಿ ಎಂದು ಅವರು ಎಣಿಸುತ್ತಿದ್ದುದು ಅವರ ನೆನಪಿಗೆ ಬಂತು.ಆದರೆ ಈಗ ವಿಧಿ ಮೂಲವೆ ಅಥವಾ ಘಟನೆಗಳು ಮೂಲವೆ ಎಂದು ತಾವುಶೋಧಿಸಲು ಕಾರಣ ?, ಶಂಕರನ್ ಮನಸ್ಸಿನ ತೊಳಲಾಟದಿಂದ ನೊಂದರು.

"ದೊಡ್ಡಪ್ಪಾ, ಇನ್ನೂ ಸ್ನಾನಮಾಡುತ್ತಿದ್ದೀರಾ ?"....ಎಂದು ಕೇಳುತ್ತಾ ಮೀನಾ ಬಂದಳು.

"ಈಗ ಆಯ್ತುಮ್ಮಾ....ಬಂದುಬಿಟ್ಟೆ."

"ಯಾಕೆ ಅವಸರ ಮಾಡ್ತಿ ? ನಿಧಾನವಾಗಿ ಮಾಡಲಿ...." ಎಂದು ಅವಳನ್ನು ಗದರಿಸಿದಳು ಉಮಾ.

ಶಂಕರನ್ ಸ್ನಾನಮಾಡಿ ಟವಲ್‌ನಿಂದ ತಲೆಯನ್ನು ಒರೆಸಿಕೊಳ್ಳುತ್ತಾ ಹೊರಗೆ ಬಂದರು.

"ಅಯ್ಯಯ್ಯೋ....ದೊಡ್ಡಪ್ಪಂಗೆ ಜನಿವಾರವೇ ಇಲ್ಲ ಕಣೆ!...." ಎಂದಳು ಮೀನಾ.

ನಂಬಿಕೆ ಇದೆಯೊ ಇಲ್ಲವೊ, ಸಾಧ್ಯವಾದಷ್ಟುಮಟ್ಟಿಗೂ ಎಲ್ಲರನ್ನು ಅನುಸರಿಸಿಕೊಂಡು ಹೋಗುವುದು ಎಂದು ಬಂದಿದ್ದ ಶಂಕರರಿಗೆ ಜನಿವಾರ ವಿಷಯ ಸ್ವಲ್ಪವೂ ನೆನಪಿಗೆ ಬರಲಿಲ್ಲ. ಸಮಾಜದ ಚಿಕ್ಕ ಚಿಕ್ಕ ಆಚಾರಗಳು

ಕೂಡ ಈ ಎಂಟು ವರ್ಷದ ಹುಡುಗಿಯು ಬಳಿ ಎಷ್ಟು ಆಳವಾಗಿ ಬೇರೂರಿವೆ ಎಂದು ಆಶ್ಚರ್ಯಪಟ್ಟರು.

"ಜನಿವಾರ ಇಲ್ಲದಿದ್ದರೆ ಏನೆ? ಪ್ರಪಂಚವೇ ಮುಳುಗಿಹೋಯ್ತಾ? ಯಾಕೆ ಅಯ್ಯಯ್ಯೋ ಅಂತ ಕೂಗ್ತೀಯಾ?" ಎಂದು ಕೇಳಿದಳು ಉಮಾ.

ಶಂಕರನ್ ಮತ್ತೂ ಆಶ್ಚರ್ಯದಿಂದ ಉಮಾಳನ್ನು ನೋಡಿದರು. ಅವಳು ಮೀನಾಳನ್ನು ಕರೆದುಕೊಂಡು ಒಳಗೆ ಹೋದಳು.

ತಮಗೆ ಜನಿವಾರವಿಲ್ಲವೆಂಬ ಕಾರಣದಿಂದ ಸಮಾಜವನ್ನೆದುರಿಸಲು ತಮ್ಮನಿಗೆ ಯಾವ ವಿಧವಾದ ಸಂಕೋಚವೂ ಆಗಬಾರದೆಂದು, ತಮ್ಮನನ್ನು ಜನಿವಾರ ಕೇಳಿದಾಗ ಅವರು ಹೇಳಿದ ಉತ್ತರದಿಂದ ಅವರಿಗೆ ಇನ್ನೂ ಆಶ್ಚರ್ಯವಾಯಿತು.

"ಪರವಾಗಿಲ್ಲ, ನಿನಗೆ ಇಷ್ಟವಿಲ್ಲದಿದ್ದರೆ....ಯಾರು ಏನು ಹೇಳ್ತಾರೆ?"

ಅವರು ಮೇಲೆ ಒಣಗ ಹಾಕಿದ್ದ ಒಂದು ಒಣಗಿದ ಚೌಕವನ್ನು ಶಂಕರರಿಗೆ ಕೊಟ್ಟು ಹೇಳಿದರು. "ನಿನಗೆ ಸಂಕೋಚವಾಗಿದ್ದರೆ ಇದನ್ನು ಮೇಲೆ ಹೊದ್ದುಕೊಂಡು ಊಟಕ್ಕೆ ಬಾ...."

"ಪಾರ್ವತಿ, ಎಲೆ ಹಾಕಾಯ್ತಾ?"

"ಆಗಲೇ ಹಾಕಾಯ್ತು" ಎಂದು ಒಳಗಿಂದ ಉತ್ತರ ಬಂತು.

ಅಡುಗೆ ಮನೆಗೆ ಹೊಂದಿಕೊಂಡಂತಿತ್ತು ಪೂಜೆಮನೆ. ಊದುಬತ್ತಿಯ ವಾಸನೆ ಗಾಳಿಯಲ್ಲಿ ಬೆರೆಯುವ ಸಂಗೀತದಂತೆ ಮೂಗಿನಿಂದ ಹಿಡಿದು ಹೃದಯಕ್ಕೆ ತಂಪೆರೆಯಿತು.

ಊಟಮಾಡುತ್ತಿದ್ದಾಗ ಯಾರೂ ಮಾತಾಡಲಿಲ್ಲ. ಸಹೋದರರಲ್ಲಿ ಕೇಳಬೇಕಾದ ಪ್ರಶ್ನೆಗಳು ಎಷ್ಟೊ! ಆದರೂ ಅವರುಗಳ ನಡುವೆ ನೆಲಸಿದ ಮೌನ, ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡ ಭಾವನೆಯಾಗಿತ್ತು. ಶಂಕರರ ಮಟ್ಟಿಗೆ, ಅವರು ಗಣೇಶನ ಪ್ರಶ್ನೆಗಳನ್ನು ಎದುರುನೋಡಿ, ಅವುಗಳಿಗೆ ತಕ್ಕ ರೀತಿಯಲ್ಲಿ ಉತ್ತರವನ್ನು ಸಿದ್ಧಪಡಿಸಿಕೊಂಡು ಬಂದಿದ್ದರು. ಆದರೆ ಈಗವರಿಗೆ ಪೆಚ್ಚಾಗಿತ್ತು. ಅಣ್ಣನ ಶಾಂತರೀತಿ ಅವರ ಮನಸ್ಸನ್ನು ಅರ್ಥವಾಗದ ಒಂದು ಸಂಕಟಕ್ಕೆ ನೂಕಿತು.

"ಏನಿದು, ಇಷ್ಟೊಂದು ಸ್ವಲ್ಪ ಊಟ ಮಾಡ್ತೀರಾ?" ಎಂದು ಪಾರ್ವತಿ ಮೌನವನ್ನು ಒಡೆದಳು. ಅವಳು ಶಂಕರನ ಎಲೆಗೆ ಇನ್ನೂ ಸ್ವಲ್ಪ ಅನ್ನವನ್ನು ಹಾಕಿದಳು.

"ಹೋಟಲ್ ಊಟ ಮಾಡಿ ಹೊಟ್ಟೆ ಚಿಕ್ಕದಾಗಿಹೋಯ್ತು" ಎಂದು

ನಗುತ್ತಾ ಹೇಳಿದ ಶಂಕರನ್ ತಮ್ಮನ ಮುಖವನ್ನು ನೋಡಿದರು. ಗಣೇಶನ್ ತನ್ನ ವಿಷಯವಾಗಿ ಏನೂ ಕೇಳದಿದ್ದರೂ ವಿಷಯವನ್ನು ಒಂದು ವಿಧವಾಗಿ ಹೇಳಿಬಿಟ್ಟ ತೃಪ್ತಿ ಅವರ ಮುಖದಲ್ಲಿ ಕಂಡಿತು.

"ಮನೆಯಲ್ಲಿ ಅತ್ತೆ ಇಲ್ಲ ?" ಎಂದು ಕೇಳಿದಳು ಮೀನಾ. ಇದು ಅನಿರೀಕ್ಷಿತವಾಗಿ ಬಂದ ಪ್ರಶ್ನೆ.

"ಅತ್ತೆ ಅಲ್ಲ ಕಣೆ....ದೊಡ್ಡಮ್ಮ ಇಲ್ಲವಾಂತ ಕೇಳು...." ಎಂದು ಉಮಾ ಅವಳನ್ನು ತಿದ್ದಿಬಿಟ್ಟು, ಶಂಕರರನ್ನು ನೋಡಿ ನಕ್ಕಳು.

"ಅಪ್ಪಪ್ಪಾ! ಒಂದೊಂದನ್ನೂ ಕೇಳುವುದು ನೋಡು...." ಎಂದು ಖಂಡಿಸುವಂತೆ ಹೇಳಿದ ಪಾರ್ವತಿಗೂ ಈ ವಿಷಯವಾಗಿ ತಿಳಿದುಕೊಳ್ಳುವ ಕುತೂಹಲವಿದೆಯೆಂದು ಅವಳ ಧ್ವನಿ ತೋರಿಸಿತು.

ತಂದೆ ಏನೂ ಮಾತಾಡದಿದ್ದದ್ದು ಮೀನಾಳಿಗೆ ಇನ್ನೂ ಸ್ವಲ್ಪ ಧೈರ್ಯ ಉಂಟಾಯಿತು.

"ದೊಡ್ಡಪ್ಪಾ....ನೀವು ಮದುವೇನೇ ಮಾಡಿಕೊಳ್ಳಲಿಲ್ಲವಾ ?" ಮೌನವಾಗಿ ತಿನ್ನುತ್ತಿದ್ದ ಗಣೇಶನ್ ಮಗಳನ್ನು ಕೋಪದಿಂದ ನೋಡಿದರು. ಅವಳು ಆ ನೋಟವನ್ನು ಎದುರಿಸಲಾರದೆ ತಲೆ ತಗ್ಗಿಸಿದಳು.

ಶಂಕರನ್ ನಗುತ್ತಾ ಹೇಳಿದರು: "ಮಾಡಿಕೊಳ್ಳಲಿಲ್ಲಮ್ಮಾ" ಮಾಡಿಕೊಳ್ಳಕ್ಕೆ ಮರೆತುಬಿಟ್ಟೆ!

ಮೀನಾಳ ಪ್ರಶ್ನೆಯಿಂದ ಗಣೇಶನಿಗುಂಟಾದ ಮುಜಗರವನ್ನು ಹಾಸ್ಯದಿಂದ ತಿಳಿಯಾಗಿಸಲು ಯತ್ನಿಸಿದರು.

ಉಪ್ಪಿನಕಾಯಿ ಹಾಕಲು ಬಂದ ಉಮಾ ಮೆಲ್ಲಗೆ ಹೇಳಿದಳು. "ನೀವು ಮದುವೆ ಮಾಡಿಕೊಳ್ಳಕ್ಕೆ ಮರೆತುಬಿಟ್ಟರಿ, ನನಗೆ ಮದುವೆ ಆಗಿದ್ದೇ ಮರೆತು ಹೋಯಿತು....ಯಾವುದು ವಾಸಿ ?"

ಅವರು ಚಕಿತರಾಗಿ ಉಮಾಳನ್ನು ತಲೆಯೆತ್ತಿ ನೋಡಿದರು. ಅವಳ ಮುಖದಲ್ಲಿ ನಿರಂತರವಾಗಿ ತುಂಬಿದ್ದ ಮಂದಹಾಸ ಮಾಸಲಿಲ್ಲ. ಅವರ ಮನಸ್ಸಿನಲ್ಲಿ ಹೊತ್ತಿದ್ದ ಹೊರೆ ಇನ್ನೂ ಭಾರವಾಯಿತು.

ಸಹೋದರರು ಊಟ ಮಾಡಿದ ಬಳಿಕ ನಡುಮನೆಗೆ ಹೋಗಿ ಉಯ್ಯಾಲೆಯಲ್ಲಿ ಕುಳಿತರು.

ವರಾಂಡದ ಪಕ್ಕದಲ್ಲಿ ಕುಳಿತು ಶೂನ್ಯವನ್ನು ನೋಡುತ್ತಿದ್ದ ಬಾಬು ತಿರುಗಿ ನೋಡಿದ.

"ಬಾಬು ಊಟ ಮಾಡಲ್ಲ?" ಎಂದು ಕೇಳಿದರು ಶಂಕರನ್.

"ಅವನು ಉಮಾ ಹಾಕಿದರೆ ಮಾತ್ರ ತಿನ್ನುತ್ತಾನೆ. ಬೇರೆ ಯಾರೂ ಮುಟ್ಟಬಾರದು ...." ಎಂದು ಹೇಳುತ್ತಾ, ಉಯ್ಯಾಲೆಯಲ್ಲಿದ್ದ ಖಾಲಿ ತಾಂಬೂಲವ ತಟ್ಟೆಯನ್ನು ಒಳಗೆ ತೆಗೆದುಕೊಂಡು ಹೋದಳು ಪಾರ್ವತಿ.

ಶಂಕರನ್ ಉಯ್ಯಾಲೆಯಿಂದ ಎದ್ದುಹೋಗಿ ಅವನ ಪಕ್ಕದಲ್ಲಿ ಕುಳಿತರು.

"ಆಕಾಶವನ್ನು ನೋಡ್ತಾನೆ ಕೂತಿದ್ದಿಯಲ್ಲ, ಅಲ್ಲಿ ಏನು ಇದೆ ಹೇಳು...."

"ನೋಡ್ತಾನೆ ಇದ್ರೆ, ಆಕಾಶ ಹತ್ತಿರ ಬರುವಹಾಗೆ ಕಾಣತ್ತೆ ಹತ್ತಿರ ಬಂದರೆ ಅದರ ಮೇಲೆ ಮಲಕ್ಕೊಂಡು ಹಾಗೆ ತೇಲಿಹೋಗ್ತೀನಿ."

"ನಾನೂ ನಿನ್ನ ಜೊತೆ ಬರಲಾ?"

ಬಾಬು ಸ್ವಲ್ಪ ಹೊತ್ತು ಯೋಚಿಸಿದ. "ನನ್ನ ಹಾಗೆ ಇರುವವರಿಗೆ ಮಾತ್ರ ಆಕಾಶ ಹತ್ತಿರ ಬರತ್ತೆ. ನಿಮಗೆಲ್ಲಾ ಕಾಲು ಇದೆಯಲ್ಲ, ನೀವೇ ಮೇಲೆ ಹೋಗಬಹುದಲ್ಲ!...."

"ನಾನೂ ಹಾಗೆ ಹೋದೆ. ಆದರೆ ಆಕಾಶ ದೂರ ದೂರ ಹೋಗ್ತಾನೆ ಇತ್ತು. ಆದ್ದರಿಂದ ಅದನ್ನು ಹಿಡಿಯಕ್ಕೆ ಆಗದೇ ಸುಸ್ತಾಗಿ ನಿನ್ನ ಹತ್ರ ಬಂದು ಕೂತುಬಿಟ್ಟೆ. ಈಗ ಆಕಾಶ ನನ್ನ ಹತ್ರ ಬರತ್ತಾ ಹೇಳು....?"

"ಬರತ್ತೇಂತ ನೆನಸಿಕೊಂಡು ಕಣ್ಣುಮುಚ್ಚಿಕೊಳ್ಳಿ. ಬರತ್ತೆ!"

"ಕಣ್ಣುಮುಚ್ಚಿಕೊಂಡ್ರೆ ನಿದ್ರೆ ಮಾತ್ರ ಬರತ್ತೆ." ತುಂಬ ಹೊತ್ತು ಕವಿದಿದ್ದ ಮೌನ ಮುರಿದು ಗಣೇಶ್ ಈಗ ಮಾತಾಡಿದರು.

"ಕಣ್ಣುಮುಚ್ಚಿಕೊಂಡು, ನಂಬಿದರೆ, ಒಂದು ವೇಳೆ ಬರತ್ತೋ ಏನೊ...." ಎಂದರು ಶಂಕರನ್. ತಮ್ಮನ ದುಸ್ಥಿತಿಯನ್ನು ಊಹಿಸಿದ ಅವರು ಗಣೇಶನನ್ನು ಮಾತಿಗೆಳೆಯಲು ಬೇಕೆಂದೇ ಹೀಗೆ ಹೇಳಿದರು.

"ನಂಬಿಕೆ!" ಎಂದು ಹೇಳಿ ಒಣನಗೆ ನಕ್ಕ ಗಣೇಶನ್. "ಆ ಕಾಲದಿಂದಲೂ ಅಪ್ಪನ ಮಾತನ್ನು ನಾನು ಮೀರಿದವನಲ್ಲ. ಅನುಷ್ಠಾನ ಆಚರಣೆಗಳಿಗೂ ಕಮ್ಮಿಯಿಲ್ಲ! ನಿನ್ನಹಾಗೆ ಪ್ರಶ್ನೆಗಳನ್ನು ಕೇಳದೆ ನಂಬಿಕೊಂಡು ಬಂದೆ. ಅದಕ್ಕೆ ಪ್ರತಿಫಲ, ನೋಡು, ನಿನ್ನ ಕಣ್ಣೆದುರಿಗೆ...."

ಶಂಕರನ್ ಎದ್ದು ತಮ್ಮನ ಬಳಿಗೆ ಹೋದರು. ಅವರು ಮೆಲ್ಲಗೆ ಹೇಳಿದರು. "ಮಗು ಎದುರಿಗೆ ಹೀಗೆಲ್ಲಾ ಮಾತಾಡಬೇಡ. ಇದು ನಿನಗೂ ಅಥವಾ ಅವನಿಗೊ ಮಾಡುವ ನ್ಯಾಯವಲ್ಲ. ಏನಾದರೂ ಹೇಳಬೇಕೂಂದ್ರೆ, ಬಾ, ಜಗುಲಿಗೆ ಹೋಗೋಣ...."

ಮೀನಾ ತಾಂಬೂಲದ ತಟ್ಟೆಯನ್ನು ತಂದು ಶಂಕರನ ಬಳಿ ನೀಡಿದಳು.

"ನನಗೆ ಬೇಡ, ಅಪ್ಪನ ಹತ್ತಿರ ಕೊಡು...."

"ಯಾಕೆ, ನೀವು ಹಾಕಿಕೊಳ್ಳಲ್ಲ?" ಶಂಕರನ್ ತಮ್ಮ ಹಲ್ಲುಗಳನ್ನು ತೋರಿಸಿ ನಗುತ್ತಾ ಹೇಳಿದರು. "ನನ್ನ ಜೀವನದಂತೆ ಹಲ್ಲೂ ವೇಷದ್ದು."

"ಯಾರ ಜೀವನ 'ವೇಷ' ಇಲ್ಲದೆ ಇದೆ? ನೀನು ತಿಳಿಕೊಂಡಿದ್ದಿ...." ಎಂದು ಆರಂಭಿಸಿದ ಗಣೇಶನನ್ನು ಶಂಕರನ್ ತಡೆದರು. "ಸರಿ ಬಾ ಹೊರಗೆ ಹೋಗೋಣ....ಉಮಾ ಸ್ವಲ್ಪ ದಿಂಬು ತೊಗೊಂಡು ಬಾಮ್ಮ.

೩

ಜಗುಲಿಗೆ ಹೋಗಿ ಚೌಕದಿಂದ ಅದನ್ನು ಗುಡಿಸಿ ಇಬ್ಬರೂ ಮಲಗಿದರು. ಉಮಾ ಇಬ್ಬರಿಗೂ ಒಂದೊಂದು ದಿಂಬನ್ನೂ ಬೀಸಣಿಗೆಯನ್ನೂ ತಂದು ಕೊಟ್ಟಳು ಸ್ವಲ್ಪ ಹೊತ್ತು ಮೌನದಿಂದಿದ್ದು ಶಂಕರನ್ ಹೇಳತೊಡಗಿದರು.

"ಚಿಕ್ಕ ವಯಸ್ಸಿನಲ್ಲಿ ನನ್ನ ಇಷ್ಟದಂತೆ, ನನ್ನ ಮನೋಧರ್ಮದಂತೆ ಬಾಳಬೇಕೆಂದು ನೆನೆಸಿದ್ದು ನಿಜ. ಆದರೆ ಅದೂನೂ ಮತ್ತೊಬ್ಬರು ಮಾಡಿದಂತೆ ಮಾಡಕೂಡದು. ಮಾಡದೆ ಇರುವುದನ್ನು ಮಾಡಬೇಕು ಎನ್ನುವ ಆಸೆಗೆ ಹೋಗಿ, ಕಡೆಗೆ ಹಾಗೆ ಇರುವುದೇ ಒಂದು ನೀತಿಯಾಗಿ, ನನ್ನ ಜೀವನಸೂತ್ರವಾಗಿ ಕಾಲ ಕಳೆದುಹೋಯಿತು. ಒಂದು ಪರಿಸ್ಥಿತಿಯಲ್ಲಿ ನಾನು ಹೀಗೆಯೇ ನಡೆದುಕೊಳ್ಳುತ್ತೇನೆ ಎಂದು ಹೇಳುವಷ್ಟರವಟ್ಟಿಗೆ ನನ್ನ ಗುಣವಿಶೇಷಕ್ಕೆ ಒಂದು ಎಲ್ಲೆ ಉಂಟಾಗಿತ್ತು. ಮನುಷ್ಯನ ಚರಿತ್ರೆಯನ್ನು ನೋಡಿದರೆ, ಆರಂಭ ಕಾಲದಿಂದಲೂ ತೊಂಬತ್ತು ಜನ ಒಂದು ವಿಧವಾದರೆ, ಹತ್ತು ಜನ ಅದನ್ನು ವಿರೋಧಿಸಿ ಬೇರೆ ವಿಧವಾಗಿದ್ದರು. ಆ ಹತ್ತು ಜನ ಆ ಕಾಲಪರಿಸ್ಥಿತಿಗೆ ತಕ್ಕಂತೆ ಹೇಗೆ ಎದುರಿಸಿದರೋ ಹಾಗೇನೇ ಈಗಿನ ಕಾಲಪರಿಸ್ಥಿತಿಗೂ ತಕ್ಕಂತೆ ಎದುರಿಸಿಕೊಂಡು, ನಾನಿದ್ದೇನೆಂದು ನನಗೆ ಈಗ ಅನ್ನಿಸುತ್ತದೆ...."

ಬೀಸಿಕೊಂಡೇ ಶಂಕರನ್ ಹೇಳುವುದನ್ನು ಕೇಳುತ್ತಿದ್ದ ಗಣೇಶನ್ ಬೀಸಣಿಗೆಯನ್ನು ಕೆಳಗೆ ಇಟ್ಟು ಎದ್ದು ಕೂತರು.

"ನಿನ್ನ ಮಟ್ಟಿಗೆ ನೀನು ಹೇಗೆ ಬಾಳಬೇಕೆಂದು ಎಣಿಸಿದ್ದೆಯೊ ಹಾಗೆಲ್ಲಾ ಬಾಳಿದೆ. ಆದರೆ ನೀನು ಸ್ವಲ್ಪ ಹೊತ್ತಿಗೆ ಮುಂದೆ ಹೇಳಿದಂತೆ 'ವೇಷದ ಜೀವನ' ಎನ್ನುವುದು ನನಗೇ ಸರಿ. ನನಗೆ ಈಗ ನಾನು ಹಾಕಿಕೊಂಡಿರುವ ವೇಷದಲ್ಲಿ ಸ್ವಲ್ಪ ಕೂಡ ನಂಬಿಕೆಯಿಲ್ಲ....ನಾನು ಯಾರಿಗೂ ಯಾವ ಕೆಡುಕನ್ನೂ

ಬಯಸಿಲ್ಲ. ಆದರೆ ದೇವರು ಎಂದು ಒಬ್ಬ ಇದ್ದರೆ ಅವನು ಯಾಕೆ ನನ್ನನ್ನು ಇಷ್ಟು ಶೋಧಿಸುತ್ತಾನೆ....?"

ಶಂಕರನ್ ಮೃದುವಾಗಿ ನಕ್ಕರು.

"ಯಾಕೆ ನಗುತ್ತೀ? ನಾನು ನಿಜವಾಗಿಯೂ ಹೇಳುತ್ತಿದ್ದೇನೆ. ನನ್ನ ಮನಸ್ಸಿನಲ್ಲಿ ಸಾವಿರಾರು ಪ್ರಶ್ನೆಗಳು ಏಳುತ್ತಿವೆ....ನೀನು ಮೂವತ್ತು ವರ್ಷಕ್ಕೆ ಮುಂಚೆ ಕೇಳಿದ ಅವೇ ಪ್ರಶ್ನೆಗಳನ್ನು ನಾನು ಸ್ವಲ್ಪಕಾಲ ಕಳೆದು ಕೇಳುತ್ತಿದ್ದೇನೆ ಅಷ್ಟೆ."

"ನಾನು ಮೂವತ್ತು ವರ್ಷಕ್ಕೆ ಮುಂಚೆ ಕೇಳಿದ್ದು ಹೆಚ್ಚಲ್ಲ ಮನುಷ್ಯ ಜಾತಿ ಎಷ್ಟು ಹಳೆಯದೋ ಅಷ್ಟೇ ಹಳೆಯದು ಈ ಪ್ರಶ್ನೆಗಳೂ. ಪ್ರಶ್ನೆ ಪ್ರಶ್ನೆ ಯಾಗಿಯೇ ಉಳಿದಿರುವುದರಿಂದ ಪ್ರಪಂಚದ ಚರಿತ್ರೆ ಸ್ವಾರಸ್ಯವಾಗಿದೆ."

"ಮಾವಾ ಬನ್ನಿ...." ಎಂದು ಗಣೇಶನ್ ಯಾರನ್ನೋ ಕರೆದದ್ದನ್ನು ಕೇಳಿ ಶಂಕರನ್ ಆ ಕಡೆ ನೋಡಿದರು.

ಕಪ್ಪು ದೇಹ. ಹಣೆಯಲ್ಲಿ ಚಂದನತಿಲಕ, ಕುಂಕುಮ, ಕಚ್ಚೆಪಂಚೆ ಕಿವಿ ಯಲ್ಲಿದ್ದ ವಜ್ರದ ಕಡುಕು ಕಪ್ಪಿನ ಹಿನ್ನೆಲೆಯಲ್ಲಿ ಇನ್ನೂ ಹೊಳೆಯಿತು. ಹೃದಯವನ್ನು ಆಳವಾಗಿ ನೋಡುವ ತೀಕ್ಷ್ಣವಾದ ಕಣ್ಣುಗಳು ಶಂಕರರ ಮನಸ್ಸಿನಲ್ಲಿ ಮಾಸಿದ್ದ ಯಾವುದೋ ನೆನಪು ಮಸುಕಾಗಿ ಹೊಳೆಯಿತು.

ವಯಸ್ಸು ಎಪ್ಪತ್ತಿರಬಹುದು ಅಥವಾ ಇನ್ನೂ ಹೆಚ್ಚಿರಬಹುದು. ಗ್ರಾಮ ದಲ್ಲಿದ್ದ ಮುದುಕರ ವಯಸ್ಸನ್ನು ನಿರ್ಣಯಿಸಿ ಹೇಳುವುದು ಸಾಧಾರಣ ವಿಷಯವಲ್ಲ.

ಜಗುಲಿಯ ಪಕ್ಕದಲ್ಲಿ ನಿಂತ ಮುದುಕರು ಶಂಕರರನ್ನು ಯಾರೆಂದು ತಿಳಿಯ ಲೋಸುಗ ಹಣೆಯಲ್ಲಿ ಕೈಯಿಟ್ಟು ದೃಷ್ಟಿಸಿ ನೋಡಿದರು.

"ಶಂಕರನ್ ಅಣ್ಣ" ಎಂದು ಗಣೇಶನ್ ಮುದುಕರ ಹತ್ತಿರ ಹೇಳಿದ. ಅಣ್ಣನ ಕಡೆ ತಿರುಗಿ "ಸುಂದರೇಶ ಮಾವ...."

ಸುಂದರೇಶ ಮಾವ!—ಮನಸ್ಸನ್ನು ಮೂವತ್ತು ವರ್ಷಗಳ ಹಿಂದೆ ತಿರುಗಿಸಿ ನೆನಪಿನ ಕಣಜವನ್ನು ಕೆದಕಿದರು ಶಂಕರನ್. ಅನೇಕ ವಿಧವಾದ ನೆನಪುಗಳು ಅಲೆಯಂತೆ ತೇಲಿಬಂದುವು. ಆಗ ಅವರಿಗೆ–ಸುಂದರೇಶ ಮಾವನಿಗೆ–ನಲವತ್ತು ವರ್ಷವಿರಬಹುದು. ಆ ಕಾಲದಲ್ಲೇ ತಮ್ಮ ಚಿಂತನೆಗಳಿಗೆ ಕಾರಣರಾಗಿದ್ದ ಗುರು ಅವರು! ಹೊರನೋಟದಲ್ಲಿ ಸಮಾಜದ ಕಟ್ಟುನಿಟ್ಟುಗಳನ್ನು ಮೀರ ದಂತಿದ್ದರೂ ಅವರ ಮನಸ್ಸಿನ ವಿಚಾರಗಳು ವಾದವಿವಾದಗಳು ತಮಗೂ

ಅವರಿಗೂ ಮಾತ್ರ ನಡೆದ ರಹಸ್ಯ. ಅವರ ಜೊತೆ ಆ ಕಾಲದಲ್ಲಿ ಎಷ್ಟು ಚರ್ಚೆಗಳು, ಸಂಶೋಧನೆಗಳು!.... ಒಂದೊಂದಾಗಿ ಅವರ ನೆನಪಿಗೆ ಬಂದುವು.

ಅವರು ಆ ಕಾಲದಲ್ಲಿ ಆಗಾಗ್ಗೆ ಹೇಳುತ್ತಿದ್ದದ್ದು ಶಂಕರರ ಮನಸ್ಸಿನಲ್ಲಿ ಮಿಂಚಿತು. "ಒಬ್ಬ ಮನುಷ್ಯ ಹೇಗಿದ್ದರೂ ಸರಿ, ಅವನು ಮನುಷ್ಯ; ಅವನು ಹಾಗೆ ಇರುವುದೇ ಅವನ ಮಟ್ಟಿಗೆ ಅವನ ಜೀವನಕ್ಕೂ ಅದೇ ಒಂದು ನ್ಯಾಯ ವಾಗುತ್ತದೆ. ಒಬ್ಬೊಬ್ಬನೂ ತಾನೇ ಧರ್ಮವನ್ನು ಕಾಪಾಡುವವ ಎಂದು ನೆನೆಸಿಕೊಂಡಿದ್ದೇ–ಪ್ರಪಂಚದ ಮುಕ್ಕಾಲು ಭಾಗ ಜಗಳಕ್ಕೆ ಕಾರಣ!"

"ಏನು ಶಂಕರಾ, ಹಾಗೆ ಭ್ರಮಿಸಿ ನೋಡುತ್ತಿದ್ದಿ!—ಈಗ ಏನು ಮಾಡಿ ಕೊಂಡಿದ್ದಿ?" ಎಂದು ಕೇಳುತ್ತಾ ಜಗುಲಿಯಲ್ಲಿ ಕುಳಿತರು ಸುಂದರೇಶನ್. ಅವರ ಊರುಗೋಲನ್ನು ತೆಗೆದುಕೊಂಡು ತನ್ನ ಬದಿಯಲ್ಲಿ ಇಟ್ಟುಕೊಂಡ ಗಣೇಶನ್.

"ಎಲ್ಲೆಲ್ಲೊ ಇದ್ದೆ, ಹೇಗೆ ಹೇಗೊ ವೇಷ ಹಾಕಿದೆ. ಈಗ ಆ ವೇಷವನ್ನೆಲ್ಲಾ ತೆಗೆದು ತಮ್ಮನ ಜೊತೆ ನೆಮ್ಮದಿಯಾಗಿರಲು ಇಲ್ಲಿಗೆ ಬಂದೆ."

ಸುಂದರೇಶನ್ ನಸುನಕ್ಕರು. "ಕಣ್ಣಿಗೆ ಕಾಣದ ದೇಶದಲ್ಲಿ ವೇಷಹಾಕದೆ ನೆಮ್ಮದಿಯಾಗಿರಬಹುದೆ ಹೊರತು, ಗೊತ್ತಿರುವ ಜಾಗದಲ್ಲಿ ವೇಷ ಹಾಕಿ ತಾನೆ ಆಗಬೇಕು? ವೇಷ ಹಾಕಿದ ಮೇಲೆ ನೆಮ್ಮದಿ ಎಲ್ಲಿರುತ್ತದೆ?"

ಸುಂದರೇಶ್ ಮಾವ ಬದಲಾಯಿಸೇ ಇಲ್ಲ. ಕೃತ್ರಿಮವಾದ ಈ ಜಗತ್ತಿಗಾಗಿ ಅವರು ಹೇಳುವಂತೆ ವೇಷಗಳನ್ನು ಹಾಕಿದರೂ ಅವರ ವಿಚಾರಗಳು ತಾವು ಅಂದು ಅರಿತಂತೆ ಇನ್ನೂ ಹಾಗೇ ಇವೆ. ಅವರು ಹೇಗೆಲ್ಲಾ ಬಾಳಬೇಕೆಂದು ಅವರು ಎಣಿಸಿದ್ದರೂ ಹಾಗೆಲ್ಲಾ ಬಾಳಲಾಗದೆ, ಸಮಾಜಕ್ಕೆ ಒಪ್ಪುವಂತೆ ಬಾಳಿದ ಸ್ಥಿತಿಯಲ್ಲಿ, ಅವರ ಭಾವನೆಗಳು ಇನ್ನೂ ಗುರಿಮುಟ್ಟದಿರುವುದರಿಂದ ಅದರಲ್ಲಿ ಅವರಿಗೆ ಇನ್ನೂ ವಿಶ್ವಾಸ ಉಂಟು. ಗುರಿಯನ್ನು ಸಾಧಿಸಿ ಬಾಳಿದ ತಮ್ಮ ಬೇಸರವನ್ನು ಅವರ ಬಳಿ ಹೇಳಬಹುದಾ?

"ಉಮಾ....ಸ್ವಲ್ಪ ನೀರು ತೊಗೊಂಡು ಬಾಮ್ಮ" ಎಂದು ಒಳಗೆ ನೋಡಿ ಹೇಳಿದರು ಸುಂದರೇಶನ್.

"ನಿನ್ನ ತಮ್ಮನಿಗೆ ಇರುವ ನೆಮ್ಮದಿಯನ್ನು ನೋಡಿದಿಯಾ?"

"ಅದರ ವಿಷಯವಾಗೇ ಮಾತಾಡುತ್ತಿದ್ದೆವು."

"ಮಾತಾಡಿ ಏನು ಪ್ರಯೋಜನ. ಉಪಯೋಗವಾಗುವ ಯಾವುದಾದರೂ ದಾರಿಯನ್ನು ನೋಡಿ!"

ಶಂಕರರಿಗೆ ಅರ್ಥವಾಗಲಿಲ್ಲ. ತಮ್ಮಿಂದ ಏನುಮಾಡಲು ಸಾಧ್ಯ?

ಉಮಾ ನೀರು ತಂದಳು. "ದೊಡ್ಡಪ್ಪ ಬಂದಿರುವ ಸಂತೋಷದಲ್ಲಿ ಒಂದು ಸುತ್ತು ದಪ್ಪ ಆದೆಯೆಂದು ಕಾಣುತ್ತದೆ...." ಎಂದರು ಸುಂದರೇಶನ್ ಅವಳು ನಗು ಬೀರಿದಳು.

"ನಿಮ್ಮ ದೊಡ್ಡಪ್ಪನ ವಿಷಯವಾಗಿ ನಿಮಗೆಲ್ಲಾ ಚೆನ್ನಾಗಿ ಗೊತ್ತಿಲ್ಲದಿದ್ದರೆ ನಾನು ಹೇಳ್ತೀನಿ ಕೇಳು. ಅವನನ್ನು ಆ ಕಾಲದಿಂದಲೇ ಬಲ್ಲೆ. ನಿಮ್ಮಪ್ಪ ಒಬ್ಬ ಹೇಡಿ, ನಾನೂ ಒಬ್ಬ ಹೇಡಿ. ಅಸಾಧ್ಯ ಧೈರ್ಯ ನಿಮ್ಮ ದೊಡ್ಡಪ್ಪನಿಗೆ ಮಾತ್ರ ಬಂಧವೂ ಬೇಡ, ಪಾಶವೂ ಬೇಡ ಎಂದು ಹೇಳಿಬಿಟ್ಟು ಹೋಗುವ ಧೈರ್ಯ ಯಾರಿಗೆ ಬರುತ್ತದೆ?"

"ಅವಳ ಹತ್ತಿರ ಹೋಗಿ....ಇದೆಲ್ಲಾ ಏನು ಮಾವ?" ಎಂದ ಗಣೇಶನ್.

"ನೀನು ಸುಮ್ಮನಿರೊ....ನನಗಾದರೂ ಮಾತಾಡಕ್ಕೆ ಧೈರ್ಯ ಇದೆ. ನಿನಗೆ ಅದೂ ಇಲ್ಲ. ಹೆದರಿ ಹೆದರಿ ಸಾಯತ್ತಾನೆ. ಅವಳೂ ತಿಳಿಕೊಬೇಕೂಂತನೇ ಹೇಳ್ತೀದೀನಿ...."

"ನಿಮ್ಮ ಪಾಡಿಗೆ ನೀವು ಮಾತಾಡ್ತಿದ್ದರೆ, ದೊಡ್ಡಪ್ಪನಿಗೆ ಎಷ್ಟು ಆಯಾಸವೊ? ಮಲಗಬೇಕೊ ಏನೊ...." ಎಂದಳು ಉಮಾ.

"ನೋಡಿದಿಯೇನೊ ಶಂಕರಾ, ನಿನ್ನ ಹುಡುಗಿಗೆ ನಿನ್ನ ಮೇಲೆ ಎಷ್ಟು ಅಕ್ಕರೇಂತ? ನಿನ್ನ ದೊಡ್ಡಪ್ಪನ ನಿದ್ರೇನ ನಾನು ಕೆಡಿಸಲಿಲ್ಲ ತಾಯಿ.... ಮಹಾರಾಣಿ ನಾನು ಹೋಗಿ ಆಮೇಲೆ ಬರ್ತೀನಿ...."

"ನಿಮ್ಮನ್ನು ಯಾರು ಹೋಗಕ್ಕೆ ಬಿಡ್ತಾರೆ? ನಾನು ತಲೆದಿಂಬನ್ನು ತರ್ತೀನಿ, ನೀವೂ ಇಲ್ಲೇ ಮಲಗಿ. ಬಿಸಿಲಲ್ಲಿ ಹೋಗದಿದ್ದರೆ ಪ್ರಪಂಚ ಮುಳುಗಿ ಹೋಗತ್ತಾ!"

"ಇಲ್ಲ, ನಾನು ಹೋಗಿ ಸಾಯಂಕಾಲ...."

ಅವರು ಹೇಳಿ ಮುಗಿಸುವುದರೊಳಗೆ ಉಮಾ, ಗಣೇಶನ ಪಕ್ಕದಲ್ಲಿದ್ದ ಸುಂದರೇಶನ ಊರಗೋಲನ್ನು ತೆಗೆದುಕೊಂಡು ಒಳಗೆ ಹೋಗಿಬಿಟ್ಟಳು.

"ಗಣೇಶಾ....ನೋಡು ನಿನ್ನ ಮಗಳು ಮಾಡೊ ಚೇಷ್ಟೆನಾ...."

ಸುಂದರೇಶ ಮಾವನಿಗೆ ಒಂದು ತಲೆದಿಂಬನ್ನೂ ಬೀಸಣಿಗೆಯನ್ನೂ ತಂದು ಕೊಟ್ಟಳು ಉಮಾ. ಅವರೂ ಜಗುಲಿಯಲ್ಲಿ ಒರಗಿದರು.

ಶಂಕರನ್ ಕಣ್ಣುಬಿಟ್ಟಾಗ, ತಾವು ಮಾತ್ರ ಮಲಗಿರುವುದನ್ನು ಗಮನಿಸಿದರು. ಗಣೇಶನೂ ಸುಂದರೇಶ ಮಾವನೂ ಹೋಗಿಬಿಟ್ಟಿದ್ದರು. ಆಯಾಸ

ವಾಗಿದ್ದರಿಂದ ತುಂಬ ಹೊತ್ತು ಮಲಗಿಬಿಟ್ಟರೇನೊ ಕತ್ತಲೆಯಾಗತೊಡಗಿತ್ತು.

ಬೀದಿಯಲ್ಲಿ ಮೀನಾಳೂ ಅವಳ ವಯಸ್ಸಿನ ಇನ್ನೂ ಕೆಲವು ಹುಡುಗಿಯರೂ 'ಕುಂಟೆಬಿಲ್ಲೆ' ಆಡಿಕೊಳ್ಳುತ್ತಿದ್ದರು. ಅಮ್ಮು ಬೆರಳನ್ನು ಚೀಪುತ್ತಾ ಆಟ ನೋಡುತ್ತಿದಳು.

"ಅಯ್ಯ....ಸೌಖ್ಯನಾ."

ಶಂಕರನ್ ತಿರುಗಿ ನೋಡಿದರು. ರಂಗನಾಥ ಕೋನಾರ್!

"ನೀನೇ ಈಗಲೂ ಹಸು ನೋಡಿಕೊಳ್ತೀಯಾ?"

"ಹೌದು ಅಯ್ಯ, ನಮ್ಮ ಮಗ ಪಟ್ಟಣಕ್ಕೆ ಓಡಿಹೋಗಿಬಿಟ್ಟನಲ್ಲ."

ಈ ಸುದ್ದಿಯನ್ನು ಕೇಳಿದಾಗ ಅವರಿಗೆ ಸಂಕಟವಾಯಿತು. ತಾನು ಓಡಿ ಹೋಗಿದ್ದಕ್ಕೂ ರಂಗನಾಥ ಕೋನಾರ್ ಮಗ ಓಡಿ ಹೋಗಿದ್ದಕ್ಕೂ ಏನು ವ್ಯತ್ಯಾಸ?

ಅನುಭವದಲ್ಲಿ ವಯಸ್ಸಾದ ಆ ಮುದುಕ ಶಂಕರರ ಮನಸ್ಸಿನ ಸಂಕಟವನ್ನು ಅರಿತಿರಬೇಕು. ಮಾತನ್ನು ಬದಲಾಯಿಸಿದ.

"ಅಯ್ಯ ಈಗ ಎಲ್ಲಿದ್ದೀರಾ?"

"ಉತ್ತರದ ಕಡೆ....ನಿನ್ನ ಸಂಸಾರ ಸೌಖ್ಯವಾಗಿದೆಯಾ...."

"ಮೊದಲಿನವಳು ತೀರಿಹೋದಳು. ಎರಡನೆಯವಳು ಯಾವಾಗಲೂ ಜಗಳ ಕಾಯುತ್ತೆ?" ಸರಿ ಬರಲಾ?

ಜಗುಲಿಯಿಂದ ಇಳಿದು ಅವರು ಒಳಗೆ ಹೋದಾಗ ನಡುಮನೆಯ ಪಕ್ಕದಲ್ಲಿ ಬಾಬು ಕುಳಿತಿದ್ದ. ಉಮಾ ಅವನಿಗೆ ಕಥೆ ಹೇಳುತ್ತಿದ್ದಳು. ಶಂಕರರನ್ನು ನೋಡಿದ ಕೂಡಲೆ, ಅವಳು ಎದ್ದಳು. "ಏನಮ್ಮಾ....ತುಂಬ ಹೊತ್ತು ಮಲಗಿ ಬಿಟ್ಟೆಯಲ್ಲಾ, ಎಬ್ಬಿಸಬಾರದಿತ್ತಾ?

"ಆಯಾಸವಾಗಿ ಮಲಗಿದ್ದರಿಂದ ಏಳಿಸೋದು ಬೇಡವೆಂದು ಸುಮ್ಮಗಿದ್ದು ಬಿಟ್ಟೆ....ಹಾಲು ಕುಡಿತೀರಾ, ಕಾಫಿನಾ?...."

"ಕಾಫಿ. ಅಪ್ಪಾ ಎಲ್ಲಿ?"

"ದೇವಸ್ಥಾನಕ್ಕೆ ಹೋಗಿದ್ದಾರೆ" ಎಂದು ಹೇಳುತ್ತಾ ಒಳಗೆ ಹೋದಳು. ಶಂಕರನ್ ಬಾಬು ಪಕ್ಕದಲ್ಲಿ, ಹೋಗಿ ಕುಳಿತರು.

"ಯಾವ ಕಥೆ ಕೇಳ್ತಿದ್ದೆ?"

"ಧ್ರುವನ ಕಥೆ....ನಿಮಗೆ ಗೊತ್ತಾ?" ಉಮಾ ಕಾಫಿ ತಂದುಕೊಟ್ಟಳು.

"ನೀವೆಲ್ಲಾ ಏನು ಕುಡಿತೀರಿ, ಕಾಫಿನಾ ಹಾಲಾ?"

"ನನಗೂ ಅಮ್ಮನಿಗೂ ಕಾಫಿ, ಮಿಕ್ಕವರಿಗೆಲ್ಲಾ ಹಾಲು."

"ಧ್ರುವನ ಕಥೆ ಗೊತ್ತ, ದೊಡ್ಡಪ್ಪ, ನಿನಗೆ?" ಅವನ ತರ ನಾನೂ ತಪಸ್ಸು ಮಾಡಿ....ಅವನು ನಿಲ್ಲಿಸಿದ.

ಅಷ್ಟರಲ್ಲಿ ದೊಡ್ಡಪ್ಪ ಎತ್ತಿ ಕುಡಿಯಲು ಪ್ರಯತ್ನಿಸಿ ಕಾಫಿಯನ್ನು ಮೈಮೇಲೆ ಚೆಲ್ಲಿಕೊಂಡಿದ್ದನ್ನು ಗಮನಿಸಿ ನಗುತ್ತಾ ಉಮಾ ಹೇಳಿದಳು. "ಸುಮ್ಮಗೆ ಕಚ್ಚಿ ಕುಡಿಯಿರಿ, ಪರವಾಗಿಲ್ಲ."

'ತಪಸ್ಸು ಮಾಡಿ...." ಅದನ್ನು ಮುಗಿಸಲಿಲ್ಲವಲ್ಲ ಹೇಳು." ಅವರು ಕಾಫಿ ಲೋಟವನ್ನು ಕೆಳಗಿಟ್ಟರು.

"ಧ್ರುವನ ತರ ನಾನೂ ತಪಸ್ಸು ಮಾಡಿ, ದೇವರು ನನ್ನೆದುರಿಗೆ ಬಂದರೆ, 'ನನ್ನ ಮೇಲೆ ಏನು ಕೋಪ? ಯಾಕೆ ಹೀಗೆ ನನ್ನನ್ನು ಕೂರಿಸಿದ್ದಿ' ಅಂತ ಕೇಳ್ತೀನಿ."

ಶಂಕರನ್ ಇದನ್ನು ನಿರೀಕ್ಷಿಸಿರಲಿಲ್ಲ! ಕೈಕಾಲು ಸರಿಯಾಗಬೇಕೆಂದೂ ಈ ಹುಡುಗ ಆಸೆಪಡಲಿಲ್ಲ! ಇವನಿಗೆ ಕಾರಣವನ್ನು ತಿಳಿಯುವುದರಲ್ಲಿ ಆಸೆ!

"ಸುಂದರೇಶ ಮಾವ, ನಿಮ್ಮನ್ನು ಕಾಫಿ ಕುಡಿದ ಮೇಲೆ ಮನೆಗೆ ಬರಲು ಹೇಳಿದ್ದಾರೆ...." ಎಂದು ಹೇಳಿದಳು ಉಮಾ.

ಶಂಕರನ್ ಸುಂದರೇಶನನ್ನು ನೋಡಲು ಹೊರಟರು. ದಾರಿಯಲ್ಲಿ ಗಣೇಶನನ್ನು ಸಂಧಿಸಿದರು.

"ಸುಂದರೇಶ ಮಾವ ಬರಹೇಳಿದರಂತ ಉಮಾ ಹೇಳಿದಳು. ನೋಡಿಬಿಟ್ಟು ಬರ್ತೀನಿ."

"ಅವರ ಮನೆ ಗೊತ್ತು ತಾನೆ...."

"ಗೊತ್ತು ಗೊತ್ತು. ಹಳೆ ಮನೇನೆ ತಾನೆ; ದೇವಸ್ಥಾನದ ಪಕ್ಕದಲ್ಲಿ...."

"ನಾನು ಅಲ್ಲಿಂದಲೇ ಬರ್ತಿದೀನಿ. ದೇವಸ್ಥಾನಕ್ಕೆ ಹೋಗಿ ಬರ್ತಾ ನೋಡಿಕೊಂಡು ಬಂದೆ. ನನ್ನ ಕೈಲೂ ಹೇಳಿದರು ನೀನು ಬರಬೇಕೂಂತ....ತುಂಬ ಹೊತ್ತು ಮಾಡಬೇಡ. ಊಟಕ್ಕೆ ಬಂದುಬಿಡು...." ಎಂದು ಹೇಳಿ ಮುಂದೆ ನಡೆದರು ಗಣೇಶನ್.

(ಮುಂದುವರೆಯುವುದು)

ಗಂಡನ ಅತ್ಯಮೂಲ್ಯ ಕೊಡುಗೆ

ರೇಣು* ವಿಗೆ ಇದು ಮತ್ತೊಂದು ಆಘಾತವಾಗಿತ್ತು. ಅನಿರೀಕ್ಷಿತವಾಗಿ ವಿಧವೆಯಾದ ಆಕೆ–ಆಕೆಯ ಗಂಡ ರಸ್ತೆಯ ಅಪಘಾತವೊಂದರಲ್ಲಿ ಮೃತನಾಗಿದ್ದ. ತನ್ನ ಗಂಡನ ತೇವಣಿಯನ್ನು ಪಡೆದುಕೊಳ್ಳುವ ಸಲುವಾಗಿ ಭವಿಷ್ಯನಿಧಿ ಕಮಿಷನರನ್ನು ಸಂಪರ್ಕಿಸಿದಳು. ಆದರೆ, ಅದನ್ನು ಆಕೆಯ ಅತ್ತೆಯ ಹೆಸರಿಗೆ ಬರೆಯಲಾಗಿತ್ತು. ಆ ಅತ್ತೆಯೂ ತೀರಿಕೊಂಡಿದ್ದಳು.

ತೇವಣಿಯನ್ನು ಪಡೆದುಕೊಳ್ಳುವ ಸಲುವಾಗಿ ಆಕೆ ನ್ಯಾಯಾಲಯದ ಮೊರೆ ಹೋಗಬೇಕೆಂದು ಆಕೆಗೆ ತಿಳಿಸಲಾಯಿತು. ಹೆಚ್ಚಿನ ಕ್ರಮಬದ್ಧ ಶಿಕ್ಷಣವನ್ನೇನು ಪಡೆದಿರದಿದ್ದ ನಾಚಿಕೆಯ ಸ್ವಭಾವದ ಗೃಹಿಣಿಗೆ ಇದೊಂದು ದಿಗ್ಭ್ರಮೆಗೊಳಿಸುವಂಥ ಹೆಜ್ಜೆಯಾಗಿತ್ತು ಅದೃಷ್ಟವಶಾತ್, ರಾಜಕೀಯವಾಗಿ ಪ್ರಭಾವಶಾಲಿಯಾಗಿದ್ದಂಥ ಪರಿಚಿತ ವ್ಯಕ್ತಿಯೊಬ್ಬರು ಆಕೆಯ ನೆರವಿಗೆ ಬಂದರು. ಹಾಗೂ ರೇಣುವಿಗೆ ಆಕೆಯ ಪಾಲಿನ ಹಣವನ್ನು ಸಂದಾಯ ಮಾಡುವಂತೆ ಅಧಿಕಾರಶಾಹಿಯ ಮನವೊಲಿಸಿದರು. ಈ ಮಧ್ಯೆ, ರೇಣು ಸಾಕಷ್ಟು ಆತಂಕಕ್ಕೂ ತಲೆನೋವಿಗೂ ತುತ್ತಾಗಿದ್ದಳು.

ರೇಣುವಿನ ಪತಿಗಿಂತಲೂ ಹೆಚ್ಚು ವ್ಯವಹಾರಶೀಲನಾಗಿದ್ದ ಅವತಾರ್ ಕೌಲ್ ತನ್ನ ಆರ್ಥಿಕ ವ್ಯವಹಾರಗಳನ್ನು ವ್ಯವಸ್ಥೆಗೊಳಿಸುವ ಸಲುವಾಗಿ ವಕೀಲರೊಬ್ಬರ ನೆರವನ್ನು ಪಡೆದಳು. ತನ್ನ ಪತ್ನಿಯೇನಾದರೂ ವಿಧವೆಯಾದಲ್ಲಿ, ಆಕೆ ಹಣಕಾಸಿನ ಚಿಂತೆಗಳಿಂದ ಮುಕ್ತಳಾಗಿರುವಂತಿರಬೇಕೆಂಬುದು ಆತನ ಉದ್ದೇಶವಾಗಿತ್ತು. ಈ ಸಂಬಂಧವಾಗಿ ನಡೆದ ಎಲ್ಲ ಭೇಟಿಗಳಿಗೂ ಆತನು ತನ್ನ, ಹೆಂಡತಿಯನ್ನು ಕರೆದೊಯ್ದಿದ್ದ ಹಾಗೂ ಕುಟುಂಬದ ಹಣಕಾಸಿನ ಸ್ಥಿತಿಯ ಬಗ್ಗೆ ಆಕೆಗೆ ಸಂಪೂರ್ಣ ಮಾಹಿತಿಯನ್ನೊದಗಿಸಿದ್ದ. ತನ್ನ ಗಂಡನನ್ನು ಕಳೆದುಕೊಂಡಾಗ, ತನ್ನ ಕುಟುಂಬವನ್ನು ಚೆನ್ನಾಗಿ ನೋಡಿಕೊಳ್ಳಲು ಆಕೆಗೆ ಸಾಧ್ಯವಾಯಿತು.

ಈ ಇಬ್ಬರು ಗಂಡಂದಿರಿಗೂ ತಮ್ಮ ಹೆಂಡತಿಯರ ವಿಷಯದಲ್ಲಿ ಕಾಳಜಿ

೧೯೮೪ ರ ಮೇ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾಗಿರುವ ಸತ್ಯೇಂದ್ರನಾಥ ಸರ್ಕಾರ್ ಅವರ 'ಎ ಹಸ್ಬೆಂಡ್ ಮೋಸ್ಟ್ ವ್ಯಾಲ್ಯುಯೆಬಲ್ ಗಿಫ್ಟ್' ಎಂಬ ಲೇಖನದ ಅನುವಾದ.

* ಎಲ್ಲ ಹೆಸರುಗಳನ್ನು ಬದಲಾಯಿಸಿದೆ.

ಇದ್ದೇ ಇತ್ತು. ಏನೂ ಅರಿಯದ ಹೆಂಡತಿ, ಯಾವ ಸಿದ್ಧತೆಯೂ ಇಲ್ಲದಂಥ ವಿಧವೆಯಾಗಿ ಬಿಡುತ್ತಾಳೆಂಬ ಸತ್ಯ ತನ್ನ ಪತ್ನಿಯ ಅನುಭವಕ್ಕೆ ಬಾರದಂತೆ ಆಗುವಷ್ಟರ ಮಟ್ಟಿನ ಕಾಳಜಿಯನ್ನು ಕೌಲ್ ತೋರಿದ್ದ. ತಾನು ಕೊಡಬಹುದಾಗಿದ್ದಂಥ ಅತ್ಯಮೂಲ್ಯ ಕೊಡುಗೆ ಇದಾಗಿತ್ತು.

ಈ ಕೊಡುಗೆಗೆ ತನ್ನದೇ ಆದ ಒಂದು ಹೆಸರು ಇದೆ: 'ಆಸ್ತಿ ನಿಯೋಜನೆ' ಎಂಬುದೇ ಆ ಹೆಸರು. ಪ್ರತಿಯೊಬ್ಬನಿಗೂ ತನ್ನದೇ ಆದ 'ಆಸ್ತಿ' ಇರುತ್ತದೆ– ತಾನು ಗಳಿಸಿದ ಭೂಮಿ ಕಾಣಿ ಹಾಗೂ ತನ್ನ ಅನುಭೋಗದಲ್ಲಿರುವ ಒಡವೆ ವಸ್ತುಗಳು ಇವನ್ನು ವಿವರಿಸಲು 'ಆಸ್ತಿ' ಎಂಬ ಈ ಪದವನ್ನು ಬಳಸುತ್ತಾರೆ. 'ಆಸ್ತಿನಿಯೋಜನೆ'ಯಿಂದ ಬಹುಮಟ್ಟಿಗೆ ಎಲ್ಲರಿಗೂ ಲಾಭವೇ ಆಗುತ್ತದೆ. ತನ್ನ ಆಸ್ತಿ ಏನು ಎಷ್ಟು ಎಂಬುದನ್ನು ಸ್ಪಷ್ಟಪಡಿಸುವುದು ಹಾಗೂ ಅತ್ಯಂತ ಹೆಚ್ಚಿನ ಆರ್ಥಿಕ ಲಾಭ ಬರುವಂತೆ ತನ್ನ ಆದಾಯವನ್ನು ನಿಯೋಜಿಸುವುದು ಹಾಗೂ ತೆರಿಗೆ–ಉಳಿತಾಯ ಸಾಧ್ಯವಾಗುವಂತೆ ಮಾಡಿಕೊಳ್ಳುವುದು ಇದರ ಮೊದಲ ಗುರಿ, ಆಸ್ತಿ ಹಕ್ಕುದಾರರಿಗೆ ಅತ್ಯಂತ ಹೆಚ್ಚಿನ ಲಾಭವುಂಟಾಗುವಂತೆ ಹಾಗೂ ಕನಿಷ್ಠತಮವಾದ ನಷ್ಟಉಂಟಾಗುವಂತೆ ಹಾಗೂ ಮನಃಶಾಂತಿ ದೊರೆಯುವಂತೆ ಆಸ್ತಿಯ ವರ್ಗಾವಣೆಗೆ ಅವಕಾಶವನ್ನು ಕಲ್ಪಿಸುವುದು ಇದರ ಎರಡನೆಯ ಗುರಿ.

ಬಹುತೇಕ ಗಂಡಂದಿರಿಗೆ ಈ ಬಗ್ಗೆ ಅಸ್ಪಷ್ಟವಾದ ಅರಿವೇನೋ ಇದ್ದೇ ಇರುತ್ತದೆ. ಆದರೆ, ವೈಧವ್ಯದ ಸಂದರ್ಭದಲ್ಲಿ ಆರ್ಥಿಕವಾಗಿ ಹೇಗೆ ಹೊಂದಾಣಿಕೆಗಳನ್ನು ಮಾಡಿಕೊಳ್ಳಬೇಕೆಂಬ ಬಗ್ಗೆ ತಮ್ಮ ಹೆಂಡತಿಯರೊಂದಿಗೆ ಗಂಭೀರವಾಗಿ ಚರ್ಚಿಸಿರುವಂಥವರ ಉದಾಹರಣೆಗಳು ತೀರ ವಿರಳವಾಗಿರುತ್ತವೆ. "ಇದನ್ನೆಲ್ಲ ಮಾಡಿಯೇ ಇರುತ್ತಾರೆ" ಎಂಬ ಕುರುಡು ನಂಬಿಕೆಯೂ ಕೆಲವು ಹೆಂಡಂದಿರಲ್ಲಿರುತ್ತದೆ.

ನಮಗೆ, ಅದರಲ್ಲಿಯೂ ನಾವು ತರುಣರಾಗಿದ್ದರೆ ಇನ್ನೊಂದು ನಾಳೆ ಎಂಬುದು ಇರುವುದಿಲ್ಲ ಎಂಬುದನ್ನೂ ನಂಬುವುದೂ ಕಷ್ಟದ ಸಂಗತಿಯೇ ಆಗಿರುತ್ತದೆ. ಆದರೆ ನಮಗೆ ಆ ನಾಳೆ ಎಂಬುದು ಇರದೆಯೇ ಹೋಗಬಹುದು: ಸಾವಿರಾರು ಮಂದಿ ಮಹಿಳೆಯರು, ಮುನ್ನೆಚ್ಚರಿಕೆಯನ್ನು ಕೊಡದೆಯೇ ಎರಗುವಂಥ ಅಪಘಾತಗಳಲ್ಲಿ ಹಾಗೂ ಪ್ರಾಣಾಂತಿಕವಾಗಿರುವಂಥ ಕಾಯಿಲೆಗಳಲ್ಲಿ ತಮ್ಮ ಗಂಡಂದಿರನ್ನು ಕಳೆದುಕೊಳ್ಳುತ್ತಿರುತ್ತಾರೆ.

ಅಥವಾ ನಾವು ಹೀಗೂ ಯೋಚಿಸಬಹುದು: "ನಾವು ಕಾಳಜಿ ವಹಿಸ

ಬೇಕಾದಷ್ಟು ಆಸ್ತಿಪಾಸ್ತಿಯೇನು ನಮಗಿಲ್ಲವಲ್ಲ." ಆದರೆ ಶ್ರೀಮಂತರಿಗಿಂತಲೂ ಹೆಚ್ಚಾಗಿ ಸಣ್ಣಪುಟ್ಟ ಆಸ್ತಿ-ಪಾಸ್ತಿಗಳನ್ನುಳ್ಳವರಿಗೇ ಇಂಥ ಆಸ್ತಿ 'ನಿಯೋಜನೆ'ಯ ಅಗತ್ಯ ಹೆಚ್ಚು ಎಂಬುದು ವಾಸ್ತವ ಸಂಗತಿ. ಏಕೆಂದರೆ ತಪ್ಪು ಮಾಡಲು ಇಲ್ಲಿ ಇರುವ ಅವಕಾಶ ಅಷ್ಟು ಸೂಕ್ಷ್ಮವಾಗಿರುವಂಥದು. ಉದಾಹರಣೆಗೆ ೩೬ ವರ್ಷ ವಯಸ್ಸಿನ ಶೋಭಾಳ ಉದಾಹರಣೆಯನ್ನು ತೆಗೆದುಕೊಳ್ಳೋಣ. ಆಕೆಯ ಪತಿ ಅಶೋಕ ಅನಿರೀಕ್ಷಿತವಾಗಿ ಶಸ್ತ್ರಚಿಕಿತ್ಸೆಯ ಮೇಜಿನ ಮೇಲೆಯೇ ಕೊನೆಯುಸಿರನ್ನೆಳೆದ. ತನ್ನ ತಂದೆಗೆ ಸೇರಿದ್ದ ನಿವೇಶನ ಒಂದರಲ್ಲಿ ಅಶೋಕ ಮನೆಯೊಂದನ್ನು ಕಟ್ಟಿದ್ದ ಹಾಗೂ ಅಲ್ಲಿ ಔಷಧಿಗಳ ಅಂಗಡಿಯೊಂದನ್ನು ನಡೆಸುತ್ತಿದ್ದ. ಅಶೋಕನು ಸಾಯುವುದಕ್ಕೆ ಮೊದಲೇ ತೀರಿಕೊಂಡಿದ್ದ. ಅಶೋಕನ ತಂದೆ ಮರಣಶಾಸನವನ್ನೇನೂ ಮಾಡಿ ಹೋಗಿರಲಿಲ್ಲ. ನಿವೇಶನದ ಒಡೆತನವನ್ನು ಅಶೋಕನಿಗೆ ವರ್ಗಾಯಿಸಿರಲಿಲ್ಲ. ಅಶೋಕನ ಸಾವಿನ ತರುವಾಯ ಆತನ ಇಬ್ಬರು ಸೋದರರು ಆ ಮನೆಯ ಮೇಲೆ ತಮಗೂ ಹಕ್ಕಿದೆಯೆಂದು ವಾದಿಸಿದರು. ಈ ವಿವಾದ ಇನ್ನೂ ನ್ಯಾಯಾಲಯದಲ್ಲಿ ಸಿಕ್ಕಿಕೊಂಡಿದ್ದು, ಔಷಧಿಗಳ ಅಂಗಡಿಯನ್ನು ನಡೆಸಿಕೊಂಡು ಬರಲೂ ಶೋಭಾಳಿಗೆ ಸಾಧ್ಯವಾಗಲಿಲ್ಲ. ಮೇಲಾಗಿ ವಕೀಲರ ಶುಲ್ಕವಾಗಿ ಸಾವಿರಾರು ರೂಪಾಯಿಗಳನ್ನು ಸುರಿದ ಬಳಿಕ, ಶಾಲಾ ಕಾಲೇಜುಗಳಲ್ಲಿ ಓದುತ್ತಿರುವ ತನ್ನ ಮೂರು ಮಕ್ಕಳ ಕುಟುಂಬವನ್ನು ಸಾಗಿಸುವುದೂ ಶೋಭಾಳಿಗೆ ಕಷ್ಟಕರವಾಗಿ ಪರಿಣಮಿಸಿದೆ' ಸರಿಯಾಗಿ 'ಆಸ್ತಿ ನಿಯೋಜನೆ' ಮಾಡಿದ್ದರೆ, ಈ ಎಲ್ಲ ಅನಾವಶ್ಯಕ ಚಿಂತೆಗಳಿಗೆ ಅವಕಾಶವೇ ಇರುತ್ತಿರಲಿಲ್ಲ.

ಇದರ ಜವಾಬ್ದಾರಿ ಗಂಡ ಮತ್ತು ಹೆಂಡತಿ ಇಬ್ಬರ ಮೇಲೂ ಇರುತ್ತದೆ. ಕೆಲವು ಮಂದಿ ಹೆಂಡತಿಯರಿಗೆ 'ಆಸ್ತಿನಿಯೋಜನೆ'ಯ ವಿಷಯದಲ್ಲಿ ಆಸಕ್ತಿಯೇ ಇರುವುದಿಲ್ಲ ಎಂಬುದು ನಿಜ. ಆದರೆ ಈ ವಿಷಯದಲ್ಲಿ ಚಿಂತೆಗೊಳಗಾಗದೆ ಇರುವಂಥ 'ವಿಧವೆ' ಯಾರೂ ಇರುವುದಿಲ್ಲ. ದುರದೃಷ್ಟದ ಸಂಗತಿ ಎಂದರೆ, ಜನನ ನಿಯಂತ್ರಣ ಗುಳಿಗೆಗಳಂತೆ, ಆಸ್ತಿನಿಯೋಜನೆ ಹಿಂದಿನಿಂದ ಅನ್ವಯವಾಗುವಂಥದಲ್ಲ. ಗಂಡ-ಹೆಂಡತಿಯರಿಬ್ಬರೂ ಜೀವಂತವಾಗಿದ್ದು ಸಹಕರಿಸುವಂತಿರುವಾಗಲೇ ಕೈಗೊಳ್ಳಬೇಕಾದ ಕ್ರಮ ಇದು. ಇದಕ್ಕೆ ಅವರು ಈ ಐದು ಮೂಲಭೂತ ಕ್ರಮಗಳನ್ನು ಕೈಗೊಳ್ಳಲೇಬೇಕು.

ಕ್ರಮ ಒಂದು: ಇಂದೇ ಈ ಬಾಧ್ಯತೆಯನ್ನು ಅಂಗೀಕರಿಸಿ ಮಧ್ಯಮ ವರ್ಗದ ಕುಟುಂಬವೊಂದರಲ್ಲಿ ಗಂಡ-ಹೆಂಡತಿಯರಿಬ್ಬರೂ ಸಮಾನ ವಯೋ

ಮಾನದವರಾಗಿದ್ದರೆ, ಹೆಂಡತಿಯೇ ಗಂಡನಿಗಿಂತಲೂ ಹೆಚ್ಚು ಕಾಲ ಬದುಕಿರುವ ಸಂಭವವಿದೆ. ಎಚ್ಚರಿಕೆಯಿಂದ ಕೂಡಿದ ನಿಯೋಜನೆ ಆಸ್ತಿ ಮತ್ತು ಹಣಕಾಸಿನ ವಿಷಯಗಳಲ್ಲಿ ಸಮುಚಿತವಾಗಿ ವ್ಯವಹರಿಸಲು ವಿಧವೆಯನ್ನು ತಯಾರುಮಾಡುತ್ತದೆ. ಇತರ ವಿಚಾರಗಳ ಜೊತೆಗೆ, ಕುಟುಂಬದ ಮನೆಯನ್ನೂ ಉಳಿಸಿಕೊಳ್ಳುವಲ್ಲಿ ಅದು ನೆರವಾಗಬಲ್ಲದು; ಹೊಸ ಬಾಳಿಗೆ ಹೊಂದಿಕೊಳ್ಳಲು ವಿಧವೆಗೆ ಹಣಕಾಸಿನ ನೆರವು ದೊರೆಯುವಂತೆ ಮಾಡಬಲ್ಲದು; ಮಕ್ಕಳ ವಿದ್ಯಾಭ್ಯಾಸ ಮತ್ತು ವಿವಾಹಾದಿಗಳಿಗೆ ಅವಕಾಶ ಕಲ್ಪಿಸಿಕೊಳ್ಳುವಂತೆ ಮಾಡಬಲ್ಲದು; ಅನಗತ್ಯವಾದ ವಿವಾದಗಳನ್ನು ಮತ್ತು ಕಾನೂನಿನ ಮೊಕದ್ದಮೆಗಳ ಜಂಜಾಟವನ್ನು ನಿವಾರಿಸಬಲ್ಲದು.

ಕ್ರಮ ಎರಡು: ಸಮರ್ಥ ಸಲಹೆಗಾರರನ್ನು ಆಯ್ದುಕೊಳ್ಳಿ. 'ಆಸ್ತಿ ನಿಯೋಜ'ನೆಯ ಪ್ರಮುಖ ನಿರ್ಧಾರಗಳು 'ನೀವೇ ಮಾಡಿ' ಎನ್ನಬಹುದಾದಂಥ ಯೋಜನೆಗಳಲ್ಲಿ ಬೇರೆ ಬೇರೆ ಬಗೆಯ ವೃತ್ತಿನಿರತ ಸಲಹೆಗಾರರೊಂದಿಗೆ ಸಮಾಲೋಚಿಸಬೇಕಾಗಬಹುದು. ಸಾಮಾನ್ಯವಾಗಿ ಸನ್ನದು ಪಡೆದ ಲೆಕ್ಕಿಗರು (ಚಾರ್ಟರ್ಡ್ ಅಕೌಂಟೆಂಟ್) ಅಥವಾ ವಕೀಲರು ಈ ಯೋಜನೆಯ ಶಿಲ್ಪಿಗಳಾಗಿರುತ್ತಾರೆ. ಆಸ್ತಿಯ ವಿಷಯಗಳ ಬಗ್ಗೆ ಹಾಗೂ ತೆರಿಗೆ ಕಾನೂನುಗಳ ಬಗ್ಗೆ ಇಬ್ಬರೂ ಸಲಹೆ ಕೊಡಬಹುದಾದರೂ ಮರಣ ಶಾಸನಗಳನ್ನು ಬರೆಯುವ ಕೆಲಸವನ್ನು ಅನುಭವಿ ವಕೀಲರು ಮಾತ್ರವೇ ಅತ್ಯುತ್ತಮ ರೀತಿಯಲ್ಲಿ ನಿರ್ವಹಿಸಬಲ್ಲರು.

ಸ್ಥಳೀಯ ಆಸ್ತಿ ನಿಯೋಜನೆ ಸಲಹೆಗಾರರು ಮತ್ತು ವಕೀಲರುಗಳ ಬಗ್ಗೆ ನಿಮ್ಮ ಸ್ನೇಹಿತರಿಂದಾಗಲೀ, ವ್ಯಾಪಾರ ವ್ಯವಹಾರಗಳ ಸಂಗಡಿಗರಿಂದಾಗಲೀ ಮಾಹಿತಿ ಪಡೆಯಿರಿ. ಇಬ್ಬರು ಅಥವಾ ಮೂವರನ್ನು ಖುದ್ದಾಗಿ ಭೇಟಿಯಾಗಿ. ಅವರ ವೃತ್ತಿ ಸಂಬಂಧವಾದ ತಜ್ಞತೆಯ ಬಗ್ಗೆ ವಿಚಾರಿಸುವಾಗ ಸಂಕೋಚಶೀಲರಾಗಬೇಡಿ; ಅವರ ಸಲಹೆ ಪಡೆದಿರುವಂಥ ಕಕ್ಷಿದಾರರ ಹೆಸರುಗಳನ್ನು ತಿಳಿದುಕೊಳ್ಳಿ. ಗಂಡ ಮತ್ತು ಹೆಂಡತಿ ಇಬ್ಬರೂ ಚರ್ಚೆಗಳಲ್ಲಿ ಪಾಲ್ಗೊಳ್ಳುವುದನ್ನು ಇಚ್ಛಿಸುವಂಥ ಸಲಹೆಗಾರರನ್ನು ಆಯ್ದುಕೊಳ್ಳಿ. ಇಂಥ ನಿಯೋಜನೆಯಲ್ಲಿ ಸಾಧಿಸಬೇಕಾಗಿರುವ ಧ್ಯೇಯೋದ್ದೇಶಗಳ ಬಗ್ಗೆ ಒಮ್ಮತಕ್ಕೆ ಬನ್ನಿ.

ಅನೇಕರು ವೆಚ್ಚದ ಬಗ್ಗೆ ತಲೆಕೆಡಿಸಿಕೊಳ್ಳುತ್ತಾರೆ. ಏನಾದರೂ ಮಾಡಬೇಕಾದರೆ ಅದಕ್ಕೆ ವೆಚ್ಚ ಮಾಡಲೇಬೇಕಾಗುತ್ತದೆ; ಏನು ಮಾಡದಿರುವುದಕ್ಕೂ ಬೆಲೆ ತೆರಬೇಕಾಗುತ್ತದೆ. 'ಆಸ್ತಿವಿನಿಯೋಜನೆ'ಯ ವಿಷಯದಲ್ಲಿ

ಏನೂ ಮಾಡದೆ ಇರುವುದಕ್ಕೆ ತೆರಬೇಕಾದ ಬೆಲೆ ದುರಂತಕಾರಿಯೇ ಆಗಬಹುದು.

ಕ್ರಮ ಮೂರು: ಮಾಹಿತಿಗಳನ್ನು ಸಂಗ್ರಹಿಸಿ ಗಂಡ ಮತ್ತು ಹೆಂಡತಿ ಒಟ್ಟಾಗಿ ಸಂಬಂಧ ಪಟ್ಟ ಕಾಗದ ಪತ್ರಗಳನ್ನು ಒಳಗೊಂಡಿರುವ ದಾಖಲೆ ಕಡತವನ್ನು ಒಂದುಗೂಡಿಸಬಹುದು (ಈ ದಾಖಲೆಗಳ ಪಟ್ಟಿಯನ್ನು ಕೊನೆಯಲ್ಲಿ ಕೊಟ್ಟಿದೆ). ನಿಮ್ಮ ಆರ್ಥಿಕ ಪರಿಸ್ಥಿತಿಯ ಚಿತ್ರವನ್ನು ಕಲ್ಪಿಸಿಕೊಳ್ಳಲು ನಿಮ್ಮ ಸಲಹೆಗಾರರು ನಿಮಗೆ ನೆರವಾಗುತ್ತಾರೆ. ಸದ್ಯದ ಆದಾಯ ಏನೆಂಬುದನ್ನು ನಮೂದಿಸಿ. ಕುಟುಂಬಕ್ಕೆ ಪ್ರಮುಖ ಆಧಾರಸ್ತಂಭವಾಗಿರುವ ಗಂಡ ತೀರಿಕೊಂಡರೆ ನಿಮಗೆ ಏನು ಉಳಿದಿರುತ್ತದೆ ಎಂಬುದನ್ನು ಅಂದಾಜು ಮಾಡಿ. ವೆಚ್ಚಗಳ ಸಾರಣಿಯನ್ನು ಸಿದ್ಧಪಡಿಸಿ. ಸಾಲಗಳ ಮರುಪಾವತಿ ಯಾವಾಗ ಆಗಬೇಕಾಗಿದೆ ಎಂಬುದನ್ನು ಗೊತ್ತುಮಾಡಿಕೊಳ್ಳಿ. ಭವಿಷ್ಯನಿಧಿ, ಪಿಂಚಣಿ, ಅನುದಾನ (ಗ್ರಾಚ್ಯುಯಿಟಿ), ಜೀವವಿಮೆ ಮತ್ತು ಇತರ ಹೂಟಿಗಳಿಂದ ಬರಬೇಕಾಗಿರುವ ಹಣವೆಷ್ಟು ಎಂಬುದನ್ನು ಖಚಿತವಾಗಿ ತಿಳಿದುಕೊಳ್ಳಿ.

ತೆರಿಗೆ ಸಂಗ್ರಹಕರು ಇದರಲ್ಲಿ ಎಷ್ಟು ಮೊತ್ತವನ್ನು ತೆರಿಗೆಯ ರೂಪದಲ್ಲಿ ಸೆಳೆದುಕೊಳ್ಳುತ್ತಾರೆಂಬುದನ್ನು ಅಂದಾಜು ಮಾಡುವಂತೆ ನಿಮ್ಮ ಸಲಹೆಗಾರರನ್ನು ಕೇಳಿ. ಈ ಎಲ್ಲ ಕ್ರಮಗಳೂ ಹಣ ಉಳಿತಾಯಕ್ಕೆ ಅಥವಾ ಹಣ ವಿನಿಯೋಗ ವಿಧಾನಗಳನ್ನು ಪುನರ್ ವ್ಯವಸ್ಥೆಗೊಳಿಸಲು ನೆರವಾಗಬಹುದು.

ಕ್ರಮ ನಾಲ್ಕು: ನಿಮ್ಮ ಆಸ್ತಿಯ ಹಂಚಿಕೆಯನ್ನು ಸ್ಪಷ್ಟವಾಗಿ ನಿರೂಪಿಸುವಂತೆ ನಿಮ್ಮ ಮರಣ ಶಾಸನವನ್ನು ಬರೆಯಿರಿ. ಯಾವುದೇ ಸಂದಿಗ್ಧತೆಗೆ ಅಥವಾ ಭವಿಷ್ಯದಲ್ಲಿಯ ಕೈವಾಡಗಳಿಗೆ ಅವಕಾಶ ದೊರೆಯದಂತೆ ನೋಡಿಕೊಳ್ಳಿ. ನಿಮಗೆ ಇಷ್ಟ ಬಂದ ರೀತಿಯಲ್ಲಿ ನಿಮ್ಮ ಆಸ್ತಿಯನ್ನು ವಿಲೇವಾರಿ ಮಾಡಲು ನೀವು ಮರಣಶಾಸನ ಬರೆದಿಡಬೇಕು. ಇಲ್ಲವಾದಲ್ಲಿ ನಿಮ್ಮ ಸಾವಿನ ಬಳಿಕ ದುರಾಸೆಯ ನಿಮ್ಮ ಬಂಧುಗಳಿಗೆ ಕೈವಾಡ ನಡೆಸಲು ಅವಕಾಶ ಮಾಡಿಕೊಡುತ್ತೀರಿ. ಹೀಗಾಗಿ, ನಿಮ್ಮ ಉತ್ತರಾಧಿಕಾರಿಯೆಂದು ನಿಮ್ಮ ಪತ್ನಿಯನ್ನು ನೀವೇ ನಾಮಕರಣ ಮಾಡಿದ್ದರೂ ನಿಮ್ಮ ಭವಿಷ್ಯ ನಿಧಿಗೆ ಆಕೆ ತನ್ನಿಂದ ತಾನೇ ವಾರಸುದಾರಳಾಗುವುದಿಲ್ಲ. ನಿಮ್ಮ ಮರಣಶಾಸನ ಇದನ್ನು ಸ್ಪಷ್ಟಪಡಿಸಬೇಕು. ಅಂತೆಯೇ, ಹೂಟಿಗಳು ಇಬ್ಬರ ಹೆಸರಿನಲ್ಲಿ ಇದ್ದರೂ ಅವುಗಳಿಗೆ ನಿಮ್ಮ ಪತ್ನಿಯ ವಾರಸುದಾರಿಕೆಯನ್ನು ಮರಣಶಾಸನದಲ್ಲಿ ಸ್ಪಷ್ಟವಾಗಿ ಹೇಳಿರಬೇಕು.

ಸಾಮಾನ್ಯವಾದ ಒಂದು ತಪ್ಪೆಂದರೆ, ಒಮ್ಮೆ ಮರಣಶಾಸನವನ್ನು ರಚಿಸಿದ್ದಾಯಿತೆಂದರೆ, ಆ ವಿಚಾರವನ್ನು ಮರೆತುಬಿಡಬಹುದು ಎಂಬುದು. ಜನರು

ಮತ್ತು ಕುಟುಂಬಗಳು ಬದಲಾಗುತ್ತವೆ. ಕಾನೂನುಗಳು ಬದಲಾಗುತ್ತವೆ. ನಿಮ್ಮ ಸನ್ನದು ಪಡೆದ ಲೆಕ್ಕಿಗರು ಅಥವಾ ವಕೀಲರು ತೆರಿಗೆ ಉಳಿತಾಯದ ಹೊಸ ಅವಕಾಶಗಳ ಬಗ್ಗೆ ಹಾಗೂ ತೆರಿಗೆಗೆ ಬಾಧ್ಯವಾಗುವಂಥ ಪ್ರಮುಖ ಬಾಬುಗಳ ಬಗ್ಗೆ ನಿಮಗೆ ಸಲಹೆ ನೀಡಬಲ್ಲರು. ಬದುಕಿ ಉಳಿದವರು ಪ್ರಮುಖ ಆರ್ಥಿಕ ತೀರ್ಮಾನಗಳನ್ನು ಕೈಗೊಳ್ಳಲು ವೃತ್ತಿಶೀಲ ಸಲಹೆಗಾರರು ನೆರವಾಗಲಿ. ದುಃಖೋದ್ವೇಗಕ್ಕೆ ಒಳಗಾಗಿರುವಂಥ ಬದುಕಿ ಉಳಿದಿರುವ ವ್ಯಕ್ತಿಯು ಆಸ್ತಿಪಾಸ್ತಿಗಳನ್ನು ಬಹುಬೇಗ ದೋಚಿಬಿಡಬಹುದೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿ.

ಕ್ರಮ ಐದು: ವಾರ್ಷಿಕ ಪರಿಶೀಲನೆ. 'ವಿಧವೆ' ಎಂಬ ಹೆಸರಿನ ತನ್ನ ಪುಸ್ತಕದಲ್ಲಿ ಲಿನ್ ಕೇನ್ ಒಂದು ಪ್ರಸ್ತಾಪವನ್ನು ಮುಂದಿಟ್ಟಿದ್ದಾರೆ. ಕುಟುಂಬದ ಆರ್ಥಿಕ ನಾಡಿಯ ಮಿಡಿತವನ್ನು ಪರೀಕ್ಷಿಸಲು ಹಾಗೂ ತಮ್ಮ ಆಸ್ತಿ ನಿಯೋಜನೆಯನ್ನು ಆಧುನೀಕರಿಸಲು ದಂಪತಿಗಳು ವರ್ಷದಲ್ಲಿ ಒಂದು ದಿನವನ್ನು 'ಸಂದರ್ಭ ಪರಿಶೀಲನೆಯ ದಿವಸ'ವೆಂದು ಮೀಸಲಿಡಬೇಕೆಂಬುದೇ ಆ ಪ್ರಸ್ತಾಪ. ದೈಹಿಕ ಸ್ಥಿತಿಗತಿಗಳು ಬದಲಾಗುವುದರಿಂದ ನಾವು ವೈದ್ಯಕೀಯ ಪರೀಕ್ಷೆ ಮಾಡಿಸಿಕೊಳ್ಳುತ್ತೇವಷ್ಟೆ. ಆರ್ಥಿಕ ಪರಿಸ್ಥಿತಿಯ ಬಗ್ಗೆಯೂ ಇಂಥ ನಿಲುವನ್ನೇಕೆ ತಳೆಯಬಾರದು? ಹೆಂಡತಿ ಪರಿಶೀಲಿಸಬೇಕಾದ ಬಾಬುಗಳ ಪಟ್ಟಿ ಹೀಗಿದೆ:

೧. ನನ್ನ ಮರಣಶಾಸನ ಮತ್ತು ನನ್ನ ಗಂಡನ ಮರಣಶಾಸನ ಸ್ಪಷ್ಟವಾಗಿವೆಯೇ ಹಾಗೂ ಚಾಲ್ತಿಯಲ್ಲಿವೆಯೇ?
೨. ನಮ್ಮ ಸಲಹೆಗಾರರು ದಕ್ಷರೂ ಪ್ರಾಮಾಣಿಕರೂ ಆಗಿದ್ದಾರೆಯೆ? ದುರಾಸೆಯುಳ್ಳ ನಮ್ಮ ಬಂಧುಗಳ ವಿಚಾರ ನಮಗೆ ಗೊತ್ತಿದೆಯೆ?
೩. ಸಮಗ್ರ ದಾಖಲೆಗಳ ಕಡತ ನಮ್ಮ ಬಳಿ ಇದೆಯೆ? ನಮ್ಮ ಆರ್ಥಿಕ ಪರಿಸ್ಥಿತಿಯ ಚಿತ್ರ ನಮಗೆ ತಿಳಿದಿದೆಯೆ?
೪. ವಿಧವೆಯಾದರೆ, ಇರಲು ಒಂದು ನೆಲೆಯಾದರೂ ನನಗೆ ಇದೆಯೆ?
೫. ನಮ್ಮ ಜೀವವಿಮಾ ಪಾಲಿಸಿಗಳನ್ನು ವಿಶ್ಲೇಷಿಸಿದ್ದೇವೆಯೆ? ಸಂಪತ್ತು-ತೆರಿಗೆ ವಿರುದ್ಧವಾಗಿ ಅವು ರಕ್ಷಿತವಾಗಿವೆಯೆ?
೬. ಅಗತ್ಯವಾದಲ್ಲಿ ಕೆಲಸಕ್ಕೆ ಸೇರಿಕೊಳ್ಳಲು ನಾನು ಸಿದ್ಧಳಾಗಿದ್ದೇನೆಯೆ?
೭. ಮಕ್ಕಳ ಶಿಕ್ಷಣಕ್ಕೆ ಮತ್ತು ಹೆಣ್ಣುಮಕ್ಕಳ ಮದುವೆಗಳಿಗೆ ಅವಕಾಶ ಕಲ್ಪಿಸಲಾಗಿದೆಯೆ?

೮. ಸಂಪತ್ತುತೆರಿಗೆಯನ್ನು ಕಡಿಮೆ ಮಾಡಲು (ಏಕೆಂದರೆ ಹಣದುಬ್ಬರದೊಂದಿಗೆ ಇದು ಹೆಚ್ಚಾಗುತ್ತ ಹೋಗುತ್ತದೆ) ಮತ್ತು ಸಂಭವನೀಯ ವೆಚ್ಚವನ್ನು ಕಡಿಮೆಯಾಗಿಸಲು ಸಾಧ್ಯವಾದುದೆಲ್ಲವನ್ನೂ ಮಾಡಿದ್ದೇವೆಯೆ?

ತೆರಿಗೆ ಪಾವತಿ ಮಾಡಲು ಎಲ್ಲಿಂದ ಹಣವನ್ನು ಒದಗಿಸಿಕೊಳ್ಳಬಹುದೆಂಬುದು ನನಗೆ ತಿಳಿದಿದೆಯೆ?

೯. ನನ್ನ ಗಂಡನ ನಿವೃತ್ತಿ-ವ್ಯವಸ್ಥೆ ಮತ್ತು ಉದ್ಯೋಗಿ-ಲಾಭ ಯೋಜನೆಗಳ ವಿಚಾರ ನನಗೆ ಚೆನ್ನಾಗಿ ತಿಳಿದಿದೆಯೆ?

೧೦. ನನ್ನ ಗಂಡ ವ್ಯಾಪಾರ ವ್ಯವಹಾರಗಳನ್ನೇನಾದರೂ ಇಟ್ಟುಕೊಂಡಿದ್ದರೆ, ಅದರ ಬಗ್ಗೆ ಏನು ಮಾಡಬೇಕೆಂಬುದು ನನಗೆ ಗೊತ್ತೆ?

ಜೀವನದ ವಿಷಯದಲ್ಲಿ ನೀವೇನು ಕಲಿತಿದ್ದೀರಿ ಎಂದು ಅಮೆರಿಕನ್ ಕವಿ ರಾಬರ್ಟ್ ಫ್ರಾಸ್ಟ್ ಅವರನ್ನು ಅವರ ಎಂಬತ್ತನೆಯ ಹುಟ್ಟುಹಬ್ಬದ ದಿವಸ ಕೇಳಿದಾಗ, ಅವರು ಹೀಗೆಂದು ಉತ್ತರಿಸಿದ್ದರು. "ನಾನು ಮೂರು ಮಾತುಗಳಲ್ಲಿ ಹೇಳಬಲ್ಲೆ: ಅದು ಮುನ್ನಡೆಯುತ್ತಲೇ ಇರುತ್ತದೆ." ವಿಧವೆಯಾಗಿ ತನ್ನ ಪಾಲಿಗೆ ಜೀವನವೆಂಬುದು ಮುನ್ನಡೆಯುತ್ತಲೇ ಇರುವಾಗ, ಕುಟುಂಬದ ಆರ್ಥಿಕ ಸ್ಥಿತಿಯನ್ನು ಅರಿತಿರುವ ಪತ್ನಿ ಆ ಬಾಳಿನ ನಿರ್ವಹಣೆಗೆ ಇತರರೆಲ್ಲರಿಗಿಂತಲೂ ಹೆಚ್ಚು ಸನ್ನದ್ಧಸ್ಥಿತಿಯಲ್ಲಿರುತ್ತಾಳೆ.

ಕುಟುಂಬ ಕಡತದ ಮಾಹಿತಿ

ಈಗ ಈ ಕೆಳಗೆ ಕಾಣಿಸಿರುವ ದಾಖಲೆಗಳನ್ನು ಮತ್ತು ಕುಟುಂಬ ಮಾಹಿತಿಯನ್ನು ಸಂಗ್ರಹಿಸಬಹುದು. ನಿಮಗೆ ಸಂಗತವಾಗಿರುವಂಥ ಬಾಬುಗಳ ಬಗೆಗಿನ ದಾಖಲೆಗಳ ಛಾಯಾಚಿತ್ರ ಪ್ರತಿಗಳನ್ನು ಮಾಡಿಕೊಳ್ಳಿ. ನೀವು ಮುಖ್ಯವೆಂದು ಭಾವಿಸುವ ಇತರ ದಾಖಲೆಗಳನ್ನು ಸೇರಿಸಿ. ಸಂಬಂಧಿಸಿದ ಕಾಗದ ಪತ್ರಗಳನ್ನು ಎಲ್ಲಿ ಇರಿಸಲಾಗಿದೆ ಎಂಬುದನ್ನು ಪಕ್ಕದಲ್ಲಿ ನಮೂದಿಸಿ.

ಕುಟುಂಬ

ಜನನ ಪ್ರಮಾಣ ಪತ್ರಗಳು

ದತ್ತಕ ಕಾಗದ ಪತ್ರಗಳು

ವಿವಾಹದ ಮತ್ತು ವಿವಾಹ ವಿಚ್ಛೇದನದ ಕಾಗದ ಪತ್ರಗಳು

ವೈಯಕ್ತಿಕ ಆಸ್ತಿ

ಸ್ಥಿರ ಆಸ್ತಿ : ಗುತ್ತಿಗೆಗೆ ಕೊಟ್ಟಿದ್ದಲ್ಲಿ ಒಪ್ಪಂದ ಪತ್ರಗಳು ಮತ್ತು ಷರತ್ತುಗಳು

ಕೃಷಿ ಭೂಮಿಗಳ ಬಗೆಗಿನ ಯಾದಿ ಮತ್ತು ಭೂಕಂದಾಯ ದಾಖಲೆಗಳು

ಎಲ್ಲ ಬ್ಯಾಂಕ್ ಖಾತೆಗಳು—ಸೂಕ್ತ ನಾಮಕರಣ ಪತ್ರಗಳೊಂದಿಗೆ ನಿಶ್ಚಿತಾವಧಿ ಠೇವಣಿ ರಶೀತಿಗಳು

ಠೇವಣಿಗಳು ಮತ್ತು ಸಾಲಗಳು

ಶೇರುಗಳು, ಡಿಬೆಂಚರ್ ಪತ್ರಗಳು, ಯೂನಿಟ್ಟುಗಳು, ಬಾಂಡುಗಳು ಮತ್ತು ಸರ್ಕಾರಿ ಹೂಟಿಗಳು/ಭದ್ರತೆಗಳು

ಸುರಕ್ಷಿತ ನಿಕ್ಷೇಪ ಕಪಾಟುಗಳು—ಸ್ಥಳ, ಸಂಖ್ಯೆ ಮತ್ತು ಬೀಗದ ಕೈಗಳ ಬಗೆಗಿನ ವಿವರಗಳೊಂದಿಗೆ

ಸಂಚಿತ ಕಾಲ ಠೇವಣಿ (CTD) ಮತ್ತು ಕಡ್ಡಾಯ ಠೇವಣಿ ಯೋಜನೆ (CDS) —ಅಂಚೆ ಕಛೇರಿಯದು ; ಸಾರ್ವಜನಿಕ ಭವಿಷ್ಯ ನಿಧಿ (PPF)

ಸಂದಾಯವಾಗಬೇಕಾಗಿರುವ ಮತ್ತು ಪಾವತಿ ಮಾಡಬೇಕಾಗಿರುವ ಮೊಬಲಗಿನ ಬಗೆಗಿನ ವಿವರಗಳು

ಕಾರ್/ಸ್ಕೂಟರ್ ನೋಂದಣಿಗಳು

ವಿಮೆಗಳು

ಜೀವವಿಮೆ

ಮನೆ ಮತ್ತು ವ್ಯವಹಾರ

ಅಪಘಾತ

ಉದ್ಯೋಗಿ—ಲಾಭಗಳು

ಭವಿಷ್ಯ ನಿಧಿ

ಮರಣ-ನಿವೃತ್ತಿ ಅನುದಾನ

ಪಿಂಚಣಿ/ವಯೋಮಿತಿ ತಲುಪಿಕೆ ಲಾಭಗಳು

ತೆರಿಗೆಗಳು/ತೆರಿಗೆ ವರದಿಗಳು

ಆದಾಯ ತೆರಿಗೆ-ಖಾಯಂ ಖಾತೆ ಸಂಖ್ಯೆ ಮತ್ತು ಕರನಿರ್ಧಾರಣೆಗೆ ಒಳಪಡಲಾಗುವ ಜಿಲ್ಲೆ ಮತ್ತು ತಾಲ್ಲೂಕು

ಆದಾಯ ತೆರಿಗೆ ವರದಿಗಳು
ಅಥವಾ ಕರನಿರ್ಧಾರಣೆ ಆದೇಶಗಳು
ಸಂಪತ್ತು ತೆರಿಗೆ ವರದಿಗಳು
ಕಾಣಿಕೆ ತೆರಿಗೆ ವರದಿಗಳು
} ಕಳೆದ ೬ ವರ್ಷಗಳಿಗೆ ಸಂಬಂಧಿಸಿದವು

ವ್ಯಾಪಾರ—ವ್ಯವಹಾರ

ಹಿಂದೂ ಅವಿಭಕ್ತ ಕುಟುಂಬದಲ್ಲಿನ ಪಾಲು

ಪಾಲುದಾರಿಕೆ ಕಾಗದ ಪತ್ರಗಳು

ನಿಮ್ಮ ಹೆಸರಿಗೆ ನೋಂದಣಿಯಾಗದಿರುವ (ಅಧಿಕಾರ ಹಸ್ತಾಂತರದ ಮೇರೆಗೆ) ಆಸ್ತಿ ವರ್ಗಾವಣೆ ದಾಖಲೆಗಳು

ಸುನಾಮು ಖಾತೆ—ವ್ಯವಹಾರದಿಂದ ಸಂದಾಯವಾಗಬೇಕಾಗಿರುವ ಹಣದ ಪಾವತಿ ವಿಧಾನ

ಆಸ್ತಿ—ನಿಯೋಜನೆ

ಮರಣ ಶಾಸನಗಳು

ಅಧಿಕಾರ ಹಸ್ತಾಂತರ ಪತ್ರಗಳು

ಟ್ರಸ್ಟ್ ಒಪ್ಪಂದಗಳು

ಪ್ರಧಾನ್‌ಗುರುದತ್ತ

ಕಾನೂನು ವಿಚಾರಗಳ ಬಗ್ಗೆ ಸಲಹೆ

ಕುಮಾರಯ್ಯ ತನ್ನ ಮದುವೆ ಆದ ಬಳಿಕ ಮಾರಯ್ಯನಿಗೆ ರೂ ೫೦೦ ಪಾವತಿಸುವುದಾಗಿ ಮಾತುಕೊಡುತ್ತಾನೆ. ಇದು ಊರ್ಜಿತವಾಗಬಲ್ಲ ವಚನ ಪತ್ರವೇ (ಪ್ರಾಮಿಸ್ಸರಿ ನೋಟ್) ?

ಅಲ್ಲ. ವಚನಪತ್ರ ಊರ್ಜಿತವಾಗಬೇಕಾದರೆ ಅದರಲ್ಲಿ ನಿರ್ದಿಷ್ಟ ಮೊತ್ತದ ಮೊಬಲಗನ್ನು ನಿರ್ದಿಷ್ಟ ವ್ಯಕ್ತಿಗೆ ಯಾ ಆತನ ಆದೇಶ ಪಡೆದವನಿಗೆ ಯಾ ಆ ಪತ್ರ ಹೊಂದಿರುವವನಿಗೆ ಪಾವತಿಸಲಾಗುವುದೆಂಬ ಬೇಷರತ್ ಮಾತು ಇರಬೇಕು.

ಠಸ್ಸೆ ಕಾಗದ ಲಭ್ಯವಿರಲಿಲ್ಲವಾಗಿ ಕುಮಾರಯ್ಯ ಖಾಲಿ ಕಾಗದದ ಮೇಲೆ ಮಾರಯ್ಯನ ಹೆಸರಿಗೆ ವಚನ ಪತ್ರ ಬರೆದು ಇದಕ್ಕೆ ಲಗತ್ತಿಸಿದ ರೆವೆನ್ಯೂ ಸ್ಟಾಂಪಿನ ಮೇಲೆ ರುಜು ಹಾಕಿಕೊಡುತ್ತಾನೆ. ಇದು ಊರ್ಜಿತವಾಗಬಲ್ಲ ವಚನಪತ್ರವೇ ?

ಹೌದು. ವಚನಪತ್ರವನ್ನು ಠಸ್ಸೆ ಕಾಗದದ ಮೇಲೆಯೇ ಬರೆಯಬೇಕೆಂದೇನೂ ಇಲ್ಲ. ಖಾಲಿ ಕಾಗದದ ಮೇಲೆ ಬರೆದು ಯುಕ್ತ ರೆವೆನ್ಯೂಸ್ಟಾಂಪ್ ಅಂಟಿಸಿ ಇದರ ಮೇಲೆ ರುಜು ಮಾಡಿದರೆ ಸಾಕು.

ವಚನ ಪತ್ರ ಪ್ರಮಾಣೀಕರಿಸಲ್ಪಟ್ಟಿರಬೇಕೇ ?

ಬೇಡ. ವಚನಪತ್ರ ಯಾವನೇ ಸಾಕ್ಷಿದಾರನಿಂದ ಪ್ರಮಾಣೀಕರಿಸಲ್ಪಟ್ಟಿರಬೇಕಾಗಿಲ್ಲ.

ರೂ ೨೦೦೦ ಮೌಲ್ಯಕ್ಕೆ ಬರೆದುಕೊಟ್ಟ ವಚನ ಪತ್ರಕ್ಕೆ ಅಂಟಿಸಬೇಕಾದ ರೆವೆನ್ಯೂ ಸ್ಟಾಂಪಿನ ಮೌಲ್ಯ ಎಷ್ಟು ?

೨೫ ಪೈಸೆ ರೆವೆನ್ಯೂ ಸ್ಟಾಂಪ್. ರೂ ೨೫೦ರ ವರೆಗೆ ೧೦ ಪೈಸೆ. ರೂ ೨೫೦ ರಿಂದ ರೂ ೧೦೦೦ದ ವರೆಗೆ ೧೫ ಪೈಸೆ. ರೂ ೧೦೦೦ ಮಿಕ್ಕಿದ ಮೊಬಲಗಿಗೆ ೨೫ ಪೈಸೆ.

ವಚನಪತ್ರ ಬರೆದಾಗ ರೆವೆನ್ಯೂ ಸ್ಟಾಂಪನ್ನು ಅಂಟಿಸಿರಲಿಲ್ಲ. ಅದರೆ ಅವಶ್ಯವಾದ ರೆವೆನ್ಯೂ ಸ್ಟಾಂಪನ್ನು ತದನಂತರ ಅಂಟಿಸಿ ರದ್ದುಗೊಳಿಸಲಾಯಿತು. ಇದು ಊರ್ಜಿತವೇ ?

ಊರ್ಜಿತವಲ್ಲ. ಭಾರತೀಯ ಸ್ಟಾಂಪ್ ಅಧಿನಿಯಮದ ಪ್ರಕಾರ ವಚನ ಪತ್ರ ಬರೆಯುವ ಮೊದಲು ಅಥವಾ ಬರೆಯುವ ವೇಳೆ ಅದಕ್ಕೆ ಸ್ಟಾಂಪ್ ಅಂಟಿಸಿರಬೇಕು.

ಮಾರಯ್ಯನ ಎದುರು ಕುಮಾರಯ್ಯ ರೂ ೪೦೦ಕ್ಕೆ ಡಿಕ್ರಿ ಪಡೆದು ಈ ಮೊಬಲಗನ್ನು ಆತನಿಂದ ವಸೂಲು ಮಾಡಲು ಆತನನ್ನು ಸಿವಿಲ್ ಸೆರೆಮನೆಯಲ್ಲಿ ತಡೆಹಿಡಿದಿರಲು ನಿರ್ವಹಣಾ ಅರ್ಜಿ ಸಲ್ಲಿಸುತ್ತಾನೆ. ಡಿಕ್ರಿ ಆದ ಮೊಬಲಗನ್ನು ಮಾರಯ್ಯ ಪಾವತಿಸದಿದ್ದರೆ ಆತನನ್ನು ಸಿವಿಲ್ ಸೆರೆಮನೆಯಲ್ಲಿ ತಡೆಹಿಡಿದಿಡಲು ನ್ಯಾಯಾಲಯ ಆಜ್ಞೆ ವಿಧಿಸಬಹುದೇ ?

ಸಾಧ್ಯವಿಲ್ಲ. ಡಿಕ್ರಿ ಮೊಬಲಗು ರೂ. ೫೦೦ ಮೀರದಿದ್ದರೆ ಋಣಿಯಾದವನನ್ನು ಸಿವಿಲ್ ಸೆರೆಮನೆಯಲ್ಲಿ ತಡೆಹಿಡಿದಿಡಲು ಸಾಧ್ಯವಿಲ್ಲ. (ಸಿವಿಲ್ ಪ್ರೊಸೀಜರ್ ಕೋಡ್ ಪ್ರಕರಣ ೫೮ (೧ ಎ) ನೋಡಿ.)

ಜವರಯ್ಯ ಸರ್ಕಾರಿ ಕಚೇರಿಯೊಂದರಲ್ಲಿ ಗುಮಾಸ್ತ. ಬೇರೆ ಬೇರೆ ವ್ಯಕ್ತಿಗಳಿಗೆ ಆ ಕಚೇರಿಯಿಂದ ಸಲ್ಲಬೇಕಾದ ಮೊಬಲಗುಗಳಿಗೆ ಚೆಕ್ಕುಗಳನ್ನು ಬರೆದು ಮೇಲಧಿಕಾರಿಗೆ ರುಜುಹಾಕಲು ಒಪ್ಪಿಸುವುದು ಇವನ ಕರ್ತವ್ಯ. ಇದನ್ನು ಈತ ವ್ಯವಸ್ಥಿತವಾಗಿಯೂ ನಿಷ್ಠಾಯುತನಾಗಿಯೂ ಯಾವನೇ ವ್ಯಕ್ತಿಯಿಂದ ಏನೂ ಪ್ರತಿಫಲ ನಿರೀಕ್ಷಿಸದೆಯೂ ನಿರ್ವಹಿಸುತ್ತಿದ್ದಾನೆ. ಇಂತಿದ್ದರೂ ಒಬ್ಬ ವ್ಯಕ್ತಿ ತನಗೆ ಬಲು ದೊಡ್ಡ ಮೊಬಲಗಿನ ಚೆಕ್ ಅತಿಕ್ಷಿಪ್ರವಾಗಿ ದೊರೆತದ್ದರಿಂದ ತುಂಬ ಸಂತುಷ್ಟನಾಗಿ ಜವರಯ್ಯ ಮಾಡಿದ ಪ್ರಾಮಾಣಿಕ ಸೇವೆಗೆ ಪ್ರತಿಫಲವಾಗಿ ರೂ. ೧೦೦೦ ಭಕ್ಷೀಸು ತೆಗೆದುಕೊಳ್ಳಲು ಈತನನ್ನು ಒಪ್ಪಿಸುತ್ತಾನೆ. ಈ ತೆರನಾಗಿ ಹಣ ತೆಗೆದುಕೊಳ್ಳುವುದು ಅಪರಾಧವೆಂದು ಪರಿಗಣಿಸಲ್ಪಡುವುದೇ ?

ಹೌದು. ಸರಕಾರೀ ಕೆಲಸ ಮಾಡಿದುದಕ್ಕೆ ಪ್ರತಿಫಲವಾಗಿ ಸರಕಾರದಿಂದ ಪಾವತಿ ಆಗುವ ಸಂಬಳ ಮುಂತಾದ ಮೊಬಲಗುಗಳ ವಿನಾ ಮಿಕ್ಕ ಎಲ್ಲ ಪ್ರತಿಫಲಗಳೂ ಕಾನೂನು ಬಾಹಿರವಾದವು. ಜವರಯ್ಯ ತೆಗೆದುಕೊಂಡ ಭಕ್ಷೀಸು ಕಾನೂನು ಬಾಹಿರವಾದದ್ದು. ಭಾರತ ದಂಡ ಸಂಹಿತೆ ಪ್ರಕರಣ ೧೬೧ ರ ಪ್ರಕಾರ ಇದು ಅಪರಾಧ.

ಮೋಟರ್ ಕಾರಿನ ಬಿಡಿಗಳು (ಬ್ರೇಕ್ಸ್) ವಿಫಲಗೊಂಡದ್ದರಿಂದ ಅದು ಪಾದಚಾರಿಯ ಮೇಲೆ ಹರಿದು ಈತನ ಸಾವಿಗೆ ಕಾರಣವಾಗುತ್ತದೆ. ಆ ಕಾರಿನ ಮಾಲೀಕ ಮೃತನ ವಾರಸುದಾರರಿಗೆ ಪರಿಹಾರ ಧನ ಪಾವತಿಸಲು ಬದ್ಧನೇ ?

ಹೌದು. ಆ ಅಪಘಾತದಲ್ಲಿ ನಿರ್ಲಕ್ಷ್ಯವಿತ್ತೋ ಇಲ್ಲವೋ ಎಂಬುದನ್ನು ಪರಿಗಣಿಸದೇ ಮಾಲಿಕ ರೂ. ೧೫೦೦೦ ದಂಡ ಪಾವತಿಸಲು ಬದ್ಧನೆಂದು ಮೋಟರ್

ವಾಹನಗಳ ಅಧಿನಿಯಮಕ್ಕೆ ಈಚೆಗೆ ಮಾಡಿರುವ ತಿದ್ದುಪಡಿ ವಿಧಿಸುತ್ತದೆ. ತಾನು ವಾಹನವನ್ನು ಸ್ವಸ್ಥ ಸ್ಥಿತಿಯಲ್ಲಿ ಕಾಪಾಡಿಕೊಂಡು ಬಂದಿದ್ದೇನೆಂದೂ ಅವನ್ನು ನಿಯತಕಾಲಿಕವಾಗಿ ತಪಾಸಣೆಗೆ ಒಳಪಡಿಸುತ್ತ ಬಂದಿದ್ದೇನೆಂದೂ ಮಾಲಿಕ ರುಜುವಾತುಪಡಿಸಲು ಅಸಮರ್ಥನಾದರೆ ಅಧಿಕ ಪರಿಹಾರ ಧನ ಪಾವತಿಸಲು ಕೂಡ ಹೊಣೆ ಆಗುತ್ತಾನೆ (AIR ಮದ್ರಾಸ್ ೧೫೭ ನ್ನು ನೋಡಿ).

ಮೈಸೂರು ನಗರದಲ್ಲಿ ಬಾಡಿಗೆಗೆ ಕೊಟ್ಟಿರುವ ಒಂದು ಮನೆಯ ಮಾಲೀಕ ಆ ಮನೆಯನ್ನು ಮಾರಾಟಮಾಡಲು ಬಯಸುತ್ತಾನೆ. ಬಾಡಿಗೆದಾರ ಅದರಲ್ಲಿ ವಾಸವಿರುವ ತನಕ ಮಾಲೀಕನಿಗೆ ಯೋಗ್ಯ ಮಾರುಕಟ್ಟೆ ಬೆಲೆ ದೊರೆಯುವ ಭರವಸೆ ಇಲ್ಲ. ಮನೆಯನ್ನು ತಾನು ಮಾರಾಟಮಾಡಬೇಕೆಂದಿರುವ ಕಾರಣ ವಾಗಿ ಬಾಡಿಗೆದಾರನನ್ನು ಅದರಿಂದ ಹೊರದೂಡಬೇಕೆಂದು ಮಾಲೀಕ ಬಾಡಿಗೆ ನಿಯಂತ್ರಣ ಅಧಿನಿಯಮಾನುಸಾರ ಅರ್ಜಿ ಸಲ್ಲಿಸಬಹುದೇ?

ಇಲ್ಲ. ಮಾರಾಟ ಮಾಡುವ ಉದ್ದೇಶಕ್ಕಾಗಿ ಮನೆಯನ್ನು ಬಾಡಿಗೆದಾರನಿಂದ ವಶತೆಗೆದುಕೊಳ್ಳಲು ಯಾವುದೇ ಅವಕಾಶ ಬಾಡಿಗೆ ನಿಯಂತ್ರಣ ಅಧಿನಿಯಮದಲ್ಲಿಲ್ಲ (ನೋಡಿ ೧೯೮೦ (I) ಕರ್ನಾಟಕ ಲಾ ಜರ್ನಲ್ ಪುಟ II).

ಕುಮಾರಯ್ಯ (ಹಿಂದೂ) ತನ್ನ ಜೀವವನ್ನು ರೂ. ೧೦,೦೦೦ಕ್ಕೆ ವಿಮೆ ಇಳಿಸಿ ಅದಕ್ಕೆ ತನ್ನ ಹೆಂಡತಿಯನ್ನು ನಾಮ ನಿರ್ದೇಶಿಸುತ್ತಾನೆ. ಮುಂದೊಂದು ದಿನ ಆತ ಸತ್ತುಹೋಗುತ್ತಾನೆ. ಅವನ ಹೆಂಡತಿ ಮತ್ತು ತಾಯಿ ಉಳಿಯುತ್ತಾರೆ. ವಿಮಾ ಮೊಬಲಗಿನಲ್ಲಿ ತಾಯಿಗೆ ಏನಾದರೂ ಪಾಲಿನ ಹಕ್ಕು ಇದೆಯೇ?

ಹೌದು. ಹಿಂದೂ ಉತ್ತರಾಧಿಕಾರ ಅಧಿನಿಯಮದ ಪ್ರಕಾರ ಮೃತ ಹಿಂದೂ ವಿನ ಹೆಂಡತಿ ಮತ್ತು ತಾಯಿ ಇಬ್ಬರೇ ಒಂದನೆಯ ದರ್ಜೆಯ ವಾರಸುದಾರರು. ಆದ್ದರಿಂದ ವಿಮಾ ಮೊಬಲಗಿನಲ್ಲಿ ಅರ್ಧಾಂಶ ಪಡೆಯಲು ತಾಯಿಗೆ ಹಕ್ಕು ಉಂಟು. ಹೆಂಡತಿ ಉತ್ತರಾಧಿಕಾರ ಪ್ರಮಾಣಪತ್ರ ಹಾಜರು ಪಡಿಸದೇ ಜೀವ ವಿಮಾ ಇಲಾಖೆಯಿಂದ ಮೊಬಲಗನ್ನು ಹೊಂದಿಕೊಳ್ಳಲು ಮಾತ್ರ ನಾಮ ನಿರ್ದೇಶನದ ಉಪಯೋಗ.

* * *

ಕಾನೂನು ತಮ್ಮ ರಕ್ಷಣೆಗೆ ಇರುವ ಸಾಮಾಜಿಕ ಜೀವನ ವಿಧಿ ಎಂದು ಜನ ತಿಳಿದು ಮುಕ್ತ ಕಾನೂನು ಸಲಹೆ ಪಡೆದು ವ್ಯವಹರಿಸುವುದು ವಿವೇಕ. ಗೊತ್ತಿದ್ದೋ ಗೊತ್ತಿಲ್ಲದೆಯೋ ಕಾನೂನನ್ನು ಮೀರಿ ಅಥವಾ ಅಡ್ಡಜಗಿದು ಒಳ

ದಾರಿ ಹುಡುಕುವಾತ ಒಂದಲ್ಲ ಒಂದು ದಿನ ಕಂಟಕಕ್ಕೆ ಬಲಿ ಆಗುವುದು ಖಂಡಿತ.

ಸಮಾಜದ ಬಡಜನರಿಗೆ ಉಚಿತ ಕಾನೂನು ನೆರವು ಒದಗಿಸಲು ನ್ಯಾಯಾಲಯ ಇರುವಲ್ಲೆಲ್ಲ ಕಾನೂನು ನೆರವು ಮಂಡಳಿಗಳನ್ನು ರಚಿಸಲಾಗಿದೆ. ವಾರ್ಷಿಕ ರೂ. ೮೦೦೦ದ ಒಳಗೆ ವರಮಾನವಿರುವ ಸಮಾಜದ ಎಲ್ಲ ವರ್ಗಗಳ ಜನರಿಗೆ ಮತ್ತು ಯಾವುದೇ ಆದಾಯದ ಷರತ್ತಿಲ್ಲದೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಮಹಿಳೆಯರು, ಯೋಧರು ಹಾಗೂ ಮಾಜಿ ಯೋಧರಿಗೆ ಉಚಿತ ಕಾನೂನು ನೆರವು ಈ ಮಂಡಳಿಗಳಲ್ಲಿ ದೊರೆಯುವುದು.

ಎ. ವೆಂಕಟರಾವ್



ಏಕಾಂತದಲ್ಲಿರುವಾಗಲೇ, ಮನುಷ್ಯ ತನ್ನ ಶಕ್ತಿ ಸಾಮರ್ಥ್ಯಗಳನ್ನು ತಿಳಿದುಕೊಳ್ಳುವುದು.

—ರಾಬರ್ಟ್‌ಬ್ರೌನಿಂಗ್

ಮನಶ್ಚಾಂಚಲ್ಯವನ್ನುಂಟುಮಾಡುವ ವಸ್ತು ಎದುರಿಗಿರುವಾಗಲೂ ಯಾರ ಮನಸ್ಸು ವಿಕಾರವಾಗುವುದಿಲ್ಲವೋ ಅವರೇ ಲೋಕದಲ್ಲಿ ಧೀರರು.

—ಕಾಳಿದಾಸ

ತರ್ಕ ಮಾಡಲೊಲ್ಲದವನು ಮೂಢಮತಿ, ಸಾಧಕ ಬಾಧಕಗಳನ್ನು ತೂಗಲು ಒಲ್ಲದವನು ಮೂರ್ಖಮತಿ; ವಿಚಾರ ಮಾಡುವ ಧೈರ್ಯವಿಲ್ಲದವನು ಗುಲಾಮ.

—ಸರ್, ಡಬ್ಲು. ಡ್ರಮಂಡ

ಕನ್ನಡ ಗಾದೆಗಳಲ್ಲಿ ಜಾತಿ ಮತ್ತು ಬಡತನದ ದೃಷ್ಟಿ

ಜನಪದ ಸಾಹಿತ್ಯದ ಒಂದು ಪ್ರಮುಖವಾದ ಅಂಗ, ಗಾದೆ. ಗಾದೆಗಳಲ್ಲಿ ಅವುಗಳ ಸಾಹಿತ್ಯಿಕ ಅಥವಾ ಸ್ವಾರಸ್ಯಕರ ಅಂಶಗಳನ್ನು ತಿಳಿದುಕೊಳ್ಳುವುದಕ್ಕಿಂತ ಹೆಚ್ಚಾಗಿ, ಅವು ಬಳಕೆಯಲ್ಲಿರುವ ಪರಿಸರದ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಪ್ರಯತ್ನಪಡುವುದು ಹೆಚ್ಚು ಪ್ರಯೋಜನಕಾರಿಯಾದುದು ಎಂದು ತೋರುತ್ತದೆ.

ಒಬ್ಬ ಗೊತ್ತಾದ ವ್ಯಕ್ತಿ, ಒಂದು ಗೊತ್ತಾದ ಕಾಲದಲ್ಲಿ ಗಾದೆಯನ್ನು ಸೃಷ್ಟಿ ಮಾಡಿದ್ದಾನೆ ಎಂದು ಹೇಳುವುದು ಆಗದ ಮಾತು. ಗಾದೆ ಒಂದು ಸಾಮೂಹಿಕ ಸೃಷ್ಟಿ. ಸಾಂದರ್ಭಿಕವಾಗಿ ಹುಟ್ಟಿಕೊಳ್ಳುವ ಗಾದೆ ಕ್ರಮೇಣ ಸಮುದಾಯದ ಸ್ವತ್ತಾಗಿ, ಪರಂಪರಾಗತವಾಗಿ ಬೆಳೆಯುತ್ತ ಹೋಗುವ ಒಂದು ಕ್ರಿಯೆ. ಎ. ಕೆ. ರಾಮಾನುಜನ್ ಹೇಳುವಂತೆ 'ಗಾದೆಯೆಂದರೆ ಹಳೆಯ ಮಾತು, ಜನರಾಡಿ ಹಳಸಿದ ಮಾತು, ಲೋಕೋಕ್ತಿ.' ಇಂಥ ಗಾದೆಗಳನ್ನು ವಿಶ್ಲೇಷಣೆಗೆ ಅಥವಾ ವಿಮರ್ಶೆಗೆ ತೆಗೆದುಕೊಳ್ಳುವಾಗ, ಅದರ ವಾಚ್ಯಾರ್ಥ ಅಥವಾ ಸಾಹಿತ್ಯಾರ್ಥವನ್ನಷ್ಟೇ ಗಮನಿಸಿದರೆ ಸಾಲದು. ಅವುಗಳೊಳಗೆ ಅಡಗಿರುವ ಆಯಾ ಜನಾಂಗದ ಜೀವನ ದೃಷ್ಟಿಯನ್ನೂ ಕಾಣಲು ಪ್ರಯತ್ನಪಡುವುದು ಸರಿಯಾದ ಅಭ್ಯಾಸವಾದೀತೆಂದು ನನ್ನ ಅಭಿಪ್ರಾಯ. ಈ ಸಂದರ್ಭದಲ್ಲೇ 'The genins, wit and Spirit of a nation are discovered in its proverbs' ಎಂಬ ಬೇಕನ್ನನ ಮಾತನ್ನು ನಾವು ಗಮನಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಕನ್ನಡದ ಸಾವಿರಾರು ಗಾದೆಗಳಲ್ಲಿ ಕೆಲವು ಗಾದೆಗಳನ್ನು ಮಾತ್ರ ತೆಗೆದುಕೊಂಡು 'ಜಾತಿ ಮತ್ತು ಬಡತನ'ಗಳ ಬಗ್ಗೆ ಇಲ್ಲಿನ ಜನರು ಯಾವ ಯಾವ ನಿಲುವುಗಳನ್ನು ತಳೆದಿದ್ದಾರೆ ಎಂದು ತಿಳಿದುಕೊಳ್ಳಲು ಈ ಕಿರಿ ಲೇಖನದಲ್ಲಿ ಪ್ರಯತ್ನ ಪಟ್ಟಿದ್ದೇನೆ.

ಜಾತಿಯನ್ನು ಕುರಿತ ನಿಲುವುಗಳು : ಸಾವಿರಾರು ಸಂಖ್ಯೆಯ ಜಾತಿ ಮತಗಳು ದೇಶಾದ್ಯಂತ ತುಂಬಿ ತುಳುಕುತ್ತಿರುವುದು, ಇಲ್ಲಿನ ವಾಸ್ತವಿಕ ಸಂಗತಿ. ಹಲವು ಪ್ರಮುಖ ಜಾತಿಗಳು, ಮತ್ತವುಗಳೊಳಗೇ ಬಗೆಬಗೆಯ ಉಪ ಜಾತಿಗಳ ವ್ಯವಹಾರ ನಡೆಸುತ್ತಿರುವ 'ಜಾತಿಗಳ ದೇಶ' ನಮ್ಮದು. ಜಾತೀಯ ಪ್ರಭಾವ ಈ ದೇಶದಲ್ಲಿ ಎಷ್ಟರಮಟ್ಟಿಗೆ ಇದೆ ಅಂದರೆ—ಈ ದೇಶದಲ್ಲಿ ಒಂದು ಹೆಣ್ಣು ಒಂದು ಗಂಡಿನೊಂದಿಗೆ ನಡೆಸುವ ಅಥವಾ ಬೆಳೆಸುವ ಪ್ರೇಮ ಪ್ರಣಯ

ಗಳೂ ಮಾನವೀಯವಾಗಿರದೆ—ಒಂದು ಜಾತಿಯ ಹೆಣ್ಣು ಮತ್ತೊಂದು ಜಾತಿಯ ಗಂಡಿನೊಂದಿಗೆ ಬೆರೆಯುವುದಷ್ಟೇ ಆಗಿದೆ. ನಮ್ಮ ಜನಪದ ಸಮಾಜ ಈ ಜಾತಿ ಉಪಜಾತಿಗಳ ಬಗ್ಗೆ ಯಾವ ಯಾವ ನಿಲುವು ತಳೆದಿದೆ ಎಂಬುದನ್ನು ಕೆಲವು ಗಾದೆಗಳ ಮೂಲಕವೇ ತಿಳಿದುಕೊಳ್ಳಲು ಪ್ರಯತ್ನ ನಡೆಸಿದ್ದೇನೆ.

ಹಾರುವ ಆಳಲ್ಲ, ಬಾಳೆ ದಡಿಯಲ್ಲ.

ಈ ಗಾದೆ ಹಾರುವರ (ಬ್ರಾಹ್ಮಣರ) ದೈಹಿಕ ಅಸಾಮರ್ಥ್ಯತೆಯನ್ನು ಸ್ಪಷ್ಟವಾಗಿ ತೋರಿಸುತ್ತದೆ. ಬ್ರಾಹ್ಮಣ ಜನಾಂಗ ಪ್ರಾಚೀನ ಕಾಲದಿಂದಲೂ ತನ್ನ ಬುದ್ಧಿಶಕ್ತಿಯಿಂದಾಗಿ, ಸಮಾಜದ ಒಂದು ಪ್ರಮುಖ ಘಟಕವಾಗಿ ಬೆಳೆದು ಬಂದಿದೆ. ಬ್ರಾಹ್ಮಣ ಸಮಾಜ ವರ್ಗ ದೃಷ್ಟಿಯಿಂದ (class nature) ತಪ್ಪಿಸಿಕೊಂಡು ಜಾತೀಯತೆಯ ಚೌಕಟ್ಟಿನಲ್ಲಿ ಭದ್ರವಾಗಿ ಸಿಕ್ಕಿಕೊಂಡಾಗ, ಅಷ್ಟರಮಟ್ಟಿಗೆ ಅದು ಬೌದ್ಧಿಕವಾಗಿ ಶೋಷಕ ಜನಾಂಗವಾಗಿಯೂ ಪರಿವರ್ತನೆ ಹೊಂದಿತು. ಬೌದ್ಧಿಕ ಬೆಳವಣಿಗೆಗಷ್ಟೇ ಈ ಜನಾಂಗ ಪ್ರಾಧಾನ್ಯ ಕೊಟ್ಟಿದ್ದರಿಂದ, ದೈಹಿಕ ಶ್ರಮದಿಂದ ಸುಲಭವಾಗಿ ನುಣುಚಿಕೊಂಡಿತು. ಪರಿಣಾಮ, ಬ್ರಾಹ್ಮಣರಲ್ಲಿ ದೈಹಿಕ ಗಟ್ಟಿತನ ಕಡಿಮೆಯಾಗತೊಡಗಿತು. ಈ ಅಂಶವನ್ನೇ ಗಾದೆ ತಿಳಿಸುತ್ತಿದೆ. ಗಾದೆಯಲ್ಲಿ ಬಾಳೆ ಗಿಡವನ್ನು ಹೇಗೆ ಒಂದು ಗಟ್ಟಿಮರದ (ದೊಣ್ಣೆ) ಮಾದರಿಯಲ್ಲಿ ಉಪಯೋಗಿಸಲು ಸಾಧ್ಯವಿಲ್ಲವೋ ಹಾಗೆಯೇ ಬ್ರಾಹ್ಮಣನು ದೈಹಿಕವಾದ ಯಾವುದೇ ಕೆಲಸಕ್ಕೆ ಯೋಗ್ಯನಲ್ಲ ಎಂದು ಸಮರ್ಥವಾಗಿ ಹೇಳಿದೆ. ಇದೇ ಅಭಿಪ್ರಾಯವನ್ನು ಪೋಷಿಸುವ ಇನ್ನೊಂದು ಗಾದೆ ಹೀಗಿದೆ: 'ಬೆಸ್ತರ ಕೇರಿ ಅಂದ್ರೆ ಬಾಯ್ ಮುಚ್ಕೊಂಡ್ ನಡೀರಿ, ಹಾರೂರ ಕೇರಿ ಅಂದ್ರೆ ಹೊಡೀರಿ ತಮಟೆಯ ಅಂತಂತೆ ಗುಳ್ಳೇನರಿ.' ಆದರೆ ಈ ಮಾತಿಗೆ ಅಪವಾದವಿಲ್ಲದೆ ಇಲ್ಲ.

ಬ್ರಾಹ್ಮಣರು ಮೊದಲಿನಿಂದಲೂ ಸ್ವಚ್ಛತೆಗೆ ಹೆಸರಾದವರು ಎಂಬ ಕಲ್ಪನೆ ಜನಪದ ಸಮಾಜಕ್ಕಿದೆ. ಆದರೆ 'ಹಾರುವರ ಮೋರೆಯಾದರೂ ನೀರಿನಲ್ಲಿ ತೊಳೆಯದಿದ್ರೆ ನಾರದೆ ಇದ್ದೀತೆ?' ಎಂಬ ಗಾದೆ ಮೇಲಿನ ಅಭಿಪ್ರಾಯವನ್ನು ಪ್ರಶ್ನಿಸುತ್ತದೆ. ಹಲವಾರು ಸಾರಿ ಕೇವಲ ಔಪಚಾರಿಕವಾಗಿ ಮಡಿಯನ್ನು ಆಚರಿಸುವ ಬ್ರಾಹ್ಮಣರಲ್ಲೂ ಕೊಳಕುತನ ತುಂಬಿ ತುಳುಕುತ್ತಿದೆ ಎಂಬುದು ಅನುಭವಕ್ಕೆ ಬರುವ ಸಂಗತಿ. ಬಹಳಷ್ಟು ಸಲ, ಕೇವಲ ಬೌದ್ಧಿಕ ಮಟ್ಟದಲ್ಲೇ ವ್ಯವಹರಿಸುವ ಬ್ರಾಹ್ಮಣರ ಕುತಂತ್ರದಿಂದ ಜನಪದ ಸಮಾಜ ಎಷ್ಟೊಂದು ಬೇಸರ ಹೊಂದಿದೆ ಎಂಬುದನ್ನು 'ಹಾವನ್ನು ನಂಬಿದರೂ ಹಾರುವನ್ನ ನಂಬ

ಬೇಡ' ಎಂಬ ಗಾದೆ ತಿಳಿಸುತ್ತದೆ.

ಹನ್ನೆರಡನೆಯ ಶತಮಾನದಲ್ಲಿ, ಬಸವಣ್ಣನ ಮುಂದಾಳತ್ವದಲ್ಲಿ ನಡೆದ ಸಾಮಾಜಿಕ ಸುಧಾರಣೆಯ ಸಂದರ್ಭದಲ್ಲಿ ಬಹುಶಃ, ಜನ್ಮ ತಳೆದ 'ಜಂಗಮ', ಎಂಬ ಒಂದು ಗುಂಪು ಜಾತ್ಯಾತೀತವಾಗಿ, ಒಂದು ತಾತ್ವಿಕ ನಿಲುವಿನಲ್ಲಿ ವ್ಯವಹರಿಸತೊಡಗಿದಾಗ ಬಹುಶಃ ಹುಟ್ಟಿರಬಹುದಾದ ಗಾದೆ 'ಜಂಗಮಗೆ ಕುಲವಿಲ್ಲ ಗಂಗೆಗೆ ಹೊಲೆಯಿಲ್ಲ'. ಆದರೆ ಕಾಲ ಉರುಳಿದಂತೆ, ಪರಿಸರ ಬದಲಾಯಿಸುತ್ತಿದ್ದಂತೆ ಈ ಮಾತು ಬೇರೆ ಅಭಿಪ್ರಾಯವನ್ನು ಪಡೆದಿದೆ. ಇಂದು 'ಜಂಗಮ' ಎನ್ನುವುದು ವೀರಶೈವರಲ್ಲಿ ಒಂದು ಪ್ರತಿಷ್ಠಿತ ಜಾತಿಯಾಗಿ ಪರಿವರ್ತನೆ ಹೊಂದಿದೆ ; ಪರಿಣಾಮ 'ಜಂಗಮ' ಪದಕ್ಕೆ ಇದ್ದ ವಿಶಾಲಾರ್ಥ ಸಂಕುಚಿತವಾಗಿದೆ. ಗಾದೆಯ ಎರಡನೆಯ ಭಾಗ 'ಗಂಗೆಗೆ ಹೊಲೆಯಿಲ್ಲ, ಇಂದಿಗೂ ಸಶಕ್ತವಾಗಿ ಉಳಿದುಕೊಂಡಿದ್ದರೂ, ಗಾದೆಯ ಮೂಲಧ್ವನಿ ನಾಪತ್ತೆಯಾಗಿದೆ. ಹೀಗಾಗಿ, ಗಾದೆಗೆ ತನ್ನದೇ ಆದ ಮಿತಿ ಬಂದು, ಅಷ್ಟರಮಟ್ಟಿಗೆ ಈ ಗಾದೆ ಜನಸಮುದಾಯದ ನಡುವೆ ಸತ್ತಂತೆಯೇ ಸರಿ.

'ಬೇಡರವಗೆ ಗಾಡಿ ಸವಾರಿಯೇಕೆ?' ಎಂಬ ಗಾದೆ ಬೇಡ ಜನಾಂಗದ ಪ್ರಧಾನ ಕಸುಬಾದ ಬೇಟೆಯತ್ತ ನಮ್ಮನ್ನು ಕರೆದೊಯ್ಯುತ್ತದೆ. ಬೇಟೆಗಾಗಿ ಕಾಡುಮೇಡು ಅಲೆಯುತ್ತ ಸಾಗುವ ಬೇಡರವನಿಗೆ ವ್ಯವಸ್ಥಿತ ಬದುಕಿನ ಅವಶ್ಯಕತೆಯಾದರೂ ಏನಿದೆ ಎಂಬುದನ್ನು ಧ್ವನಿಸುವ ಈ ಗಾದೆ, ಪರಿಸರ ಬದಲಾವಣೆ ಆಗುತ್ತಾ ಹೋದಂತೆ, ತನ್ನ ಅರ್ಥವನ್ನು ಕಳೆದುಕೊಳ್ಳುತ್ತಿದೆ.

ಇನ್ನು ಕೆಲವು ಗಾದೆಗಳು ಕೆಳ ಜಾತಿಗಳನ್ನು ಅವಹೇಳನ ಮಾಡುವುದಕ್ಕೆ ಹುಟ್ಟಿಗೊಂಡ ಹಾಗೆ ತೋರುತ್ತವೆ.

ಉಪ್ಪಲಿಗ ಹೆಚ್ಚಿದ್ರೆ ಊರು ಹಾಳು
ನಳ್ಳಿ ಹೆಚ್ಚಿದ್ರೆ ಕೆರೆ ಹಾಳು
ಹೆಣ್ಣು ಹೆಚ್ಚಿದ್ರೆ ಮನೆ ಹಾಳು

ಈ ಗಾದೆ ತುಂಬ ಸಶಕ್ತವಾಗಿ ಬಂದಿದ್ದರೂ ಉಪ್ಪಲಿಗ ಶೆಟ್ಟರ ಜಾತಿಯನ್ನು ಕೀಳಾಗಿ ಕಾಣುವುದಕ್ಕಷ್ಟೇ ಹುಟ್ಟಿಕೊಂಡ ಹಾಗೆ ತೋರುತ್ತದೆ. ಮನುಷ್ಯ ಅಂದಮೇಲೆ ಸದ್ಗುಣ, ದುರ್ಗುಣಗಳೆರಡೂ ಇರಲು ಸಾಧ್ಯ. ಅದೇ ರೀತಿ ಉಪ್ಪಲಿಗರಲ್ಲೂ ಬಹುಶಃ ಯಾವುದೋ ಕೆಲವು ಮಂದಿಯಲ್ಲಿ ಇದ್ದಿರಬಹುದಾದ ದುರ್ಗಣಗಳನ್ನು ಸಾಮಾನೀಕರಿಸಿ ಇಡೀ ಕೋಮಿಗೆ ಈ ಗಾದೆಯನ್ನು ಅನ್ವಯಿಸಿರುವುದು, ಪೂರ್ವಾಗ್ರಹಪೀಡಿತವಾದುದೆಂದು ಬೇರೆಏನು ಹೇಳ

ಬೇಕಾಗಿಲ್ಲತಾನೆ? ಇದೇ ರೀತಿ* 'ಪರಿವಾರದವರ್ ನಂಬಿ ಇರವಾರಹಾಳಾಯ್ತು' ಪರಿವಾರ ಜನಾಂಗವನ್ನು ನಂಬಿ ಇದ್ದದ್ದೂ (ಇರವಾರ) ಹಾಳಾಗಬೇಕಾದ ಪರಿಸ್ಥಿತಿ ಏನಿದೆಯೋ ನನಗೆ ಗೊತ್ತಿಲ್ಲ. ಆ ಜನಾಂಗ ಅಷ್ಟೊಂದು ಕೆಟ್ಟದೆಂದು ಸಾಬೀತು ಮಾಡುವ ಪುರಾವೆಗಳೇನಿವೆಯೋ ನನಗಂತೂ ತಿಳಿದಿಲ್ಲ. ಈ ಗಾದೆಯೂ ಪೂರ್ವಾಗ್ರಹ ಪೀಡಿತವಾದ ಜನರ ನಡುವೆ ಹುಟ್ಟಿದ್ದೆಂದು ನನ್ನ ಅಭಿಪ್ರಾಯ.

ಇನ್ನು ಕೆಲವು ಗಾದೆಗಳಲ್ಲಿ ದುಡಿಯುವ, ಸಾಮಾಜಿಕವಾಗಿ ತೀರ ಕೆಳಮಟ್ಟದಲ್ಲಿರುವ ಜಾತಿಗಳನ್ನೂ, ಅವರದೇ ಆದ ಸಂಸ್ಕೃತಿಗಳನ್ನೂ ತುಚ್ಛವಾಗಿ ಕಂಡಿರುವ ಸಂದರ್ಭಗಳೂ ಇವೆ. 'ಹೊಲೆಯನ್ ನಂಬಿ ಹೊಲ ಮಾಡ್ಬೇಡ, ಕಳ್ಳನ್ (ಕುಳ್ಳನ್) ನಂಬಿ ನೀರ್ಗ್ಗಿಳಿಬೇಡ' ವಸ್ತುಸ್ಥಿತಿಯೊಂದರ ವಿಪರ್ಯಾಸವನ್ನು ತೋರಿಸುತ್ತದೆ, ಈ ಗಾದೆ. ವಾಸ್ತವಿಕವಾಗಿ ಹಳ್ಳಿಗಾಡುಗಳಲ್ಲಿ ಬಹುಪಾಲು ಭೂಹೀನ ಕೃಷಿ ಕಾರ್ಮಿಕರಾಗಿರುವ ಈ ಕೋಮಿನವರು, ಹಳ್ಳಿಗಳಲ್ಲಿ ಉಳ್ಳವರ ಹೊಲಮನೆಗಳಲ್ಲಿ ಪ್ರಾಮಾಣಿಕವಾಗಿ ದುಡಿಯುವವರು. ಪರಿಸ್ಥಿತಿ ಹೀಗಿರುವಾಗ ಆ ಕೋಮನ್ನು ಇಷ್ಟೊಂದು ಕೀಳುಮಟ್ಟದಲ್ಲಿ ಕಂಡಿರುವುದಕ್ಕೆ, ಮೇಲ್ಜಾತಿಯವರ ಪೂರ್ವಾಗ್ರಹಪೀಡಿತವಾದ ಯೋಚನೆಗಳೇ ಇರಬಹುದಲ್ಲವೆ?

'ಮಾದ್ಗನ ದೇವರ್ಗೆ ಎಕ್ಕಡದ ಪೂಜೆ'—ಈ ಗಾದೆ ಬಹುಪಾಲು ಮೇಲ್ಜಾತಿಯವರ ಪರಿಸರದಲ್ಲೇ ಬಳಕೆಯಲ್ಲಿರುವುದೆಂದು ಸುಲಭವಾಗಿ ಊಹಿಸಬಹುದು. 'ಮಾದಿಗ' ಜಾತಿಯವರು ಸಮಾಜದ ತೀರ ಕೆಳಸ್ತರದಲ್ಲಿದ್ದು, ಊರುಕೇರಿಗಳ ಎಲ್ಲ ಹೊಲಸನ್ನೂ ಸ್ವಚ್ಛ ಮಾಡಿ, ಕರುಣಾಜನಕವಾದ ಪರಿಸ್ಥಿತಿಯಲ್ಲಿ ಬದುಕುತ್ತಿರುವವರು. ಮಾದಿಗನಾದವನ ವ್ಯಕ್ತಿತ್ವ, ಅವನ ದೇವರು, ನಂಬಿಕೆ ಎಲ್ಲವನ್ನೂ ಇಷ್ಟೊಂದು ತುಚ್ಛವಾಗಿ ಕಂಡಿರುವ ಈ ದೇಶದ ಸಂಸ್ಕೃತಿ, ಯಾವ ರೀತಿಯಿಂದ ನಮ್ಮ ಹೆಮ್ಮೆಯ ಪ್ರತೀಕವಾಗಿ ನಿಲ್ಲಬಲ್ಲುದು? ಈ ಸಂಸ್ಕೃತಿಯೂ ನಮ್ಮ ಸನಾತನ ಪರಂಪರೆಯ ಪ್ರತೀಕವೆ? ಹೀಗೆಲ್ಲ ಯೋಚಿಸಿದಾಗ, ನಾವು ಸಾವಿರಾರು ವರುಷದಿಂದ ಬೆಳೆದು ಉಳಿದು ಬಂದಿರುವ ನಮ್ಮ ಸಂಸ್ಕೃತಿಯನ್ನು ಮೂಲಭೂತವಾಗಿ ಪ್ರಶ್ನಿಸಬೇಕಾಗುತ್ತದೆ. ಆ ಮೂಲಕ ಈ ಸಂಸ್ಕೃತಿಯ

---

* ಪರಿವಾರ ಜನಾಂಗಕ್ಕೆ ರಾಜಪರಿವಾರ, ತೊರೆಯರು, ನಾಯ್ಕರು ಎಂಬ ಬೇರೆಬೇರೆ ಹೆಸರುಗಳಿವೆ. ಮೈಸೂರು ಜಿಲ್ಲೆಯಲ್ಲಿ ಪ್ರಮುಖವಾಗಿ ಇರುವ ಈ ಜನಾಂಗದವರು ಸ್ವಾಭಿಮಾನಿಗಳು, ಸಾಹಸಿಗಳು. ಆರ್ಥಿಕವಾಗಿ ತೀರ ಕೆಳಮಟ್ಟದಲ್ಲಿರುವ ಇವರಲ್ಲಿ ಪ್ರಾಮಾಣಿಕತೆಯೂ ಎದ್ದು ಕಾಣುವ ಲಕ್ಷಣ.

ಇನ್ನೊಂದು ಮುಖವನ್ನೂ ನಾವು ಕಂಡುಕೊಳ್ಳಬೇಕಾಗುತ್ತದೆ, ಸಂಸ್ಕೃತಿಯ ಬಗ್ಗೆ ಮಾತನಾಡುವಾಗ ಸಾಕಷ್ಟು ಎಚ್ಚರ ವಹಿಸಬೇಕಾಗುತ್ತದೆ.

ಬಡತನವನ್ನು ಕುರಿತ ಚಿಂತನೆಗಳು: 'ಉಳ್ಳವರು ಉಳ್ಳದವರು' ನಡುವೆ ಇರುವ ತಾರತಮ್ಯ ಇಂದಿಗೂ *ಹಲವಾರು ದೇಶಗಳಲ್ಲಿ ಸ್ಪಷ್ಟವಾಗಿ

* ಸಮಾಜವಾದೀ ರಾಷ್ಟ್ರಗಳಾದ ಚೀನ, ವಿಯೆಟ್ನಾಂ ಮುಂತಾದ ದೇಶಗಳನ್ನು ಬಿಟ್ಟು.

ಎದ್ದು ಕಾಣುತ್ತಿವೆ. ನಮ್ಮ ದೇಶದಲ್ಲೂ ಈ ಪರಿಸ್ಥಿತಿ ಸಮೃದ್ಧವಾಗಿದೆ. ಇದನ್ನು ಕುರಿತ ಚಿಂತನ ಮಂಥನಗಳನ್ನು ಗಾದೆಗಳಲ್ಲೂ ಕಾಣಬಹುದಾಗಿದೆ.

ಅರಮನೆ ಹತ್ತಿರ ನೆರಮನೆ ಇರಬಾರದು

'ಅರಮನೆ' ಶ್ರೀಮಂತಿಕೆಯನ್ನೂ 'ನೆರಮನೆ' ಬಡತನವನ್ನೂ ಪ್ರತಿನಿಧಿಸುತ್ತದೆ. ಶ್ರೀಮಂತರ ದಬ್ಬಾಳಿಕೆ, ವೈಭವಗಳ ನಡುವೆ ಬಡವರಾದವರು ಕುಗ್ಗಿ ಅಶಾಂತಿಯನ್ನು ಹೊಂದುತ್ತಾರೆ ಎಂಬುದನ್ನು ಈ ಗಾದೆ ಸೂಚ್ಯವಾಗಿ ತಿಳಿಸುತ್ತದೆ.

ಬಡವನಾದವನಿಗೆ ಸಮಾಜದಲ್ಲಿ ಯಾರ ಬೆಂಬಲವೂ ಇರುವುದಿಲ್ಲ. ಅವನು ತನ್ನ ನೋವು ಸಂಕಷ್ಟಗಳಿಗೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲಾರ. ಹಾಗೇನಾದರೂ ಒಂದು ಸಮಯ ಆತ ಪ್ರತಿಕ್ರಿಯೆ ತೋರಿಸಿದ್ದಾದರೆ ಅದು ಅವನಿಗೆ ಆಪತ್ತು ತರಿಸುತ್ತದೆ ಎಂಬುದನ್ನು 'ಬಡವನ ಕೋಪ ದವಡೆಗೆ ಮೂಲ' ಎಂಬ ಗಾದೆಯಲ್ಲಿ ಕಾಣಬಹುದು. 'ಬಡವನ ಹೆಂಡತಿ ಊರಿಗೆಲ್ಲ ಹೆಂಡತಿ'ಯಾದರೂ ಬಡವ ಅದನ್ನು ಪ್ರತಿಭಟಿಸಬಾರದು. ಆದುದರಿಂದಲೇ 'ಬಡವ ನೀ ಮಡಗ್ದಂಗಿರು' ಎಂದು ಇನ್ನೊಂದು ಗಾದೆ ಬಡವನಾದವನಿಗೆ ನೀತಿ ಹೇಳುತ್ತದೆ!

'ದೊಡ್ಡೋನ ಹಗೆ(ಗುಳಿ) ತೆಗೆಯುವ ಹೊತ್ತಿಗೆ ಬಡವನ ಜೀವ ಹೋಯ್ತು' ಎಂಬ ಗಾದೆಯಲ್ಲಿ ಬಡವರ ಪ್ರಾಣದೊಂದಿಗೆ ಸಾಹುಕಾರರು ನಡೆಸುವ ಚೆಲ್ಲಾಟದ ಚಿತ್ರಣವಿದೆ. 'ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣಸಂಕಟ' ಎಂಬ ಗಾದೆಯನ್ನು ಮೇಲಿನ ಮಾತು ನಮಗೆ ನೆನಪು ಮಾಡಿಕೊಡುತ್ತದೆ. 'ಬಡವರ ಮಕ್ಕಳ ಬಾವಿಗೆ ತಳ್ಳಿ ಆಳ ನೋಡಿದ್ರಂತೆ' ಎಂಬಲ್ಲಿ ಬಡವರನ್ನು ತೀವ್ರ ಶೋಷಣೆಗೆ ಒಳಗು ಮಾಡಿರುವುದರ ಚಿತ್ರವಿದೆ. ಇಲ್ಲೆಲ್ಲ ಬಡವರು ಅಂದರೆ ಕೇವಲ ಆರ್ಥಿಕವಾದ ಬಡತನವೇ ಹೊರತು, ಸಾಮಾಜಿಕ ಬಡತನವಲ್ಲ, ನಡೆಯುವ ಶೋಷಣೆ ಒಂದೇ ಜಾತಿಯೊಳಗೆ ಆಗಿರಬಹುದು ಅಥವಾ ಬೇರೆ ಬೇರೆ ಜಾತಿಯವರಿಂದ ಆಗಿರಬಹುದು. ಆದರೆ, ಶೋಷಣೆ ಶೋಷಣೆಯೇ.

ಬಡತನವನ್ನು ಕುರಿತ ಇನ್ನು ಕೆಲವು ಗಾದೆಗಳಲ್ಲಿ ಪ್ರಸ್ತುತ ವ್ಯವಸ್ಥೆ ಏನಿದೆಯೋ (ಅರೆ ಊಳಿಗಮಾನ ಪದ್ಧತಿ ಅಥವಾ ಅರೆ ಬಂಡವಾಳಶಾಹಿ ಪದ್ಧತಿ) ಅದನ್ನೇ ಮುಂದುವರೆಸಿಕೊಂಡು ಹೋಗುವ ಆಶಯಗಳೂ ಇವೆ. ಜೊತೆಗೆ ಇರುವ ಪದ್ಧತಿಯನ್ನು ಸಮರ್ಥಿಸಿಕೊಂಡೇ ಹೋಗುವ ಗಾದೆಗಳೂ ಸಿಗುತ್ತವೆ. 'ಎಲ್ಲರು ಪಲ್ಲಕ್ಕಿಯಲ್ಲಿ ಕೂತರೆ ಹೊರುವವರು ಯಾರು?' ಈ ಗಾದೆಯಲ್ಲಿ ವರ್ಗ ವಿಭೇದಗಳು ಇರಬೇಕೆಂದೂ ಆ ಮೂಲಕ ಬಡತನ ಶ್ರೀಮಂತಿಕೆಯನ್ನು ಎತ್ತಿ ಹಿಡಿಯುತ್ತಿರುವುದೂ ಸ್ಪಷ್ಟವಾಗಿ ಕಾಣುತ್ತಿದೆ. ಇದ ರಂತೆ 'ಜೀತಗಾರನಿಗ್ಯಾಕೆ ಜೀರಿಗೆ ಜೆಲ್ಲ?' ಎಂಬ ಮತ್ತೊಂದು ಗಾದೆ, ಜೀತಗಾರನಾದವನ ಬಗ್ಗೆ ಸಾಹುಕಾರಿಕೆ ಹೇಗೆ ಅಮಾನುಷವಾಗಿ ನೋಡು ತ್ತಿವೆ ಎಂದು ತಿಳಿಸುತ್ತದೆ. 'ಜೀರಿಗೆ ಜೆಲ್ಲ' ಶುಭ ಕಾರ್ಯಕ್ಕೆ ಬಳಸುವ ವಸ್ತು ಗಳು. ಅಂಥವುಗಳನ್ನು ಜೀತಗಾರನಾದವನು ಬಳಸಬಾರದು. ಅವೆಲ್ಲ ಅವನ ಧಣಿಗೇ ಮೀಸಲು. ಜೀತಗಾರ ಏನಿದ್ದರೂ ತನ್ನ ಒಡೆಯನ ಸೇವೆ ಮಾಡಿ ಕೊಂಡು ಅವನು ಹೇಳಿದ್ದಕ್ಕೆಲ್ಲ ತಲೆ ಕುಣಿಸುತ್ತ ಮಾತ್ರ ಸಾಗಬೇಕು ಎಂಬು ದನ್ನು ಈ ಗಾದೆ ಪರೋಕ್ಷವಾಗಿ ತಿಳಿಸುತ್ತದೆ. ಇಂಥ ಅಮಾನವೀಯವಾದ ಸಂಸ್ಕೃತಿ ನಮ್ಮದು. ಇಂಥದೇ ಒಂದು ಗಾದೆ ದಕ್ಷಿಣ ಆಫ್ರಿಕದ ಅಶಂಟಿ ಭಾಷೆ (ಜನಾಂಗವೂ ಹೌದು)ಯಲ್ಲೂ ದೊರಕುತ್ತದೆ. 'ಜೀತಗಾರನ ಬುದ್ಧಿ ಧಣಿ ತಲೇಲಿ' ಎಂಬ ಅಶಂಟಿಯ ಗಾದೆ ಅಲ್ಲಿನ ಜೀತಗಾರರ ದಾರುಣ ಪರಿಸ್ಥಿತಿಯನ್ನು ಸೂಚಿಸುತ್ತದೆ. ಶ್ರೀಮಂತಿಕೆಯ ದೌಲತ್ತು ಜಗತ್ತಿನಲ್ಲಿ ಎಲ್ಲೆಲ್ಲಿ ಹೋದರು ಒಂದೇ ರೀತಿಯಲ್ಲಿರುತ್ತದೆ ಎನ್ನುವುದಕ್ಕೆ ಈ ಒಂದು ಗಾದೆಯ ನಿದರ್ಶನ ಸಾಕಲ್ಲವೆ?

ಆದರೆ, ಅದೇ ಸಾಹುಕಾರಿಕೆ ಇದ್ದಾಗ ಪರಿಸ್ಥಿತಿ ಹೇಗಿರುತ್ತದೆ? ಒಂದು ಗಾದೆ ಹೇಳುತ್ತದೆ 'ಹೊನ್ನಿದ್ದವ್ಮನ ತೊನ್ನು ಮುಚ್ಚಿತು, ಮಕ್ಕಳಿದ್ದವ್ಮನ ಹಾದರ ಮುಚ್ಚಿತು' ಈ ಗಾದೆಯಲ್ಲಿ ಹಣ ಪೊಂದಿದ್ದರೆ ವ್ಯಕ್ತಿಯ ಲೋಪದೋಷ ಗಳೆಲ್ಲ ಮುಚ್ಚಿಹೋಗುವವು ಎಂಬುದನ್ನು ಸೂಚಿಸಲಾಗಿದೆ. ಬಡಹಳ್ಳಿಗರು ತಮ್ಮ ಹಳ್ಳಿಗಾಡುಗಳಲ್ಲಿ ಏನನ್ನು ಅನುಭವಿಸಿದರೋ ಅದನ್ನೇ ಇಲ್ಲಿ ಗಾದೆ ಗಳನ್ನಾಗಿ ರೂಪಿಸಿದ್ದಾರೆ. ಇದೇ ರೀತಿ 'ದುಡ್ಡಿದ್ದವನೇ ದೊಡ್ಡಪ್ಪ' ಎಂಬಲ್ಲಿ ಹಣದ ಪ್ರಾಮುಖ್ಯವನ್ನು ತಿಳಿಸಲಾಗಿದೆ.

ಹೀಗೆ, ಗಾದೆಗಳನ್ನು ಕೆದಕುತ್ತಾ ಹೋದರೆ, ನಮ್ಮ ಜನಪದ ಸಂಸ್ಕೃತಿಯ ಇತರ ಮುಖಗಳು ಕೂಡ ನಮಗೆ ಕಂಡುಬರುತ್ತವೆ. ಒಂದು ಸಂಸ್ಕೃತಿಯ

ಗುಣದೋಷಗಳನ್ನೆಲ್ಲ ಸರಿಯಾಗಿ ಗ್ರಹಿಸದೆ ಹೊಗಳುತ್ತಾ ಬರುವುದು ಅಷ್ಟೊಂದು ಸಾಧುವಾದುದಲ್ಲ ಅನ್ನಿಸದೆ ಇರಲಾರದು. ಈ ಸಂದರ್ಭದಲ್ಲಿ 'ನಮ್ಮ ದೇಶದ ಬಹುಪಾಲು ಜನ' ಅತಿಪ್ರಾಚೀನ ಕಾಲದಿಂದಲೂ ಜನಪದ ಸಂಸ್ಕೃತಿಯಲ್ಲಿ ಬೆಳೆದು ಬಂದವರು. ಈ ಸಂಸ್ಕೃತಿ, ನಮ್ಮ ದೇಶದ ನೆಲನದಿ ಆಕಾಶ ಪರ್ವತ ಚಂದ್ರ ಸೂರ್ಯರಂಗೆ ಅನಾದಿಯಾದುದು' ಎಂಬ ಡಾ|| ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ, ಅಂಥವರ ಮಾತನ್ನು ಕೂಡ ನಾವು ಪುನರ್ವಿಮರ್ಶಿಸಬೇಕಾಗುತ್ತದೆ.

ಹೊರೆಯಾಲ ದೊರೆಸ್ವಾಮಿ



ಅನ್ಯರನ್ನು ಆಳಬೇಕಾದವನು ಮೊದಲು ತನ್ನನ್ನು ತಾನು ಆಳಿಕೊಳ್ಳಬೇಕು; ಆಳವಾದ ತಿಳುವಳಿಕೆ, ಉನ್ನತವಾದ ಜ್ಞಾನ, ಸಂಪತ್ತಿನಿಂದ ಆತ ಶ್ರೀಮಂತನೂ ಆಗಿರಬೇಕು.

—ಮ್ಯಾಸಿಂಜರ್

ಭವಿತವ್ಯಕ್ಕಾಗಿ ಮಾಡಬೇಕಾದ ಸರ್ವೋತ್ಕೃಷ್ಟ ಸಿದ್ಧತೆಯೆಂದರೆ, ವರ್ತಮಾನ ಕಾಲವನ್ನು ಸರಿಯಾಗಿ ನೋಡಿಕೊಳ್ಳುವುದೂ ಹಾಗೂ ಕಟ್ಟಕಡೆಯ ಕರ್ತವ್ಯವನ್ನೂ ಕೂಡ ಸರಿಯಾಗಿ ನಿರ್ವಹಿಸುವುದೂ ಆಗಿದೆ.

—ಜಿ. ಮ್ಯಾಕ್ಡೊನಾಲ್ಡ್

ತನ್ನ ಮರ್ಯಾದೆಗಾಗಿ ತನ್ನ ಸರ್ವಸ್ವವನ್ನೂ ಸಂತೋಷದಿಂದ ಈಡಾಡಲಾರದ ರಾಷ್ಟ್ರವು ಕ್ಷುದ್ರವಾದುದೇ ಸರಿ.

—ಷಿಲ್ಲರ್

ಶ್ರೀಕಂಠ ನಗಾರಿ ನಾದ

ಹೇ ಗಣಪತಿ ಘನಮತಿ ಚಣಚಣ ಕೆರಗುವೆ ನಿಜಮತಿ ಕೊಡು ನೀ ದಿನಾದಿನಾ
ಗುಣಮಣಿ ಕುಲಮಣಿ ಕನ್ನಡ ದರಗಿಣಿ ಮಾನ್ಯರ ಕಥೆಯಿದ ಪೇಳುವೆ ನಾ

ಕನ್ನಡನಾಡಿನ ಅಂದಿನ ವೈಭವ ಎಷ್ಟೆಂತ್ಹೇಳಲಿ ನಾನದನ
ಚಿನ್ನದ ಬಾಗಿಲು ರನ್ನದ ಗೋಪುರ ಮೆರೆಯುವ ಗುಂಡಿ ಗುಂಪಾರವನ
ರನ್ನ ಹೊನ್ನ ಸಂಪನ್ನರು ಬೆಳಗಿದ ಕನ್ನಡ ಜ್ಯೋತಿಯ ಹಿರಿಮೆಯನ
ಚೆನ್ನಿಗರಾಯರು ಶೌರ್ಯದಿ ಕಟ್ಟಿದ ಕನ್ನಡನಾಡಿನ ಸೊಬಗನ್ನ
ಮುನ್ನ ರಾಮ ಬಲಭೀಮರ ಬದುಕಿನ ಹಾಡನು ಹೇಳುವ ಶಿಲ್ಪವನ
ಉನ್ನತ ಕಲೆಗಳ ಸೊಬಗನು ಬೀರಿದ ಕನ್ನಡ ದೇವಿಯ ಸಿರಿಯನ್ನ

ಸೂರೆಮಾಡಿದಾರೆ ನಮ್ಮ ಸಿರಿಯ ನಾವಾಗಿದೇವೆ ಬರಿದುಗೈಯ
ಮೆಟ್ಟಿತುಳಿಯುತಾರೆ ನಮ್ಮ ತಾಯ ಕವಿದಿತ್ತು ನಮಗೆ ಬಲು ಮಾಯ
ಸಾಹಿತ್ಯ ಬಿಡುತಲಿದೆ ಬಾಯ ತಿಳಿದಿಲ್ಲ ನಮಗೆ ಇದರಾಯ

ಕನ್ನಡಿಯಂಥ ಕನ್ನಡನಾಡು ಕಟ್ಟು ಹರಿದು ಕಳಚಿ ಬಿದ್ದು
ಮಣ್ಣುಗೂಡಿ ಹೋಗುವುದು ತಿಳಿಯದ್ಹಾಂಗ
ಕಣ್ಣುಮುಚ್ಚಿ ಕುರುಡರ್ಹಂಗೆ ಕೈಯ ಕಟ್ಟಿ ಕುಳಿತರ್ಹಂಗೆ
ದಾಳಿಯಾಗುತಾವೆ ನೋಡು ಒಳಗೊಳಗ

ಕರುಳು ಕರಗಿದಾವೆ ಶ್ರೀಯುವರು ಸೆರಗ್ಹಿಡಿಯ ಒರಸೆ ಕಣ್ಣೀರ
ಮರುಗಿ ಹೇಳುತಾರೆ ಮಾತೆಯು ಕಷ್ಟ ನಾ ಮಾಡತೇನೆ ಪರಿಹಾರ
ಹರಸಿ ಕಳುಹು ತಾಯೆ ನಾ ಕುವರ ಬಿಡು ಇನ್ನು ಮನದ ಬೇಸರ


ಹೇ ಬಂಟ ನಮ್ಮ ಶ್ರೀಕಂಠಯ್ಯ ಸೊಂಟ ಕಟ್ಟಿ ನಿಂದ್ರು ನೋಡು
ಸುಂಟರ ಗಾಳಿ ಬೀಸಿದ್ಹಾಂಗೊಂದೆ ಚಣಕ
ಎಂಟು ಮೂಲಿಗೆದ್ರು ನಮ್ಮ ನೆಂಟರೆಲ್ಲ ಕೂಡಿಕೊಂಡು
ಶ್ರೀಕಂಠ ನಗಾರಿ ನಾದಕ್ಕ

ಬಳ್ಳಾರಿ ಧಾರವಾಡ ಮಂಗಳೂರು ಕಾರವಾರ ಜಮಖಂಡಿ
ಬೆಳಗಾಂವ ಬಿಜಾಪುರ
ರಾಯಚೂರು ಕಲ್ಲಬುರ್ಗಿಯವರ್ನೆಲ್ಲ ಕರೆದರು ಮತ್ತೆ
ನೋಡು ಬಿದರೆಯ ನಾಡವರ

ಮೇಳಗೂಡಿ ಮಾತನಾಡಿ ಪಾಳಿ ಮಾಡಿಕೊಂಡರಪ್ಪ
ತಾಯಿಯ ಬಂಧನ ಬಿಡಿಸುದಕೆ
ಮೂಲ ಪುರುಷರಾಗಿ ಮುಂದೆ ಹೆಗಲ ಕೊಟ್ಟು ನಿಂತರಪ್ಪ
ಶ್ರೀಕಂಠ ಗುರು ಕಣ್ವ ಕನ್ನಡಕೆ

ಕರ್ನಾಟ ಮಾತೆಯ ಭಕ್ತ ಸಾಹಿತ್ಯ ದೊಳಗೆ ಬಲುಶಕ್ತ
ಭಲೆ ರಾಜಸೇವಾಸಕ್ತ ಜಿರುದಾಂತ ಕನ್ನಡದ ರಕ್ತ
ಕನ್ನಡಕೆ ದುಡಿಯುತ್ತಾರೆ ನಿತ್ಯ ಬಹುಕಾಲ ಜೆಳೆಯ ವಿವರ ಕೃತ್ಯ
ಹೇ ಗಡಿಯ ನೋಡಿ ಗೊತ್ತು ಮಾಡಿ ಗುಡಿಯ ಕಟ್ಟಿ ತೊಡೆಯ ತಟ್ಟಿ
ಹೊಡೆದು ನಿಂತ ವೀರ ಜಯ ಭೇರಿಯನ
ಪೊಡವಿ ಗೊಡೆಯ ಶ್ರೀಕಂಠನ ಅಡಿಯ ನಂಬಿ ಪಡೆಯೊ
ಮುಕ್ತಿಗೊಡೆಯನಾದ ಶ್ರೀ ಗುರು ಮಲ್ಲೇಶನ

ರಚನೆ: ದಿ. ಮೂಗೂರು ಮಲ್ಲಪ್ಪ
ಸಂಗ್ರಹ ಸಂಪಾದನೆ: ದೇಜಗೌ



ಕೀಳು ವರ್ಗದ ಸಮಾಜ ಶತ್ರುಗಳು, ನಿಜವಾದ ಬುದ್ಧಿ ಮತ್ತೆ ಮತ್ತು ಸದ್ಗುಣಗಳನ್ನು ದ್ವೇಷಿಸಿ, ಅನ್ಯರನ್ನು ನೆಲಕ್ಕೆ ಳೆದು ದುಷ್ಟತನದಿಂದ ತಾವು ಮೇಲೆದ್ದು ಮೆರೆಯುವ ಮಹತ್ವಾಕಾಂಕ್ಷೆ ಹೊಂದಿರುತ್ತಾರೆ.

—ಡ್ರ್ಯಾಡೆನ್

ಭಾರತೀಯ ಜ್ಯೋತಿಶ್ಯಾಸ್ತ್ರ ದಿಗಂತದ ತಾರೆಗಳು :
ಘಾಗ-ಗಡ್ಜರಿ

ಧಾರಾ ನಗರದ ರಾಜ ಡಂಗೂರ ಹೊಡೆಸುತ್ತಾ, "ನಮ್ಮ ರಾಜ್ಯದಲ್ಲಿ ಮಳೆ ಇಲ್ಲದೆ ಮೂರು ವಸಂತಗಳು ಕಳೆದು, ಜನ, ಜಾನುವಾರುಗಳ ಸ್ಥಿತಿ ಗಂಭೀರವಾಗಿದೆ. ಇದೇ ಸ್ಥಿತಿ ಮುಂದುವರಿದರೆ ದುಃಸ್ಥಿತಿಯ ದಾವನು ಎಲ್ಲವನ್ನೂ ದಹಿಸಬಹುದು. ಮಳೆ ಬರುವಂತೆ ಯಜ್ಞಯಾಗಾದಿಗಳನ್ನು ಮಾಡುವವರಿಗೆ ನೆರವುಕೊಟ್ಟೆವು. ಮಳೆಯ ಮುಹೂರ್ತ ತಿಳಿಸಿದವರಿಗೆ ಮಳೆ ಬಂದೊಡನೆ ಬಹುಮಾನ ಕೊಡುತ್ತೇವೆ" ಎಂದು ಪ್ರಚಾರ ನಡೆಸಿದ್ದರು.

ಅದು ೧೬೬೭ನೇ ಇಸವಿ ಕಾಲ. ಅಕ್ಬರ್ ಸರಾಯ್‌ನಿಂದ ಉದ್ಯೋಗಾಕಾಂಕ್ಷಿಯಾಗಿ ಬಂದ ಜ್ಯೋತಿಷ್ಯಶ್ಯಾಸ್ತ್ರಜ್ಞ ಘಾಗ ಈ ಘೋಷಣೆ ಕೇಳಿದ. ಕೂಗಿದ ಘಳಿಗೆಯನ್ನು ಆಧಾರವಾಗಿಟ್ಟು ಗುಣಿಸಿದ, ತರ್ಕಿಸಿದ. ಆತನ ಮನಸ್ಸಿನ ತಾರ್ಕಣೆಯಂತೆ ಹೇಳಿಯೇ ಬಿಟ್ಟ "ಇನ್ನು ಎಂಟು ತಾಸುಗಳು ಕಳೆವುದರಲ್ಲಿ ಈ ರಾಜ್ಯದಲ್ಲಿ ಮಳೆಯಾಗುತ್ತೆ" ಎಂದು. ರಾಜಭಟರು ಈ ವಾರ್ತೆಯನ್ನು ಮಹಾರಾಜರಿಗೆ ತಿಳಿಸಲು ಹೋದರು.

ಇತ್ತ ಘಾಗ, ಶಕುನ ಅರಸುತ್ತಾ ನಾಲೆಯ ಬಳಿ ಬಂದಾಗ ಪರಿಶಿಷ್ಟ-ಜನಾಂಗದ ಲಲನೆಯೊಬ್ಬಳು ಆಕೆಯ ಹೆಸರು ಗಡ್ಜರಿ. ನಾಲೆಯಾಚೆ ಕುರಿಗಳೊಡನೆ ನಿಂತಿದ್ದ ತಂದೆಯನ್ನು ಕೂಗಿ, ಅಪ್ಪಾ ಬೇಗ ಮಂದೆಯನ್ನು ಇತ್ತ ಕರೆದುಕೊಂಡು ಬಾ ನಮ್ಮ "ವಾಡಿ"ಗೆ ಹೋಗೋಣ. ಸ್ವಲ್ಪ ಹೊತ್ತಿನಲ್ಲಿ ಭಾರಿ ಮಳೆ ಆಗಲಿದೆ ಎಂದಳು. ಆಗ ಆಕೆಯ ತಂದೆ ಏನು ಖಾತ್ರಿ ಮಳೆ ಆಗುತ್ತೇಂತ, ಮೂರು ವರ್ಷದಿಂದ ಒಂದು ಹನಿ ಮಳೆ ಕಾಣೆ ಎಂದು ಸವಾಲ್ ಹಾಕಿದಂತೆ ಹೇಳಿದಾಗ, ಗಡ್ಜರಿಯು ಅಪ್ಪಾ ಇಲ್ಲಿ ನೋಡು ನಿನ್ನೆ ಇಲ್ಲಿ ಮೊಟ್ಟೆಗಳನ್ನಿಟ್ಟಿದ್ದ ಕಪ್ಪೆ, ಅವುಗಳನ್ನೆಲ್ಲಾ ಬಿದರಿನ ಪೊಟರೆಗೆ ಸಾಗಿಸುತ್ತಿದೆ. ಆ ಕಡೆ ಇರುವೆಗಳು ಸಾಲುಕಟ್ಟಿ ಸಿಕ್ಕ ಆಹಾರ ಕಚ್ಚಿ ಕಪ್ಪೆಮೇಲಿನ ಚಪ್ಪಡಿ ಮೇಲಿನ ಕಂದರಕ್ಕೆ ಹೋಗುತ್ತಿವೆ. ಇಲ್ಲಿ ನೋಡು ಕತ್ತೆಗಳು ಕಿವಿ ನಿಗರಿಸಿ ಸುತ್ತ ತಿರುಗಿ ನೋಡುತ್ತಾ ಕಾಲು ಜಾಡಿಸುತ್ತಿವೆ. ಇದೆಲ್ಲ ಮಳೆ ಬರುವ ಲಕ್ಷಣ ಕಣಪ್ಪ ಎಂದಳು.

ಘಾಗನು, ಈ ತಂದೆ ಮಗಳ ಸಂವಾದ ಹಾಗೂ ಪರಿಸರ ನೋಡಿ ನಿಶ್ಚಿಂತೆಯಿಂದ ಛತ್ರಕ್ಕೆ ಹಿಂತಿರುಗಿದ.

ಘಾಗ ಮಳೆ ಸುಳಿವಿತ್ತ ಆರು ತಾಸುಗಳು ಕಳೆಯುವುದರಲ್ಲೆ ಹಠಾತ್ತನೆ ಆಗಸವೆಲ್ಲಾ ದಟ್ಟವಾದ ಮೋಡ ಕವಿದು ಗುಡುಗು ಮಿಂಚು ಗಾಳಿ ಬೀಸಿ ನಿರಂತರವಾಗಿ ಮಳೆ ಪ್ರಾರಂಭವಾಯಿತು.

ಆ ಕೂಡಲೆ ಧಾರಾನಗರದ ರಾಜ ಛತ್ರದಲ್ಲಿದ್ದ ಘಾಗನನ್ನು ಆಸ್ಥಾನಕ್ಕೆ ಕರೆಸಿ, ಹಸ್ತ ಲಾಘವ ನೀಡಿ, ನಿಮ್ಮ ಭವಿಷ್ಯ ನಿಜವಾಗಿ ನಮ್ಮ ರಾಜ್ಯದ ಜನ, ಜಾನುವಾರು, ನೆಲ ತಣಿದಿವೆ. ನೀವು ನಮ್ಮ ಆಸ್ಥಾನ ವಿದ್ವಾಂಸರಾಗಿ ನಿಲ್ಲಬೇಕು ಎಂದು ಮರ್ಯಾದೆಮಾಡಿ ಪಲ್ಲಕ್ಕಿಯಲ್ಲಿ ಕಳುಹಿಸಿದನು.

ಪಲ್ಲಕ್ಕಿಯಲ್ಲಿ ಕುಳಿತ ಘಾಗ, ಕೂಡಲೆ, ಗಡ್ಡರಿಯ ಮನೆಯತ್ತ ಹೋಗಲು ಸೇವಕರಿಗೆ ತಿಳಿಸಿದ. ಅಂತೆಯೇ ಅವರು ಆಕೆ ಮನೆಗೆ ಹೋದಾಗ ಘಾಗನು, ಗಡ್ಡರಿಯ ತಂದೆಯನ್ನು ಕರೆದು, ನಿಮ್ಮ ಪುತ್ರಿಯ ವ್ಯವಹಾರ ಹಾಗೂ ಪರಿಸರ ಜಾಣ್ಮೆ ಅರಿತು ಆನಂದವಾಯಿತು. ಆಕೆ ವಿವರ ಹೇಳಿ ಎಂದಾಗ ಆತ, ಆಕೆ ಸ್ವಲ್ಪ ಮಟ್ಟಿಗೆ ಶಾಲಾ ಪಾಠ ಪ್ರವಚನ ಮಾಡಿರುವ ಅವಿವಾಹಿತ ಕನ್ಯೆ. ಮನೆ ಅಡುಗೆ ಹಾಗೂ ಮಿಕ್ಕ ಸಮಯ ಕುರಿ ಕಾಯುವ ಕಾಯಕ ಮಾಡುತ್ತಾಳೆ ಎಂದರು.

ಶ್ರೀಯುತರೆ, ನಾನು ನಿಮ್ಮ ಪುತ್ರಿಯನ್ನು ವಿವಾಹ ಆಗಬಯಸುವೆ ಎಂದಾಗ "ಎಲ್ಲಾದರೂ ಉಂಟೆ ನಾವು ಪರಿಶಿಷ್ಟರು ನೀವು ಬ್ರಾಹ್ಮಣರು" ಎಂದು ಗಡ್ಡರಿ ತಂದೆಯವರು ಹೇಳಿದಾಗ "ನಾನು ಗಡ್ಡರಿಯ ಜಾತಿಯನ್ನು ನನ್ನ ಜಾತಿಯೊಂದಿಗೆ ಮದುವೆ ಆಗಲು ಬಂದಿಲ್ಲ. ಗಡ್ಡರಿಯ ವಿದ್ಯಾ ಪ್ರೌಢಿಮೆ ಕಂಡು ಒಲವಿನಿಂದ ವಿವಾಹ ಆಗಬಯಸಿದ್ದೇನೆ "ಎಂದು ಘಾಗ ಹೇಳಿದರು.

ನಂತರ ಆಸ್ಥಾನದ ಪ್ರಮುಖರು ಕಲೆತು ಚರ್ಚಿಸಿ, ಕಡೆಗೆ ಘಾಗ ಮತ್ತು ಗಡ್ಡರಿಯರ ವಿವಾಹ ನೆರವೇರಿಸಿದರು. ಮುಂದೆ ಘಾಗ–ಗಡ್ಡರಿ ಸಂವಾದ ಬಹುಕಾಲ ಉಳಿಯುವ ಸಾಹಿತ್ಯವಾಗಿ ಮೆರಗಿತು.

ಹ. ಲ. ಶ್ರೀಕಂಠಮೂರ್ತಿ

ಒಂದು ದೇಶವು ಏನು ಆಗಿದೆಯೋ ಆ ಸ್ಥಿತಿಯಿಂದ ಆ ದೇಶವು ಏನು ಆಗಬೇಕಾಗಿದೆಯೋ ಆ ಸ್ಥಿತಿಗೆ ಒಯ್ದು ಮುಟ್ಟಿಸುವ ಕಲೆಯೇ ನಿಜವಾದ ರಾಜಕೀಯ ಮುತ್ಸದ್ದಿತನವಾಗಿದೆ.

—ಡಬ್ಲ್ಯು. ಆರ್. ಅಲ್ಜರ್

ಡಾ|| ಐನ್‌ಸ್ಟೈನರ ಆಶ್ಚರ್ಯಕರ ಹಾರುವ ಯಂತ್ರ

ಆಲ್ಬರ್ಟ್ ಐನ್‌ಸ್ಟೈನರು ವಿಜ್ಞಾನ ಪ್ರಪಂಚಕ್ಕೆ ನಂಬಲಾರದ ಕೊಡುಗೆಯನ್ನು ಸಲ್ಲಿಸಿರುವರು. ನಾನು ೧೫ ವರ್ಷ ವಯಸ್ಸಿನವನಿದ್ದಾಗ ನಡೆದ ಒಂದು ಸಂಗತಿಯ ಆನಂದಮಯ ನೆನಹಿಗೂ ಅವರೇ ಕಾರಣ.

೧೯೩೧ನೆ. ಇಸವಿಯ ವಸಂತಋತು. ಡಾ| ಐನ್‌ಸ್ಟೈನರು ತಮ್ಮ ಪತ್ನಿಯೊಡನೆ ಕ್ಯಾಲಿಫೋರ್ನಿಯಾದ ಬರ್‌ಬ್ಯಾಂಕಿನಲ್ಲಿರುವ ವಾರ್ನರ್ ಸಹೋದರರ ಸ್ಟುಡಿಯೋಗೆ ಭೇಟಿಕೊಡಬೇಕಾಗಿದ್ದ ದಿನ. ಅಂಥ ಹೆಸರಾಂತ ಆಗಂತುಕರು ಬರುವರೆಂಬ ಗಡಿಬಿಡಿಯಲ್ಲಿ ನಮ್ಮ ತಂದೆ, (ಜ್ಯಾಕ್ ವಾರ್ನರ್, ತಮ್ಮ ಮೂವರು ಹಿರಿಯ ಸಹೋದರರ ಜತೆಯಲ್ಲಿ 'ವಾರ್ನರ್ ಸಹೋದರರು, ಚಲನಚಿತ್ರ ನಿರ್ಮಾಪಕರು, ಹಂಚಿಕೆದಾರರು ಮತ್ತು ಪ್ರದರ್ಶಕರು' ಸಂಸ್ಥೆಯ ಸಂಸ್ಥಾಪಕರು) ನನಗೆ ಶಾಲೆಯಿಂದ ರಜಾ ತೆಗೆದುಕೊಂಡು ಸ್ಟುಡಿಯೋಗೆ ಬರಬೇಕೆಂದೂ ನನ್ನ ಕೆಲವು ವಿಶೇಷ ತೆರನಾದ ಜಾದುವನ್ನು ಆ ಹಿರಿಯರಿಗೆ ತೋರಿಸಲು ತಮಗೆ ಸಹಾಯ ನೀಡಬೇಕೆಂದೂ ಹೇಳಿದರು. ಆ ದಿನ ಬೆಳಗ್ಗೆ ನಮಗೆ ತಯಾರಾಗಲು ಸಾಕಷ್ಟು ಸಮಯವಿಲ್ಲದಿದ್ದರೂ ನಮ್ಮ ಕುಶಲ ಕೆಲಸಗಾರರು ತಮ್ಮ ಯಂತ್ರಗಳನ್ನೂ ಬೆಳಕುಗಳನ್ನೂ ಸಿದ್ಧ ಮಾಡಿಟ್ಟುಕೊಂಡರು.

ಇಷ್ಟಾದಾಗ ಐನ್‌ಸ್ಟೈನರೂ ಅವರ ಪರಿವಾರದವರೂ ಬಂದೇ ಬಂದರು. ಸ್ಟುಡಿಯೋದಲ್ಲಿಯ ಆಡಳಿತಗಾರರು, ಯಂತ್ರಕುಶಲಿಗಳು ನಟನಟಿಯರು ಮತ್ತು ಕಚೇರಿ ಸಿಬ್ಬಂದಿಗಳ ದೊಡ್ಡ ಗುಂಪು ಹೊಳೆಯುವ ಬಿಳೀ ತಲೆಗೂದಲಿನ ಪ್ರಭಾವಳಿಯಿಂದ ಕೂಡಿ ನೋಡಿ ಹಾಕುವಂಥ ಆ ಮನುಷ್ಯನನ್ನೂ ಅವನ ಸಾಮಾನ್ಯ ರೂಪದ ಹಸನ್ಮುಖದ ಹೆಂಡತಿಯನ್ನೂ ಬಿರುಗಣ್ಣಿನಿಂದ ನೋಡಿ ಹಿಗ್ಗಿತು.

ನಾವೆಲ್ಲರೂ ನಮ್ಮ ವಿಶಾಲವಾದ ಧ್ವನಿರಂಗಕ್ಕೆ ಹೋದೆವು. ಎತ್ತರದ ರಂಗ ಮಂಚದ ಮೇಲೆ ಮೋಡೆಲ್ ಟಿ. ಮಾದರಿಯ ಫೋರ್ಡ್ ಕಾರೊಂದಿತ್ತು. ಪ್ರೊಫೆಸರರು ಜರ್ಮನ್ ಭಾಷೆಯಲ್ಲಿ ಕೇಳಿದ ಕೆಲವು ಪ್ರಶ್ನೆಗಳಿಗೆ ನಮ್ಮ ದ್ವಿಭಾಷಿ ಉತ್ತರ ಕೊಟ್ಟನು. ಆದರೆ ಹೆಚ್ಚಿನ ಮಾಹಿತಿಯನ್ನೇನೂ ಅವರಿಗೆ ಕೊಡದೆ ನಮ್ಮ ಮಾನ್ಯ ಅತಿಥಿಗಳನ್ನು ಕಾರಿನಲ್ಲಿ ಕುಳಿತುಕೊಳ್ಳುವಂತೆ ಕೇಳಿ

೧೯೬೩ರ ಆಗಸ್ಟ್ ತಿಂಗಳ 'ರೀಡರ್ಸ್ ಡೈಜೆಸ್ಟ್' ಸಂಚಿಕೆಯಲ್ಲಿ ಪ್ರಕಟವಾಗಿದ್ದ (ಜೂನಿಯರ್) ಜ್ಯಾಕ್ ವಾರ್ನರ್ ಅವರ ಲೇಖನದ ಆಧಾರ.

ಕೊಳ್ಳಲಾಯಿತು. ಹುಚ್ಚರ ನಡುವೆ ಇದ್ದ ಪ್ರತಿಭಾವಂತ ಮಂಕು ಹಿಡಿದು ನೋಡುವಂತೆ ಪ್ರೊಫೆಸರು ಸುತ್ತಲೂ ನೋಡಿದರು. ಅವರು ತಮ್ಮ ಪತ್ನಿಯನ್ನು ಮೆತ್ತಗೆ ಮೆಟ್ಟಲೇರಿಸಿ, ಕಾರಿನಲ್ಲಿ ಕುಳ್ಳಿರಿಸಿ, ತಾವು ತಿರುಗಣೆ ಚಕ್ರದ ಹಿಂದೆ ಕುಳಿತರು. ವಿಶೇಷ ಪರಿಣಾಮ ಕಾರ್ಯದ(ಸ್ಪೆಷಲ್ ಎಫೆಕ್ಟ್ಸ್) ಹೊಣೆಹೊತ್ತ ಚಿತ್ರ ಗ್ರಾಹಕ ಡಾ॥ ಮತ್ತು ಶ್ರೀಮತಿ ಐನ್‌ಸ್ಟೈನರನ್ನು ಕುರಿತು, ಅವರು ಸಾಮಾನ್ಯವಾಗಿ ಹಳ್ಳಿಗಾಡುಗಳ ಕಡೆ ಕಾರಿನಲ್ಲಿ ಹೋಗುವಾಗ ಅಕ್ಕಪಕ್ಕಗಳಲ್ಲಿ ನೋಡುವಂತೆ ಸ್ವಾಭಾವಿಕವಾಗಿ ಅಚೀಚೆ ನೋಡಬೇಕೆಂದೂ ಆದರೆ ಖಂಡಿತವಾಗಿಯೂ ತಮ್ಮ ಹಿಂದಿನ ದೊಡ್ಡ ಬಿಳೀಪರದೆಯನ್ನು ನೋಡಬಾರದೆಂದೂ ಹೇಳಿದನು.

ಕ್ಯಾಮರಾಕ್ಕೆ ಕಾಣದ ರೀತಿಯಲ್ಲಿ ಕಾರಿಗೆ ಬಿಗಿದ ತಂತಿಯ ಹಗ್ಗಗಳನ್ನು ಕೆಲವು ಕಟ್ಟಾಳುಗಳು ಅತ್ತಿತ್ತ ಎಳೆದಾಡಿದಾಗ ಕಾರು ಮೇಲೆ ಕೆಳಗೆ, ಅಕ್ಕಪಕ್ಕ ಕುಪ್ಪಳಿಸಿತು. ದೊಡ್ಡ ಎರಡು ಫ್ಯಾನುಗಳ ಕೆಳಗೆ ದಟ್ಟವಾದ ಹೊಗೆಯನ್ನು ತೂರಿದ ಮೇಲೆ ಫ್ಯಾನುಗಳನ್ನು ಬಿರುಸಾಗಿ ತಿರುಗಿಸಲು ಅವು ಐನ್‌ಸ್ಟೈನರ ತಲೆಗೂದಲನ್ನು ಕೆದರಿದವು.

ಪ್ರೊಫೆಸರರು ತಿರುಗಣೆ ಚಕ್ರವನ್ನು ಬಿಗಿಯಾಗಿ ಹಿಡಿದಿರಲು ಅವರ ಪತ್ನಿ ತಾವು ಕುಳಿತಿದ್ದ ಆಸನವನ್ನು ಗಟ್ಟಿಯಾಗಿ ಹಿಡಿದುಕೊಂಡು ಸೆಟೆದು ಕುಳಿತಿದ್ದರು. ತಮ್ಮ ಮುಖದಲ್ಲಿ ಸ್ವಲ್ಪವೂ ಮುಗುಳುನಗೆಯನ್ನೇ ತಂದುಕೊಳ್ಳದೆ ಅವರು ಒಬ್ಬರ ಮುಖವನ್ನೊಬ್ಬರು ನೋಡುತ್ತ, ಆಗಾಗ ತಮ್ಮ ಮುಂದಿನ ಛಾಯಾಗ್ರಾಹಕದ ಮಸೂರವನ್ನು ನೋಡುತ್ತಿದ್ದರೂ ಹಿಂದಿನ ಪರದೆಯನ್ನು ನೋಡಲಿಲ್ಲ. ಅವರ ಮುಂದಿದ್ದ ದೀಪಗಳ ಬಿಸಿ ಪ್ರಭೆಯಿಂದ ಅವರ ಹಣೆಗಳು ಹೊಳೆಯುತ್ತಿದ್ದವು. ಅವರ ಮುಖಗಳಿಗೆ ಹೊಗೆಯು ಕವಿಯಲು ಪ್ರೊಫೆಸರರು ತಮ್ಮ ಪತ್ನಿಯೊಡನೆ ಜರ್ಮನ್ ಭಾಷೆಯಲ್ಲಿ ಹೇಳುತ್ತಿದ್ದುದು ಏನೆಂದು ಚುರುಕಾಗಿದ್ದ ದುಭಾಷಿಗೂ ತಿಳಿಯಲಿಲ್ಲ.

ಸ್ವಲ್ಪ ಸಮಯದ ಬಳಿಕ ಪರದೆಯ ಮೇಲೆ ಕತ್ತಲೆ ಕವಿಯಿತು. ಫ್ಯಾನುಗಳನ್ನು ನಿಲ್ಲಿಸಲಾಯಿತು. ಕಾರಿನ ಕುಪ್ಪಳಿಸುವಿಕೆ ಕೊನೆಗೊಂಡಿತು. ಡಾ॥ ಐನ್‌ಸ್ಟೈನರೂ ಅವರ ಪತ್ನಿಯೂ ಕಾರಿನಿಂದ ಹೊರಬಂದು ರಂಗಮಂಚದ ಮೆಟ್ಟಲಿಳಿದು ರಂಗಸ್ಥಳದ ಮೇಲೆ ನಿಂತರು. ಆಗತಾನೇ ನಡೆದ ಸಂಗತಿಗಳಿಂದ ಸಂಪೂರ್ಣವಾಗಿ ದಿಗ್ಭ್ರಮೆಗೊಂಡವರಂತೆ ತೋರಿದರು.

ಅನಂತರ ನಾವೆಲ್ಲರೂ ಊಟಕ್ಕೆ ಹೋದೆವು. ಫಿಲ್ಮನ್ನು ಸ್ಟುಡಿಯೋದ

ಪ್ರಯೋಗಾಲಯಕ್ಕೆ ತುರ್ತಾಗಿ ಡೆವಲಪ್ ಮಾಡಲು ಕಳಿಸಲಾಯಿತು. ನಮ್ಮ ಅತಿಥಿಗಳು ಹೊರಡಲು ಸಿದ್ಧರಾದಾಗ ನಾವು ಪ್ರತಿಯೊಬ್ಬರೂ ಸ್ಟುಡಿಯೋದ ಮುಖ್ಯ ಪ್ರೊಜೆಕ್ಷನ್ ಥಿಯೇಟರಿಗೆ ನುಗ್ಗಿದೆವು. ಐನ್‌ಸ್ಟೈನ್ ದಂಪತಿಗಳನ್ನು ಪ್ರತಿಷ್ಠಾಪನಗಳಲ್ಲಿ ಕೂರಿಸಲಾಯಿತು. ಆಮೇಲೆ ಕೊಠಡಿಯಲ್ಲಿ ಕತ್ತಲು ಕವಿಯಿತು. ಬಿಳೀ ಪರದೆಯ ಮೇಲೆ ಡಾ|| ಐನ್‌ಸ್ಟೈನರು ಟಿ. ಮಾದರಿ ಕಾರಿನ ತಿರುಗಣೆ ಚಕ್ರದ ಮುಂದೆಯೂ ಶ್ರೀಮತಿ ಐನ್‌ಸ್ಟೈನರು ಅದರ ಪಕ್ಕದಲ್ಲೂ ಇರುವುದು ಕಂಡಿತು. ತತ್‌ಕ್ಷಣವೇ ಈ ಸಾಧಾರಣ ದೃಶ್ಯ ಅಸಾಧಾರಣ ವಾಯಿತು. ಬಿಳಿಯ ಹಿನ್ನೆಲೆ ಮಾಯವಾಯಿತು. ಫೋರ್ಡ್ ಕಾರು ರುಮ್ಮನೆ ನಯಾಗರಾ ಜಲಪಾತದ ಮೇಲೆ ಹಾರುತ್ತ ಮ್ಯಾನ್‌ಹಟ್ಟನ್ ಬಹುಮಂತಸ್ತಿನ ಕಟ್ಟಡ ಮತ್ತು ಸ್ವಾತಂತ್ರ್ಯ ವಿಗ್ರಹ (ಸ್ಟಾಚ್ಯೂ ಆಫ್ ಲಿಬರ್ಟಿ)ಗಳ ಮೇಲೆ ಹಾಯುತ್ತ, ಅಟ್ಲಾಂಟಿಕ್-ಸಿಟಿ ನ್ಯೂಜರ್ಸಿ ಪಟ್ಟಣಗಳಲ್ಲಿ ಮಾರ್ಗದ ಪಕ್ಕಕ್ಕೆ ಡ್ರೈವ್ ಮಾಡುತ್ತ, ಗ್ರಾಂಡ್ ಕ್ಯಾನ್ಯನ್ ಎಂಬ ಅಗಾಧ ಕಣಿವೆಗಳಲ್ಲಿ ನುಗ್ಗಿ ಜ್ಯೂವಿಸುತ್ತ, ಮೋಡಗಳ ಮಧ್ಯದಲ್ಲಿ ತೂರಿ ಆ ಮೇಲೆ ವಾರ್ನರ್ ಸಹೋದರರ ಸ್ಟುಡಿಯೋದ ಮೇಲುಗಡೆ ಹೊರ ಬರುತ್ತಿರುವುದು, ಐನ್‌ಸ್ಟೈನರ ತಲೆಗೂದಲು ಪ್ರಚಂಡವಾಗಿ ಬೀಸುತ್ತಿದ್ದ ಗಾಳಿಗೆ ಸಿಕ್ಕಾಬಟ್ಟೆ ಕೆದರಿಹೋದಾಗ, ಅದರ ಸುತ್ತ ಗಗನದ ಮಂಜು ಮುಗಿಲು ಸಿಳ್ಳೆ ಹಾಕುತ್ತ ಅವರ ಮುಂದೆ ಹಾದು ಹೋಗುತ್ತಿರುವುದು—ಈ ದೃಶ್ಯ ಮೈನವಿರೇಳಿಸುತ್ತಿತ್ತು.

ಚಿತ್ರಗಳನ್ನು ಹಿಂದುಗಡೆಗೆ ಪ್ರೊಜೆಕ್ಟ್ ಮಾಡುವ ಪ್ರೊಜೆಕ್ಟರುಗಳಿಂದ ಐನ್‌ಸ್ಟೈನರು ನೋಡಕೂಡದೆಂದು ಅಡ್ಡ ಪಡಿಸಲಾಗಿದ್ದ ಪರದೆಯ ಮೇಲೆ, ಮೇಲೆ ವಿವರಿಸಿದ ಎಲ್ಲಾ ಚಿತ್ರಗಳೂ ಬೀಳುವಂತೆ ಮಾಡಿ ಹಿನ್ನೆಲೆಯನ್ನು ನಿರ್ಮಿಸಿ ಐನ್‌ಸ್ಟೈನ್ ದಂಪತಿಗಳ ಚಿತ್ರಗಳನ್ನು ತೆಗೆಯಲಾಗಿತ್ತು. [ಹಿನ್ನೆಲೆ ಚಿತ್ರಗಳು ಪರದೆಯ ಮೇಲೆ ಓಡುತ್ತಿದ್ದಾಗ ಅವುಗಳ ಮುಂದೆ ಐನ್‌ಸ್ಟೈನ್ ದಂಪತಿಗಳು ಸ್ಥಾಯಿಯಾಗಿ ಕುಳಿತಿದ್ದರೂ ಸಾಪೇಕ್ಷವಾಗಿ ಅವರು ಕುಳಿತಿದ್ದ ಸ್ಥಾಯೀ ಕಾರೇ ಹಾರಾಡುತ್ತಿರುವಂತೆ ಕಾಣುವುದು: ಅನು.] ಪ್ರದರ್ಶನ ಮುಗಿದು ದೀಪಗಳು ಹತ್ತಿದಾಗ ಪ್ರೊಫೆಸರರ ಮುಖವನ್ನು ನೋಡಿದೆವು. ಅವರ ಹಸನ್ಮುಖ ಹಿಗ್ಗಿತ್ತು. ಅಗಾಧ ನಗೆಯಲೆಗಳನ್ನು ಸೂಸಿದರು. ಶ್ರೀಮತಿ ಐನ್‌ಸ್ಟೈನರು ಆನಂದದಿಂದ ತಲೆಯಾಡಿಸುತ್ತ ಗಂಡನ ಮುಖವನ್ನು ನೋಡಿ ದರು. ಪ್ರೊಫೆಸರು ಸಂತೋಷಾಶ್ಚರ್ಯಗಳಿಂದ ತೋಳು ಬೀಸಿದರು. ಅವರ ಕಣ್ಣುಗಳಲ್ಲಿ ತಕಪಕದ ಹೊಳಪು ಮತ್ತು ಹೊರ ಬರುತ್ತಿದ್ದಾಗ ಅವರು ಹಾಕಿದ

ಹಿರಿಹೆಜ್ಜೆಯಲ್ಲಿ ಅವರ ಮಹದಾನಂದ ಕಾಣುತ್ತಿತ್ತು.

ದುಭಾಷಿ ಅವರು ಹೇಳಿದ ಮಾತುಗಳನ್ನು ಪುನಃ ಪುನಃ ಹೀಗೆ ಹೇಳಿದನು, “ನನಗಂತೂ ತಿಳಿಯುವುದೇ ಇಲ್ಲ. ನಾನು ಹಾಗೆ ಹಾರುವುದನ್ನು ಊಹಿಸಲೂ ಸಾಧ್ಯವಿಲ್ಲ! ನೀವು ಅದನ್ನು ಹೇಗೆ ಆಗಗೊಳಿಸಿದಿರಿ? ಅದ್ಭುತ! ಅದ್ಭುತ!” ನಾವು ಹೊರಗಿನ ಬಿಸಿಲಿಗೆ ತಲೆ ಹಾಕಿದಾಗ ಅವರು ಪುನಃ ಆಶ್ಚರ್ಯದಿಂದ ತಲೆಯಾಡಿಸಿದರು. ಕಾಲಾ ಬಾಲಕನಂತೆ ಆನಂದದಿಂದ ಗಹಗಹಿಸಿದರು. ಕೂಡಲೆ ಅವರ ನಗೆಯಲ್ಲಿ ನಾವೂ ಸೇರಿದೆವು. ಖುಷಿ, ಆನಂದ ಅವರಿಂದ ಸುತ್ತಲೂ ಪಸರಿಸಿ ಸುತ್ತ ನೆರೆದಿದ್ದ ಸ್ಟುಡಿಯೋ ಸಿಬ್ಬಂದಿಯನ್ನು ಅಲೆಅಲೆಯಾಗಿ ಆವರಿಸಿತು. ಆ ಕ್ಷಣದಲ್ಲಿ ನಾವೂ ಅವರೊಡನೆ ಕೂಸುಗಳಾಗಿ ಬಿಸಿಲಿನಲ್ಲಿ ಹಸನ್ಮುಖಿಗಳಾದೆವು.

ಜಿ. ಎಸ್. ಕೇಶವಾಚಾರ್ಯ



ಹೃದಯವು ಸತ್ಯವನ್ನೇ ಶೋಧಿಸಿ ತೆಗೆಯಬಲ್ಲ ಮಹಾ ಭವಿಷ್ಯವಾದಿಯಾಗಿದೆ.

—ಕಾಲ್ಡೆರಾನ್

ಅಪರಾಧಕ್ಕೆ ಪರಮಾತ್ಮನು ಅದರ ಶಿಕ್ಷೆ ವಿಧಿಸುವ ನೊಗವನ್ನು ಹೇರಿಯೇ ಬಿಟ್ಟಿದ್ದಾನೆ.

—ಬಯಾಂಟ್

ಈ ಮನುಷ್ಯನ ಆತ್ಮವು ಆತನ ಉಡುಪುಗಳಲ್ಲಿದೆ.

—ಷೇಕ್ಸ್‌ಪಿಯರ್

ನೆಲ - ಜಲ

ನೆಲವೆಂದರೆ ಏನೆಂದು ನಿಮಗೆಲ್ಲ ಗೊತ್ತು. ಮನೆಯೊಳಗಿನ ನೆಲವನ್ನು ನಾವು ಕುಳಿತುಕೊಳ್ಳಲು, ಮಲಗಲು ಉಪಯೋಗಿಸುತ್ತೇವೆ. ಆದುದರಿಂದ ಅದನ್ನು ನುಣುಪಾಗಿ, ನಯವಾಗಿ ಹೊಳೆಯುವಂತೆ ಮಾಡಿರುತ್ತೇವೆ. ಮನೆಯ ಮುಂದಿನ ನೆಲವನ್ನು ಅಂಗಣ ಎನ್ನುತ್ತೇವೆ. ಊರಿನ ಒಳಗೆ ಅಥವಾ ಊರಿನಿಂದ ಊರಿಗೆ ತಿರುಗಾಡಲು ಮಾಡಿದ ನೆಲವೇ ದಾರಿ, ರಸ್ತೆ ಅಥವಾ ಮಾರ್ಗ. ಧಾನ್ಯ ಬೆಳೆಯುವ ನೆಲವೇ ಹೊಲ ಅಥವಾ ಬಯಲು. ಎತ್ತರವಾಗಿರುವ ಸ್ಥಳ ಬೆಟ್ಟ ಅಥವಾ ಪರ್ವತ. ತಗ್ಗಾಗಿರುವ ನೆಲ ಹೊಂಡ ಅಥವಾ ಕಣಿವೆ. ಇವುಗಳಲ್ಲದೆ ಕೆರೆ, ಬಾವಿಗಳ ಬುಡದಲ್ಲೂ ನೆಲವಿದೆ; ಸಮುದ್ರದ ತಳದಲ್ಲೂ ನೆಲವಿದೆ; ಆದರೆ ಇವುಗಳ ಮೇಲೆ ನೀರು ನಿಂತಿರುವುದರಿಂದ ಆ ನೆಲವು ನಮಗೆ ಕಾಣಿಸುವುದಿಲ್ಲ. ನಾವಾಗಲೀ ಯಾವುದೇ ವಸ್ತುವಾಗಲೀ ನೀರಾಗಲೀ ಬುಡದಲ್ಲಿ ನೆಲವಿಲ್ಲದೆ ನಿಲ್ಲಲಾರದು. ಈ ನೆಲವೇ ನಾವು ವಾಸಿಸುವ ಭೂಮಿಯ ಹೊರಗಿನ ಮೈ.

ಆಕಾಶದಲ್ಲಿ ಒಂದು ಬಹುದೊಡ್ಡ ಗೋಲವಿದೆ; ಕಲ್ಲಿನಗೋಲ, ಎಂದು ಭಾವಿಸಿಕೊಳ್ಳಿ. ಆ ಕಲ್ಲಿನ ಗೋಲವನ್ನು ನೀರು ಮರಳು ಮಣ್ಣುಗಳು ಆವರಿಸಿವೆ. ಮಣ್ಣಿನ ಮೇಲೆ ಹಸುರುಗಿಡ ಮರಗಳಿವೆ. ಹಲವು ಜಾತಿಯ ಕೀಟಗಳು, ಹಕ್ಕಿಗಳು, ಹಾವುಗಳು, ಪ್ರಾಣಿಗಳೂ ಇವೆ. ಅಲ್ಲಿನ ಕೆಲವು ಜೀವಿಗಳು ನಡೆದಾಡುತ್ತವೆ, ಮನೆಗಳಲ್ಲಿ ವಾಸಿಸುತ್ತವೆ, ಬೇರೆ ಬೇರೆ ಭಾಷೆಗಳಲ್ಲಿ ಮಾತಾಡುತ್ತವೆ, ಓದುತ್ತವೆ, ಬರೆಯುತ್ತವೆ, ನೀರಿನಲ್ಲಿ ತರತರದ ಮೀನುಗಳು ಜೀವಿಸುತ್ತವೆ, ಇಂತಹ ಸುಂದರವಾದ ಸ್ಥಳ ಆಕಾಶದಲ್ಲಿ ಎಲ್ಲಿರಬಹುದು ಗೊತ್ತೇ? ಸುತ್ತಲೂ ನೋಡಿ! ಕೀಟಗಳು, ಹಕ್ಕಿಗಳು, ಪ್ರಾಣಿಗಳು, ಗುಡ್ಡಬೆಟ್ಟಗಳು ಎಲ್ಲವೂ ಕಾಣಿಸುವುದಿಲ್ಲವೆ? ಅದೇ ನಾವು ವಾಸಿಸುತ್ತಿರುವ ಭೂಮಿ.

ಕೋಟಿಕೋಟಿ ವರುಷಗಳ ಹಿಂದೆ ನಾವು ವಾಸಿಸುತ್ತಿರುವ ಈ ಭೂಮಿ ಈಗ ನಾವು ಕಾಣುವಂತೆ ಇರಲಿಲ್ಲ. ಅದು ಕೆಂಪಾಗಿ ಉರಿಯುತ್ತಿರುವ ಚೆಂಡಾಗಿತ್ತು. ಅದರಲ್ಲಿನ ಪದಾರ್ಥಗಳೆಲ್ಲವೂ ಕಾವಿನಿಂದ ಕೆಂಪಾಗಿ ಕರಗಿ ನೀರಾಗಿ ಉರಿಯುತ್ತಿದ್ದುವು. ಕಾಲ ಕಳೆದಂತೆ ಈ ಉರಿಯುವ ಗೋಲವು ಮೆಲ್ಲಮೆಲ್ಲನೆ ತಣ್ಣಗಾಗುತ್ತ ಬಂತು. ಆಗ ಕುದಿಯುತ್ತಿರುವ ಗೋಲದಿಂದ ಮೇಲಕ್ಕೆ ಏಳುತ್ತಿರುವ ಆವಿಯು ಗೋಲದ ಸುತ್ತಲೂ ಆವರಿಸಿಕೊಂಡಿತು. ಆವಿಯು ದಟ್ಟವಾಗುತ್ತ ಹೋಯಿತು, ಮೋಡದಂತೆ ಗೋಲದ ಸುತ್ತಲೂ ಹಬ್ಬಿತು. ಈ ಆವಿಯ ಮೋಡಗಳು ದಪ್ಪ ಹೆಚ್ಚಿದಂತೆ ಭಾರವಾಗಲಾರಂಭಿಸಿದುವು, ತಣ್ಣಗಾಗುತ್ತಬಂದಂತೆ

ನೀರಿನ ಹನಿಗಳಾಗಿ ಕೆಳಗಿಳಿದುವು. ಆದರೆ ಗೋಲದ ಮೇಲಿನ ಮೈ ಮಾತ್ರ ಇನ್ನೂ ಬಹಳ ಬಿಸಿಯಾಗಿಯೇ ಉಳಿದಿತ್ತು. ಆದುದರಿಂದ ಆವಿಯು ಮೋಡವು ನೀರಿನ ಹನಿಯಾಗಿ ಕೆಳಗೆ ಬಂದೊಡನೆಯೇ ಗೋಲದ ಬಿಸಿಗೆ ಪುನಃ ಕುದಿಯಿತು. ಆವಿಯಾಗಿ ಪುನಃ ಮೇಲೇರಿತು. ಕೆಂಡದ ರಾಶಿಯ ಮೇಲೆ ಒಂದೊಂದೇ ಬೊಟ್ಟು ನೀರು ಬಿಟ್ಟು ಏನಾಗುತ್ತದೆಂದು ನೋಡಿ. ಆ ನೀರಿನ ಬಿಂದು ಕೆಂಡಕ್ಕೆ ತಾಗುವಷ್ಟರಲ್ಲೇ ಆವಿಯಾಗಿ ಬಿಡುವುದಿಲ್ಲವೆ? ಹಾಗೆ.

ಹೀಗೆಯೇ ಹಲವು ಸಾವಿರ ವರ್ಷಗಳು ಕಳೆದುವು. ಮೋಡವು ನೀರಾಗಿ ಕೆಳಗೆ ಬೀಳಲು ಆರಂಭವಾಗುವುದು, ಅಷ್ಟರಲ್ಲೇ ಪುನಃ ಆವಿಯಾಗಿ ಮೇಲೇರಿ ಮೋಡವಾಗುವುದು. ಇದರಿಂದಾಗಿ ಗೋಲದ ಸುತ್ತಲೂ ಮೈಲುಗಟ್ಟಳೆ ದಪ್ಪವಾಗಿ ಮೋಡಗಳು ಕೂಡಿ ಕೊಂಡುವು.

ಕ್ರಮೇಣ ಗೋಲವು ತಣ್ಣಗಾಗುತ್ತ ಬಂತು. ಈಗ ಅದರ ಮೇಲೆ ಬಿದ್ದ ನೀರು ಪುನಃ ಆವಿಯಾಗಿ ಮೇಲೇರುವಂತಿರಲಿಲ್ಲ, ಸರಿ, ಮಳೆ ಸುರಿಯಲು ಆರಂಭವಾಯಿತು. ಎಂತಹ ಮಳೆ ಎನ್ನುತ್ತೀರಿ! ನಮ್ಮ ಮಳೆಗಾಲದಂತಹ ಮಳೆಯಲ್ಲ! ನಿಮಿಷ ಮಾತ್ರವೂ ಬಿಡದೆ ಸಾವಿರ ಸಾವಿರ ವರ್ಷಗಳ ಕಾಲ ಒಂದೇ ಸಮನೆ ಮಳೆ ಸುರಿಯಿತು, ಸುರಿಯಿತು, ಸುರಿಯಿತು! ಎತ್ತ ನೋಡಿದರೂ ನೀರೇನೀರು!

ಒಂದೆರಡು ದಿನ ಎಡೆಬಿಡದೆ ಮಳೆ ಸುರಿದರೆ ಏನಾಗುತ್ತದೆ ಎಂದು ನೀವು ನೋಡಿದ್ದೀರಿ. ಎಲ್ಲೆಲ್ಲೂ ನೀರೇನೀರು, ಹೊಳೆಗಳೆಲ್ಲ ಉಕ್ಕಿ ಹರಿಯುತ್ತವೆ! ನೆರೆ ಬಂದು ಊರೊಳಗೆ ನೀರು ತುಂಬುತ್ತದೆ. ನೀರಿನ ಸೆಳೆತಕ್ಕೆ ಮನೆಗಳು ಕೊಚ್ಚಿ ಕೊಂಡು ಹೋಗುತ್ತವೆ. ಗುಡ್ಡಗಳು ಜರಿದುಬಿದ್ದು ಬಯಲುಗಳಾಗುತ್ತವೆ. ತಗ್ಗಿನ ಸ್ಥಳಗಳಲ್ಲೆಲ್ಲ ನೀರು ತುಂಬುತ್ತದೆ. ಹೊಲಗಳೆಲ್ಲ ನೀರಿನಲ್ಲಿ ಮುಳುಗುತ್ತವೆ.

ಹಿಂದೆ ಬಂದ ಮಹಾ ಮಳೆಯಲ್ಲೂ ಹೀಗೆಯೇ ಆಯಿತು. ಸಾವಿರಾರು ವರ್ಷಗಳ ಮಳೆಯಲ್ಲವೆ! ಎಷ್ಟು ನೀರು ಬಿದ್ದಿದ್ದೀತು! ಎಷ್ಟು ಸ್ಥಳ ಕೊರೆದಿದ್ದೀತು! ಊಹಿಸಿರಿ. ಗೋಲದ ಹೊರಮೈ ಕೊರೆಯಿತು. ಬಿದ್ದ ನೀರು ಹರಿದ ರಭಸಕ್ಕೆ ಆಳವಾದ ಕಣಿವೆಗಳಾದುವು. ಕಣಿವೆಗಳ ಆಳ ಹೆಚ್ಚಿದಂತೆ ಅವುಗಳ ನಡುವೆ ಪರ್ವತಗಳು ಮೇಲೆದ್ದುವು. ತಗ್ಗಾದ ಸ್ಥಳದಲ್ಲಿ ನೀರು ಕೂಡಿತು. ನೀರೆಂದರೆ ಸ್ವಲ್ಪವೇನಲ್ಲ! ಮೈಲುಗಟ್ಟಲೆ ಆಳವಾಗಿ ಸೇರಿಕೊಂಡಿತು. ಹೀಗೆ ಉರಿಯುತ್ತಿದ್ದ ಗೋಲವು ಲಕ್ಷಗಟ್ಟಲೆ ವರ್ಷಗಳ ಬಳಿಕ ಜೀವಿಗಳಿಗೆ ವಾಸಿಸಲು

ಯೋಗ್ಯವಾಯಿತು. ನೆಲ ಮತ್ತು ಜಲ ಎಂಬ ಎರಡು ವಿಭಾಗಗಳಿಂದ ಕೂಡಿದ ಭೂಮಿ ಎನಿಸಿತು.

ಭೂಮಿಯ ಮೇಲಿನ ಮೈ ಸಮತಟ್ಟಾಗಿಲ್ಲ. ಬಹಳ ಏರು ತಗ್ಗುಗಳಿಂದ ಕೂಡಿದೆ. ತಗ್ಗಾದ ಸ್ಥಳಗಳಲ್ಲೆಲ್ಲ ನೀರು ತುಂಬಿದೆ. ಈ ನೀರು ಅಥವಾ ಜಲರಾಶಿಯನ್ನು ನಾವು ಸಾಗರ ಅಥವಾ ಸಮುದ್ರ ಎನ್ನುತ್ತೇವೆ. ಎತ್ತರವಾದ ಸ್ಥಳಗಳು ಈ ನೀರಿನಿಂದ ಮೇಲಕ್ಕೆ ಎದ್ದಿರುತ್ತವೆ. ಈ ನೆಲವನ್ನು ಖಂಡಗಳು ಎನ್ನುತ್ತೇವೆ ಸಾಗರದ ಬುಡವೂ ಸಮತಟ್ಟಾಗಿಲ್ಲ. ನೆಲದಮೇಲೆ ಕಾಣುವಂತೆಯೇ ಬಹಳ ಏರುತಗ್ಗುಗಳಿಂದ ಕೂಡಿದೆ. ಅಷ್ಟೇ ಏಕೆ? ನೆಲದ ಮೇಲೆ ಕಾಣುವ ಪರ್ವತಗಳಷ್ಟೇ ಎತ್ತರದ ಅಥವಾ ಅದಕ್ಕಿಂತಲೂ ಹೆಚ್ಚು ಎತ್ತರದ ಪರ್ವತಗಳು ನೀರಿನ ತಳದಿಂದ ಮೇಲಕ್ಕೆದ್ದಿವೆ. ಕೆಲವು ಸಲ ಅವುಗಳ ತುದಿಯ ಸ್ವಲ್ಪ ಭಾಗ ಮಾತ್ರ ನೀರಿನ ಮೇಲೆ ಮೂಡಿರುತ್ತದೆ. ಇಂತಹ ಭಾಗಗಳನ್ನು ದ್ವೀಪಗಳು ಎನ್ನುತ್ತಾರೆ. ಸಮುದ್ರದ ಆಳವು ಕೆಲವು ಕಡೆಗಳಲ್ಲಿ ನೂರು ಇನ್ನೂರು ಅಡಿಗಳಷ್ಟಿದ್ದರೆ ಕೆಲವು ಕಡೆಗಳಲ್ಲಿ ಐದಾರು ಮೈಲುಗಳಷ್ಟು ಇರುತ್ತದೆ.

ನಾವು ಸಮುದ್ರದ ತೀರಕ್ಕೆ ಹೋದರೆ ರಾಶಿರಾಶಿಯಾಗಿ ಮರಳನ್ನು ಕಾಣುತ್ತೇವೆ. ಈ ಮರಳು ಅಥವಾ ಹೊಯಿಗೆ ಅಥವಾ ಉಸುಕು ಎಲ್ಲಿಂದ ಬಂತು? ಮರಳು ಎಂದರೆ ಕಲ್ಲಿನ ಸಣ್ಣಸಣ್ಣ ತುಣುಕುಗಳು. ಸಾಮಾನ್ಯವಾಗಿ ಒಂದೇ ಆಕಾರವನ್ನು ತಾಳಿರುವ ಈ ಹರಳುಗಳು ದೊಡ್ಡ ಕಲ್ಲುಗಳಿಂದ ಬೇರೆಯಾದ ಚೂರುಗಳು.

ಭೂಮಿಯ ಮೇಲೆ ಮಳೆ ಸುರಿದಾಗ ಬಿದ್ದ ನೀರು ಎತ್ತರದಿಂದ ತಗ್ಗಾದ ಸ್ಥಳಕ್ಕೆ ಹರಿಯುತ್ತದೆ. ಗುಡ್ಡ ಬೆಟ್ಟಗಳ ಮೇಲಿನಿಂದ ನೀರು ಕೆಳಗೆ ಧುಮುಕುವಾಗ ಕಲ್ಲುಗಳ ಮೇಲೆ ರಭಸದಿಂದ ಹಾರುತ್ತದೆ. ನೀರಿನ ವೇಗಕ್ಕೆ ಕಲ್ಲುಗಳು ಪುಡಿಯಾಗುತ್ತವೆ. ಬಿಸಿಲಿನ ಶಾಖಕ್ಕೂ ದೊಡ್ಡ ದೊಡ್ಡ ಬಂಡೆಕಲ್ಲುಗಳು ಹೋಳಾಗುವುದುಂಟು. ಅವುಗಳ ಮೇಲೆ ನೀರು ಸುರಿದಾಗ ಕಲ್ಲು ಚೂರುಗಳೂ ನೀರೊಂದಿಗೆ ಹೊರಡುತ್ತವೆ. ಈ ಕಲ್ಲು ಹರಳುಗಳು ನೀರಿನೊಡನೆ ಪ್ರಯಾಣ ಮಾಡುವಾಗ ಒಂದಕ್ಕೊಂದು ತಿಕ್ಕಿ, ತಾಗಿ ಇನ್ನಷ್ಟು ಪುಡಿಯಾಗುತ್ತ ಬರುತ್ತವೆ. ಹಾಗೆಯೇ ಸರಿಯುತ್ತ ಮೆಲ್ಲನೆ ಮುಂದೆ ಮುಂದೆ ಸಾಗುತ್ತವೆ. ಸಮುದ್ರದ ಅಲೆಗಳು ದಡದಬಂಡೆಯ ಕಲ್ಲುಗಳಿಗೆ ರಭಸದಿಂದ ಅಪ್ಪಳಿಸುವುದನ್ನು ನೀವು ನೋಡಿರಬಹುದು. ಆಗಲೂ ಕಲ್ಲು ಕ್ರಮೇಣ ಪುಡಿಯಾಗಿ ಮರಳಾಗುತ್ತದೆ. ಹಾಗಾಗಿ ನದೀ ತೀರ, ಸಮುದ್ರದ ಬದಿಗಳಲ್ಲಿ ನಾವು

ಕಾಣುವ ಮರಳಿನ ರಾಶಿಯು ನದಿಗಳು ತಾವು ಹಲವು ವರ್ಷಗಳಿಂದ ಹರಿದು ಬರುವಾಗ ಸಿದ್ಧಮಾಡಿ ಹೊತ್ತು ತಂದುದರ ಪರಿಣಾಮವು.

ನೆಲದಲ್ಲಿ ಸಾಮಾನ್ಯವಾಗಿ ಕಲ್ಲು, ಮಣ್ಣು, ಮರಳು ಎಂದು ಮೂರು ರೀತಿಗಳಿವೆ. ಕಲ್ಲು ನೆಲದಲ್ಲಿ ಮತ್ತು ಮರಳಿನ ನೆಲದಲ್ಲಿ ಗಿಡಮರಗಳು ಹುಲುಸಾಗಿ ಬೆಳೆಯುವುದಿಲ್ಲ. ಅದೇನು ಕಾರಣ? ಮರಳಿನ ಕಣಗಳು ಸಡಿಲವಾಗಿರುತ್ತವೆ. ಒಂದನ್ನೊಂದು ಹಿಡಿದುಕೊಳ್ಳುವ ಗುಣ ಅವುಗಳಿಗಿಲ್ಲ. ಅವುಗಳ ಮೇಲೆ ಬಿದ್ದ ನೀರು ಒಡನೆಯೇ ಇಂಗಿಹೋಗುತ್ತದೆ. ಗಿಡಗಳಿಗೆ ಆಹಾರವಾದ ಖನಿಜಸತ್ವವೂ ಅಲ್ಲಿರುವುದಿಲ್ಲ. ಆದುದರಿಂದ ಸಸ್ಯಗಳು ಮರಳಿನಲ್ಲಿ ಚೆನ್ನಾಗಿ ಬೆಳೆಯಲಾರವು. ಕಲ್ಲು ನೆಲದಲ್ಲಿ ಗಿಡಗಳ ಬೇರುಗಳು ಕೆಳಗಿಳಿಯಲು ಸಾಧ್ಯವಾಗುವುದಿಲ್ಲ; ನೀರೂ ಅಲ್ಲಿ ಉಳಿಯುವಂತಿಲ್ಲ. ಹಾಗಾಗಿ ಬರಿಯ ಕಲ್ಲಿನ ಮೇಲೂ ಸಸ್ಯಗಳು ಬೆಳೆಯುವುದಿಲ್ಲ.

ಮಣ್ಣಿನಲ್ಲಿ ಹಾಗಲ್ಲ. ಕಣಗಳು ಒತ್ತೊತ್ತಾಗಿದ್ದು ಅಂಟಿ ಕೊಂಡಿರುತ್ತವೆ. ಹಾಗಾಗಿ ನೆಲದ ಮೇಲೆ ನೀರುಬಿದ್ದಾಗ ಮರಳಿನ ಮೇಲೆ ಬಿದ್ದಂತೆ ಕೂಡಲೇ ಇಂಗಿ ಹೋಗುವುದಿಲ್ಲ. ಒತ್ತೊತ್ತಾಗಿ ಇರುವ ಕಲ್ಲಿನ ಪುಡಿಯೇ ಮಣ್ಣು. ಅದರಲ್ಲಿ ತುಂಬ ಖನಿಜ ಸತ್ವವಿರುತ್ತದೆ. ಮಣ್ಣು ಮೃದುವಾಗಿರುವುದರಿಂದ ಸಸ್ಯಗಳ ಬೇರು ಅದರಲ್ಲಿ ಕೆಳಗಿಳಿಯಲು ತೊಡಕಾಗುವುದಿಲ್ಲ. ಆದುದರಿಂದ ಮಣ್ಣು ಒಳ್ಳೆಯದಾದಷ್ಟು, ಎಂದರೆ ಅದರಲ್ಲಿ ಖನಿಜ ಪದಾರ್ಥಗಳು ಹೆಚ್ಚಿದ್ದು ನೀರನ್ನು ಹಿಡಿದುಕೊಳ್ಳುವ ಗುಣ ಹೆಚ್ಚಿದಷ್ಟು, ಅವುಗಳ ಮೇಲೆ ಸಸ್ಯಗಳು ಹುಲುಸಾಗಿ ಬೆಳೆಯುತ್ತವೆ.

ಭೂಮಿಯ ಮೇಲೆ ದೊರೆಯುವ ನೀರನ್ನು ನಾವು ಸಿಹಿ ನೀರು, ಉಪ್ಪು ನೀರು ಎಂದು ಎರಡು ವಿಧವಾಗಿ ಗುರುತಿಸುತ್ತೇವೆ. ಮಳೆನೀರು, ಕೆರೆ ಬಾವಿಗಳ ನೀರು, ಸಿಹಿ ನೀರು. ಸಮುದ್ರದ ನೀರು ಉಪ್ಪು ನೀರು.

ಸಮುದ್ರದ ನೀರು ಉಪ್ಪು ಏಕೆ ಆಯಿತು? ಕಾರಣ ಹೀಗಿದೆ. ನೆಲದ ಮೇಲೆ ಮಳೆ ಸುರಿಯುತ್ತದೆ. ಈ ನೀರೆಲ್ಲ ನದಿಗಳ ಮೂಲಕ ಸಮುದ್ರಕ್ಕೆ ಹರಿಯುತ್ತದೆ. ಇಂದು ನಿನ್ನೆಯಿಂದ ಈ ರೀತಿ ಹರಿಯುತ್ತಿರುವುದಲ್ಲ. ಕೋಟಿ ಕೋಟಿ ವರ್ಷಗಳಿಂದಲೂ ಹರಿಯುತ್ತಿದೆ. ನೀರು, ಕಲ್ಲುಮಣ್ಣುಗಳ ಮೇಲೆ ಹರಿಯುವಾಗ ಅವುಗಳಲ್ಲಿರುವ ಉಪ್ಪಿನ ಅಂಶವನ್ನು ತನ್ನಲ್ಲಿ ಕರಗಿಸಿಕೊಳ್ಳುತ್ತದೆ. ಹೀಗೆ ಹರಿದು ಸೇರಿದ ನೀರು ಎಷ್ಟೋ ವರ್ಷಗಳಿಂದ ಸಮುದ್ರದಲ್ಲಿ ಕೂಡಿದೆ. ಸೂರ್ಯನ ಬಿಸಿಲಿಗೆ ಸಮುದ್ರದ ನೀರು ಆವಿಯಾಗಿ ಮೇಲೇರುವಾಗ ಉಪ್ಪು

ಸಮುದ್ರವಲ್ಲಿಯೇ ಉಳಿಯುತ್ತದೆ. ಮೇಲೆ ಏರಿದ ಆವಿ ಮೋಡವಾಗಿ, ಮಳೆಯಾಗಿ ನೆಲದ ಮೇಲೆ ಸುರಿಯುತ್ತದೆ. ಆಗ ಆ ನೀರು ಪುನಃ ನೆಲದ ಉಪ್ಪನ್ನು ಕರಗಿಸಿಕೊಂಡು ಸಮುದ್ರಕ್ಕೆ ಸಾಗುತ್ತದೆ. ಹೀಗೆ ಲಕ್ಷಾಂತರ ವರ್ಷಗಳಿಂದ ನಡೆಯುತ್ತಿದೆ. ಅದರ ಪರಿಣಾಮವಾಗಿ ಸಮುದ್ರದ ನೀರು ಉಪ್ಪಾಗಿದೆ.

ಬಾವಿ ಕೆರೆಗಳ ನೀರು ಹೀಗೆ ನದಿಗಳು ವರ್ಷಗಟ್ಟಲೆ ತಂದು ಕೂಡಿಸಿದ ನೀರಲ್ಲ. ಅದರಲ್ಲಿ ಸ್ವಲ್ಪ ಉಪ್ಪಿನ ಅಂಶವಿದ್ದರೂ ಅದು ನಾಲಗೆಗೆ ಗೊತ್ತಾಗುವುದಿಲ್ಲ. ಹಾಗೆಯೇ, ಹರಿಯುತ್ತಿರುವ ನೀರಿನಲ್ಲಿರುವ ಉಪ್ಪನ್ನು ನಮ್ಮ ನಾಲಗೆ ಗುರುತಿಸಲಾರದು. ಉಪ್ಪು ನೀರನ್ನು ಕುಡಿಯಲು ಸಾಧ್ಯವಿಲ್ಲ. ಆದುದರಿಂದ ನಾವು ಬಾವಿ, ಕೆರೆಗಳ ನೀರನ್ನಾಗಲೀ ಹರಿಯುವ ತಿಳಿಯಾದ ನೀರನ್ನಾಗಲೀ ಕುಡಿಯಲು ಉಪಯೋಗಿಸುತ್ತೇವೆ.

ಕೆಲವು ಕಡೆ ನೆಲದಲ್ಲಿ ಉಪ್ಪಿನ ಅಂಶ ಹೆಚ್ಚಿರುತ್ತದೆ. ಅಂತಹ ಸ್ಥಳಗಳ ಬಾವಿಯ ನೀರು ನಮಗೆ ರುಚಿಸುವುದಿಲ್ಲ. ಸಪ್ಪೆಯಾಗಿರುವ ಈ ನೀರನ್ನು ಸೌಳು ನೀರು ಎಂದು ಕರೆಯುತ್ತಾರೆ. ಸಮುದ್ರಕ್ಕೆ ತೀರ ಸಮೀಪವಾಗಿರುವ ಬಾವಿಗಳ ನೀರೂ ಸೌಳಾಗಿರುತ್ತದೆ. ಕೆರೆ, ಬಾವಿಗಳ ನೀರು ಸೌಳಾಗಿರುವಲ್ಲಿಯೂ, ದೊಡ್ಡ ಪಟ್ಟಣಗಳಲ್ಲಿ ನೀರಿನ ಪೂರೈಕೆ ಕಡಿಮೆಯಾಗಿರುವಲ್ಲಿಯೂ ನೀರನ್ನು ಶೇಖರಿಸಿ ಇಟ್ಟು ನಳ್ಳಿಗಳ ಮೂಲಕ ಹರಿಯಬಿ ಜನರಿಗೆ ಕುಡಿಯಲು ಒದಗಿಸುತ್ತಾರೆ.

ಹೀಗೆ, ನಾವಿಂದು ವಾಸಿಸುತ್ತಿರುವ ಈ ಭೂಮಿ, ಎಷ್ಟೋ ವರ್ಷಗಳ ಬಳಿಕ, ಜೀವಿಗಳಿಗೆ ವಾಸಿಸಲು ಯೋಗ್ಯವಾಯಿತು. ನಮಗೆ ಅತಿ ಅವಶ್ಯವಾದ ನೆಲ ಮತ್ತು ಜಲಗಳಿಂದ ಕೂಡಿ ಕಂಗೊಳಿಸಿತು.

ಶ್ರೀನಿವಾಸ ಉಡುಪ

ಸತ್ಯವಂತರಾಗಿರುವ ಧೈರ್ಯ ತಾಳಿರಿ. ಸುಳ್ಳಿನ ಅಗತ್ಯ ಯಾವುದಕ್ಕೂ ಇಲ್ಲ.

—ಹರ್ಬರ್ಟ್

ಮುದ್ರಿತ ಭಾಷಣವೆಂದರೆ ಒಣಗಿದ ಹೂವಿದ್ದಂತೆ; ವಸ್ತುತಃ ಆ ವಸ್ತುವೇನೋ ಅಲ್ಲಿ ಇರುತ್ತದೆ: ಆದರೆ ಬಣ್ಣ ಬಾಡಿರುತ್ತದೆ. ಸುವಾಸನೆ ಅಳಿದಿರುತ್ತದೆ.

—ಲೊರೇನ್

ವರದಕ್ಷಿಣೆಗಾಗಿ ನನ್ನ ಮುದ್ದು ಮಗಳನ್ನು ಸುಟ್ಟು ಕೊಂದೆಯಾ ?

ಅವಸರ ಅವಸರವಾಗಿ ಟ್ಯಾಕ್ಸಿಯಿಂದಿಳಿದು ಕಾರುಬಾಡಿಗೆ ಕೊಟ್ಟೆ-ಚಿಲ್ಲರೆ ವಾಪ್ಸು ತೆಗೆದುಕೊಳ್ಳಲೂ ಸಹನೆಯಿಲ್ಲದೆ ಆಸ್ಪತ್ರೆಯ ಮೆಟ್ಟಲುಗಳನ್ನೇರಿದೆ. ಗಾಬರಿಯಿಂದಲೇ ಒಳನುಗ್ಗಿದೆ.

ಸ್ವಲ್ಪವೇ ಸಮಯದ ಹಿಂದೆ ನನ್ನ ಸ್ನೇಹಿತನೊಬ್ಬ ನಮ್ಮಾಫೀಸಿಗೆ ಫೋನ್ ಮಾಡಿದ್ದ—'ನನ್ನ ಹೆಂಡತಿ ಸುಮನಾಗೆ ಅಡಿಗೆ ಮನೆಯಲ್ಲಿ ಸೀರೆಗೆ ಬೆಂಕಿ ತಗುಲಿತು. ಮಿತಿಮೀರಿದ ಜ್ವಾಲೆಯಿಂದ ಕಂಗಾಲಾಗಿ ಬಿದ್ದವಳನ್ನು ದೊಡ್ಡ ಆಸ್ಪತ್ರೆಗೆ ಸಾಗಿಸಲಾಗಿದೆ.'

ಸುದ್ದಿ ತಿಳಿದೊಡನೆಯೇ ಓಡೋಡಿ ಬಂದು ಟ್ಯಾಕ್ಸಿ ಹಿಡಿದು ಆಸ್ಪತ್ರೆ ಸೇರಿದೆ. ಯಾವ ಎಮರ್ಜನ್ಸಿ ವಾರ್ಡಿನಲ್ಲಿ ದಾಖಲಾಗಿದ್ದಾಳೆಂದು ತಿಳಿಯಲು ಬೆವರೊರಸಿಕೊಳ್ಳುತ್ತ ಮುಂದೆ ಸಾಗಿದೆ.

ಹಾಗೆ ಗಾಬರಿಯಿಂದ ಓಡುತ್ತ ಒಂದೆರಡು ಹೆಜ್ಜೆ ಇಟ್ಟಿದ್ದೆ ಮಾತ್ರ. ಹಿಂದಿನಿಂದಾರೋ ನನ್ನ ಷರ್ಟ್ ಕಾಲರ್ ಹಿಡಿದು ಎಳೆದಂತಾಯಿತು. ಒಡನೆ ಹಾರಿ ನನ್ನ ರಟ್ಟೆ ಹಿಡಿದು ಎಳೆದೂಬಿಟ್ಟರು. ಆಗ ನಾನು 'ಬ್ಯಾಲೆನ್ಸ್' ತಪ್ಪಿ ಕೆಳಕ್ಕೆ ಬೀಳುವಂತಾದೆ. ಹಿಂದಿರುಗಿ ನೋಡುವಾಗ ಹಿಡಿದೆಳೆದವರು ಬೇರಾರೂ ಅಲ್ಲ. ಖುದ್ದು ಹೆಣ್ಣುಕೊಟ್ಟ ಮಾವನೇ. 'ಜೋಳಿ ಮಗನೇ, ಎಲ್ಲಿ ಓಡುತ್ತಿರುವೆ?' ಎಂದು ಗದರಿಸುತ್ತ ಮಾವ ನನ್ನ ಮೇಲೇರಿಯೇ ಬಂದರು.

'ಅಯ್ಯೋ ಮಾವಾ! ನೀವೂ ಇಲ್ಲಿ ಬಂದಿರಾ ?' ಎಂದು ನನ್ನ ಬಾಯಿಂದ ಮಾತು ಹೊರಡುವ ಮೊದಲೇ ಇನ್ನಷ್ಟು ರೌದ್ರಾವತಾರ ತಾಳಿದ ಮಾವ 'ಹೌದು, ನಾನೇ. ಏನೆಂದು ತಿಳಿದೆ ಕೊಲೆಪಾತಕನೇ ? ನನ್ನ ಮುದ್ದು ಮಗಳನ್ನು ಸುಟ್ಟು ಕೊಂದುಹಾಕಿದೆ. ಅದರ ಮೇಲೆ ಈಗ ಓಡಿಹೋಗಲು ಯತ್ನಿಸುವೆಯಾ ?'

'ತಮ್ಮ ಮಗಳನ್ನು ಸುಟ್ಟುಹಾಕಿ........ಏನು ಹೇಳುತ್ತಿರುವಿರಿ ಮಾವಾ ? ನನ್ನ ಪ್ರೀತಿಯ ಪತ್ನಿಗೇನಾಗಿದೆ ?'—ಎಂದು ದೈನ್ಯದಿಂದ ಬೇಡಿದೆ.

'ವರದಕ್ಷಿಣೆಯ ಆಸೆಯಿಂದ ನನ್ನ ಮಗಳನ್ನು ಸುಟ್ಟು ಕೊಲೆಗೈದು, ಈಗ ನನ್ನ ಹತ್ತಿರವೇ—ನನ್ನ ಮುದ್ದು ಮಡದಿಗೇನಾಗಿದೆ—ಎಂದು ಕೇಳುತ್ತಿರುವೆಯಾ ?'

'ವರದಕ್ಷಿಣೆಯ ಆಸೆಯಿಂದ....? ವರದಕ್ಷಿಣೆಯ ರೂಪದಲ್ಲಿ ನಾನು, ತಮ್ಮೊಡನೆ ಒಂದು ಚಿಕ್ಕಾಸನ್ನು ಕೇಳಿಲ್ಲ—ಎಂಬ ವಿಚಾರ ನಿಮಗೆಗೊತ್ತೇ ಇದೆ ತಾನೆ?'

ಕೋಪಾವೇಶದಿಂದ ಮಾವ ಗುಡುಗತೊಡಗಿದರು. 'ಹೌದು, ಅದಕ್ಕಾಗಿಯೇ ಈಗ ಈ ಕೆಲಸ! ಅಂದು ನನ್ನ ಹತ್ತಿರ ವರದಕ್ಷಿಣೆಯ ರೂಪದಲ್ಲಿ ನೀನೇನೂ ಕೇಳಿಲ್ಲ ನಿಜ. ಆಗಲೇ ನಿನ್ನ ವಿಚಾರದಲ್ಲಿ ಸ್ವಲ್ಪ ಸಂದೇಹ ತಲೆದೋರಿತ್ತು. ಆದರೆ ಈಗ? ನಿನಗೆ ತುಂಬ ಸಂತೋಷವಾಗಿರಬೇಕು. ಇನ್ನಾರಿಂದಾದರೂ ಬೇಕಾದಷ್ಟು ಹಣ ಕೀಳಬಹುದು........ಅಯ್ಯೋ; ನಾನೆಂಥ ವಿಷಘಳಿಗೆಯಲ್ಲಿ ಈ ಕಟುಕನಿಗೆ ಮಗಳನ್ನು ಕೊಟ್ಟು ಮದುವೆ ಮಾಡಿದೆನೋ' ಎನ್ನುತ್ತಿರುವಾಗ ಅವರ ಸ್ವರ ನಡುಗತೊಡಗಿತು. ಕಣ್ಣೀರು ಸುರಿಸುತ್ತ, ತಲೆಮೇಲೆ ಕೈ ಇಟ್ಟುಕೊಂಡು 'ಅಯ್ಯೋ—' ಎಂದು ಅಳತೊಡಗಿದರು.

ಅವರಿಗೆ ನನ್ನ ಅಸಹಾಯಕತೆಯನ್ನು ವಿವರಿಸಿ ನಾನೇನೂ ತಪ್ಪುಗೈದಿಲ್ಲ—ಎಂದು ಹೇಳಿ ಸಮಾಧಾನಪಡಿಸಲನುವಾದೆ. ಅಷ್ಟರಲ್ಲೇ ಒಂದು ಪೋಲೀಸ್ ಜೀಪು ಜೋರಾಗಿ ಬಂತು. ಅದರಿಂದ ಮೂರು ನಾಲ್ಕು ಪೋಲೀಸರು ಮತ್ತೊಬ್ಬ ಇನ್‌ಸ್ಪೆಕ್ಟರ್ ಇಳಿದು ನನ್ನತ್ತವೇ ಹಾರುತ್ತ ಬಂದರು.

'ನೀವೇ ತಾನೇ ಕೃಷ್ಣಕುಮಾರ್?' ಹತ್ತಿರ ಬಂದು ಪೋಲೀಸ್ ಇನ್‌ಸ್ಪೆಕ್ಟರ್ ಗಂಭೀರ ಸ್ವರದಿಂದ ಕೇಳಿದ.

'ಹೌದು ಸ್ವಾಮಿ' ದೈನ್ಯದಿಂದ ಉತ್ತರಿಸಿದೆ.

'ನೀವಾಗಿಯೇ ಪೋಲೀಸರ ಕೈಗೆ ಸಿಕ್ಕಿಬಿದ್ದಿರಿ. ನೀವು ಟ್ಯಾಕ್ಸಿ ಮಾಡಿಕೊಂಡು ಓಡತೊಡಗಿದೊಡನೆಯೇ ನಾವೂ ನಿಮ್ಮನ್ನು ಬೆನ್ನಟ್ಟಿಕೊಂಡು ಬಂದೆವು. ಅಂತು ಪ್ರಯಾಸದಿಂದ ಇಲ್ಲೀಗ ನಿಮ್ಮನ್ನು ಹಿಡಿದುಹಾಕಿದೆವು.'

ಅಷ್ಟರಲ್ಲಿ ತಮ್ಮ ಅಳು ನಿಲ್ಲಿಸಿ ಮಾವ ಹೇಳತೊಡಗಿದರು—'ಹೌದು, ಇನ್‌ಸ್ಪೆಕ್ಟರ್ ಸಾಹೇಬರೇ; ನಾನಿಲ್ಲಿ ಬಂದು ಈ ಬಡ್ಡೀಮಗನನ್ನು ಹಿಡಿದು ಹಾಕದಿರುತ್ತಿದ್ದರೆ ಇಷ್ಟರಲ್ಲಿ ಈತ ಇಲ್ಲಿಂದಲೂ ಓಡಿಹೋಗುತ್ತಿದ್ದ.'

ಅವರಿಷ್ಟು ಹೇಳುತ್ತಿರುವಾಗಲೇ ಇನ್‌ಸ್ಪೆಕ್ಟರ್ ಅವರತ್ತ ತಿರುಗಿ ಕೇಳಿದ—'ನೀವು ಯಾರಿಲ್ಲಿ?'

'ಈ ನರಪಿಶಾಚಿಯ ಹಣದಾಸೆಗೆ ಬಲಿಯಾದ ಆ ಬಡಹುಡುಗಿಯ ತಂದೆ ನಾನು—' ಎಂದು ಹೇಳುತ್ತ ಮಾವ ಪುನಃ ಗಟ್ಟಿಯಾಗಿ ಅಳತೊಡಗಿದರು.

'ತಾವು ಅಳಬೇಡಿ. ಸಮಾಧಾನ ಮಾಡಿಕೊಳ್ಳಿ. ಸರಕಾರದ ಕಾನೂನು

ನಿಮಗೆ ನ್ಯಾಯ ದೊರಕಲು ಸಹಾಯ ಒದಗಿಸುತ್ತದೆ'—ಎಂದು ಸಹಾನುಭೂತಿ ಸೂಚಕ ಮಾತುಗಳಲ್ಲಿ ಇನ್‌ಸ್ಪೆಕ್ಟರ್ ಹೇಳಿದ. ಕೂಡಲೇ ನಾನೆಷ್ಟು ಅತ್ತು ತಡೆದರೂ ಕೇಳದೆ ಕಣ್ಣು ಕೆಂಪು ಮಾಡಿ ಕೈಗಳಿಗೆ ಕೋಳ ಹಾಕಿದ. ಪೋಲೀಸ್ ಕಾನ್‌ಸ್ಟೇಬಲನ ಕೈಗೆ ಸರಪಣಿ ಕೊಡುತ್ತ ಇಲ್ಲಿಂದೀತ ಓಡಿಹೋಗದಂತೆ ನೋಡಿಕೊಳ್ಳಿ. ನಾನೂ 'ಡೆಡ್‌ಬಾಡಿ' ನೋಡಿಕೊಂಡು ಬರುತ್ತೇನೆ' —ಎನ್ನುತ್ತ ವಿಜೇತನ ಠೀವಿಯಿಂದ ಮುಂದೆ ಸಾಗಿದ.

'ನಾನೂ ಬರುತ್ತೇನೆ'—ಎನ್ನುತ್ತ ಮಾವನೂ ಇನ್‌ಸ್ಪೆಕ್ಟರ್ ಹಿಂದೆ ಓಡುತ್ತ ಹೋದರು.

'ಡೆಡ್‌ಬಾಡಿ—ನನ್ನ ಪತ್ನಿಯ ಮೃತದೇಹ!' ಒಂದೇಸಮನೆ ಸಾವಿರ ಮಿಂಚು ನನ್ನ ತಲೆಯೊಳಗೆ ಹರಿದಂತಾಯಿತು.

'ಇನ್‌ಸ್ಪೆಕ್ಟರ್ ಸಾಹೇಬರೇ'—ನನ್ನೆಲ್ಲ ಶಕ್ತಿಯನ್ನೂ ಕೇಂದ್ರೀಕರಿಸಿ ಕೂಗಿ ಹೇಳಿದೆ. 'ನನ್ನ ಪತ್ನಿಯನ್ನೊಮ್ಮೆ ನಾನೂ ನೋಡಬಯಸುತ್ತೇನೆ.'

ಇನ್‌ಸ್ಪೆಕ್ಟರ್—ಒಮ್ಮೆ ಬೆಂಕಿ ಕಾರುವ ದೃಷ್ಟಿಯಿಂದ ನನ್ನತ್ತ ನೋಡಿದ. ಗಡುಸಾದ ಸ್ವರದಿಂದ ಗದರಿಸಿದ—'ಬಾಯಿಮುಚ್ಚಿ ಬಿದ್ದುಕೊಂಡಿರು, ಇಲ್ಲವಾದರೆ ಕಪಾಲಕ್ಕೆ ನಾಲ್ಕು ಬಾರಿಸಿ ಹಲ್ಲು ಉದುರಿಸಿಬಿಡುತ್ತೇನೆ ನೋಡು.'

ಈ ಎಲ್ಲ ಗೊಂದಲಗಳಿಂದಾಗಿ ತಲೆಯೇ ಸಂಪೂರ್ಣ ಕೆಟ್ಟು ನಾನು ಕಂಗಾಲಾಗಿ ಹೋದೆ. ಮೆಲ್ಲನೆ ಸುಧಾರಿಸಿಕೊಳ್ಳುತ್ತ ನನ್ನನ್ನು ಹಿಡಿದುಕೊಂಡಿದ್ದ ಪೋಲೀಸರೊಡನೆ 'ಅಯ್ಯಾ ಮಹಾರಾಯರೇ! ದಯವಿಟ್ಟು ಇದೆಲ್ಲ ಏಕೆ? ಏನು? ಎಂಬುದನ್ನಾದರೂ ಹೇಳುವಿರೇ?' ಎಂದು ಬೇಡಿಕೊಂಡೆ.

ನನ್ನ ಮಾತು ಮುಗಿಯುವುದರೊಳಗೇ ಆ ಪೋಲೀಸ್ ಮಹಾಶಯ ಕಣ್ಣು ಕೆರಳಿಸಿ 'Shut-up—ಮುಚ್ಚು ಬಾಯಿ'—ಎಂದು ಇಂಗ್ಲಿಷ್ ಕನ್ನಡ ಭಾಷೆಗಳೆರಡರಲ್ಲೂ ನನ್ನನ್ನು ಗದರಿಸಿದ.

ನನ್ನ ದೇಹದೊಡನೆ ಅಂತರಂಗವೂ ನಡುಗತೊಡಗಿತು. ಅಷ್ಟರಲ್ಲಿ ಹೇಗೋ ಏನೋ—ಸ್ವಲ್ಪ ಸಮಾಧಾನವೂ ತಲೆ ಎತ್ತಿತು. ನಿಂತಲ್ಲೇ ಯೋಚಿಸತೊಡಗಿದೆ—ಅಯ್ಯೋ! ಇದೆಲ್ಲ ಏಕೆ ಹೀಗಾಯಿತು? ನಾನು ಆಫೀಸಿಗೆ ಹೊರಡುವಾಗ ಸುಮನಾ ಸರಿಯಾಗಿಯೇ ಇದ್ದಳು. ನಗುತ್ತಾ ಬೀಳ್ಕೊಟ್ಟಳು. ಇದೇಕೆ ಈಗ ಕೈಗಳಿಗೆ ಕೋಳ! ನನಗಾವುದೂ ಅರ್ಥವಾಗುವುದಿಲ್ಲ. ಕೊನೆಗೆ ನನ್ನೆಲ್ಲ ಶಕ್ತಿಯನ್ನೂ ಕೇಂದ್ರೀಕರಿಸಿ ಗಟ್ಟಿಯಾಗಿ ಕಿರುಚಾಡಿಕೊಳ್ಳಲೋ— ಎಂದು ಯೋಚಿಸುತ್ತ ಹುಚ್ಚನಂತೆ ತಡಪಡಿಸತೊಡಗಿದೆ.

'ನಮಸ್ಕಾರ ?—ಹಿಂದಿನಿಂದಾರೋ ನನ್ನನ್ನು ಮಾತಾಡಿಸಬಂದರು. ಹೇಗೋ ನನ್ನ ಉದ್ವೇಗವನ್ನೆಲ್ಲ ಹಿಡಿತಕ್ಕೆ ತಂದುಕೊಂಡು ಮಾತು ಬಂದತ್ತ ಮುಖ ತಿರುಗಿಸಿ ನೋಡಿದೆ. ಬಿಳಿ ಪೈಜಾಮಾ ಮತ್ತು ಉದ್ದ ತೋಳಿನ ನಿಲುವಂಗಿ ಧರಿಸಿದ್ದ ಕಿರು ಗಡ್ಡದಾರೀ ಯುವಕನೊಬ್ಬ ನನ್ನತ್ತ ಬಂದ. ತನ್ನ ಜೇಬಿನಿಂದ ಡೈರಿ ಮತ್ತು ಪೆನ್ ತೆಗೆದುಕೊಂಡು ಜಂಭಪೂರಿತ ನಗು ಸೂಸುತ್ತ ಸಮೀಪಿಸಿದ.

ಪರಿಚಯ ದೊರಕಿದೊಡನೆಯೇ ತನ್ನ ನಗುವನ್ನು ಇನ್ನಷ್ಟು ವಿಶಾಲಗೊಳಿಸುತ್ತ 'ಹೀ—ಹೀ—ಹಿ—ನನ್ನ ಹೆಸರು ವಿಕಾಸ. ನಾನು ರಾಜಧಾನೀ ಪತ್ರಿಕೆಯ crime reporter ಕೊಲೆ ಸಮಾಚಾರಗಳ ವರದಿಗಾರ'—ಎಂದು ಭಾಷಣ ಬಿಗಿಯತೊಡಗಿದ.

'ನಮಸ್ಕಾರ, ತಮಗೆ ನನ್ನಿಂದೇನಾಗಬೇಕು ?' ಎಂದು ನನಗಾದ ಅವಮಾನ, ದುಃಖಗಳನ್ನು ಆದಷ್ಟು ಮಟ್ಟಿಗೆ ಮುಚ್ಚಿಕೊಳ್ಳುತ್ತ ಕೇಳಿದೆ.

'ವಸ್ತುಸ್ಥಿತಿ ಏನೆಂದರೆ—ತಮ್ಮ ವಿಚಾರದ ಸತ್ಯಕಥೆ ಬರೆದು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದಿರುವೆವು.'

'ನನ್ನ ವಿಚಾರದ ಸತ್ಯಕಥೆ ?' ವಿಸ್ಮಯಗೊಂಡು ನಾನು ಕೇಳಿದೆ.

'ಹೌದು ; ಇತ್ತೀಚಿನ ದಿನಗಳಲ್ಲಿ ವರದಕ್ಷಿಣೆಗಾಗಿ ಬಲಿ ತೆಗೆದುಕೊಂಡವರ ಸಮಾಚಾರಕ್ಕೆ ಬಹಳ ಬೇಡಿಕೆ ಇದೆ ?

ನನ್ನೆರಡೂ ಕೈಗಳಿಂದ ತಲೆ ಜಜ್ಜಿಕೊಂಡು ಹತಾಶನಾಗಿ ಹೇಳಿದೆ 'ಈಗೊಮ್ಮೆ ನನ್ನನ್ನು ಕ್ಷಮಿಸಿಬಿಡಿ. ನಾನು ಮಾತಾಡುವ ಸ್ಥಿತಿಯಲ್ಲೇ ಇಲ್ಲ.'

'ಹಾಗಲ್ಲ ; ನನಗೆ ತಮ್ಮ 'ಸಂದರ್ಶನ' ಇಂದೇ, ಈಗಲೇ ಬೇಕಾಗಿದೆ. ಮತ್ತೆ ನಿಮ್ಮನ್ನು ಜೈಲ್‌ಖಾನೆಗೆ ಸೇರಿಸಿದಮೇಲೆ ನಿಮ್ಮನ್ನು ಭೇಟಿ ಮಾಡುವುದೇ ಕಷ್ಟ.'

'ಜೈಲುಖಾನೆ ;' ಮರುಕ್ಷಣವೇ ತಡೆಯಲಾರದ ಕೋಪದಿಂದ 'ಬಾಯಿ ಮುಚ್ಚಿಕೊಂಡು ಹೊರಡಿಲ್ಲಿಂದ, ನಾನಾವ 'ಸಂದರ್ಶನ'ಕ್ಕೂ ತಯಾರಿಲ್ಲ, ತೊಲಗಿಲ್ಲಿಂದ ?—ಎಂದು ಗದರಿಸಿದೆ.

'ಹಾಗಾದರೆ, ಇನ್ನೂ ಒಳ್ಳೆಯ ಸಮಾಚಾರ ಬೆಳೆಸಿ ಬರೆಯಬಹುದು. ವರದಕ್ಷಿಣೆ—ಹೊಸ ಹುಡುಗಿ—ಈ ಆಸೆಗಳಿಗೊಳಗಾಗಿ ಹಳೆಯ ಹೆಂಡತಿಯ ಕೊಲೆ ! ಈಗ ಕೋಪಾವೇಶ ! ವಾಹ ! ಎಂತಹ ಜನಮೆಚ್ಚುವ ಸಮಾಚಾರ!'

'ನಿನ್ನ ಮೇಲೆ ಮಾನನಷ್ಟದ ಮೊಕದ್ದಮೆ ಹಾಕಿಯೇನು—ಗೊತ್ತೇ ?'

ನನಗೇನೂ ಆದರಿಂದಾಗಲಾರದು. ವರದಕ್ಷಿಣೆಗಾಗಿ—ಕೊಲೆ ಎಂದು ಹೇಳಲಾಗಿದೆ; ಸೀಮೆಎಣ್ಣೆ ಸುರಿದು ಸುಡಲಾಗಿದೆ—ಎಂದು ಕೇಳಿಬರಲಾಗಿದೆ ಎಂದು ಮೊದಲಾಗಿ 'ಆಗಿದೆ—ಹೋಗಿದೆ' ಸಮಾಚಾರ ಬರೆದರೆ ನಾನಂತು ಬದುಕುತ್ತೇನೆ, ನೀನು ಮಾತ್ರ ಅಪರಾಧಿ ಎಂದಾಗಿ ಸತ್ತೇ ಹೋಗುವೆ, ತಿಳಿಯಿತೇ?" ಎಂದು ನಗುತ್ತಾ ದಾಪುಗಾಲು ಹಾಕಿಕೊಂಡು ಹೋಗಿ ಮಾಯವಾದ.

ಅಷ್ಟರಲ್ಲೇ ನನ್ನ ಗೆಳೆಯ ಪ್ರಕಾಶ ಅಲ್ಲಿ ಬಂದು ಸೇರಿದ. 'ಅಯ್ಯೋ ಕೃಷ್ಣ' ಬಂದವನೇ ಗಂಭೀರ ಸ್ವರದಿಂದ ಪ್ರಕಾಶ ಕೇಳಿದ—'ನೀನು ಹೆಂಡತಿಯನ್ನು ಸುಟ್ಟುಹಾಕಿ ಓಡಿ ಪರಾರಿಯಾಗಲು ಪ್ರಯತ್ನಿಸಿದೆಯಂತೆ! ನಗರದಲ್ಲೆಲ್ಲ ಇದೇ ವಿಚಾರವನ್ನು ಜನ ಮಾತಾಡುತ್ತಿದ್ದಾರೆ. ನಿಜಕಥೆಯಾದರೂ ಏನು ಮಹಾರಾಯಾ?

ಕೂಡಲೇ ಅವನ ದೃಷ್ಟಿ ನನ್ನ ಕೈಮೇಲಿನ ಕೋಳದ ಮೇಲೆ ಬಿತ್ತು. ತಡೆ ತಡೆದು ಕೇಳಿದ—'ಅಂದರೆ—ಇದು ನಿಜ ಸಮಾಚಾರ?'

'ಅಲ್ಲ ಪ್ರಕಾಶಾ' ನಡುಗುತ್ತ ತುಂಬಿಬಂದ ಕಂಠದಿಂದ ಹೇಳತೊಡಗಿದೆ. 'ನೀನು ಕೇಳಿದ ಸಮಾಚಾರ ಸುಳ್ಳು; ಸಂಪೂರ್ಣವಾಗಿಯೂ ಸುಳ್ಳುಸುದ್ದಿ. ನನಗೇ ಸತ್ಯಸಮಾಚಾರವೇನೆಂದು ತಿಳಿದಿಲ್ಲ. ಆಫೀಸಿನಲ್ಲಿ ನಾನು ಕೆಲಸದಲ್ಲಿರುವಾಗ ಸುರೇಂದ್ರ 'ಸುಮನಾಗೆ ಬೆಂಕಿ ತಾಗಿದೆ; ಆಕೆಯನ್ನು ಆಸ್ಪತ್ರೆಗೆ ಸೇರಿಸಲಾಗಿದೆ' ಎಂದು ಮೊದಲಾಗಿ ಫೋನ್ ಮಾಡಿ ಹೇಳಿದ. ಓಡೋಡಿ ಇಲ್ಲಿ ಬಂದರೆ ಪೋಲೀಸರು ನನ್ನನ್ನು ಹಿಡಿದುಹಾಕಿದ್ದಾರೆ. ಸತ್ಯವಿಚಾರ ನನಗೆ ಹೇಳುವುದೂ ಇಲ್ಲ. ನಾನೇನು ಮಾಡಬೇಕೆಂದು ತಿಳಿಯದೆ ತಲೆಯೇ ಕೆಟ್ಟು ಹೋಗಿದೆ—'

* * *

ಈ ಮಾತು ಹೇಳುತ್ತಿರುವಂತೆಯೇ ಜೀಪಿನ ಮೇಲಿಂದ ಧ್ವನಿವರ್ಧಕದ ಕೂಗಾಟ ಕೇಳಿ ಬಂತು. ಕೇಳಿ ನಾನು ಮೂರ್ಛೆಹೋಗುವಂತಾದೆ.

'ಮಹಿಳೆಯರೇ ಮತ್ತು ಮಹನೀಯರೇ! ಇಂದು ಕಮಲಾ ನಗರದಲ್ಲಿ ವರದಕ್ಷಿಣೆಗಾಗಿ ಸುಟ್ಟು ಬಲಿಯಾದ ಸುಮನಾದೇವಿಯ ಆತ್ಮಶಾಂತಿಗಾಗಿ ಸಂತಾಪ ಸೂಚಕ ಸಭೆಯನ್ನು ಸಂಜೆ ಆರು ಘಂಟೆಗೆ ಸುಭಾಸ್ ಮೈದಾನದಲ್ಲಿ ಏರ್ಪಡಿಸಲಾಗಿದೆ. ಅಪಾರ ಸಂಖ್ಯೆಯಲ್ಲಿ ನಾಗರಿಕರೆಲ್ಲ ದಯಮಾಡಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿಸಬೇಕಾಗಿ ಪ್ರಾರ್ಥಿಸಲಾಗಿದೆ.'

ವಿಷಪೂರಿತವಾದ ಬಾಣದಂತೆ ಈ ಮಾತು ನನ್ನ ಹೃದಯವನ್ನೇ ಒಡೆದು ಚೂರು ಚೂರಾಗಿಸಿದಂತಾಯಿತು. ಭಾವಾವೇಶಕ್ಕೊಳಗಾಗಿ ಒಂದೇ ಸಮನೆ ಕಣ್ಣೀರು ಸುರಿಯಲಾರಂಭಿಸಿತು. ಕುತ್ತಿಗೆ ಕಟ್ಟಿಬಂದು ಭ-ಭ-ಭಾ-ಎಂದು ಬಿಕ್ಕಿ ಬಿಕ್ಕಿ ಅಳು ಬರತೊಡಗಿತು.

ಈ ರೀತಿಯಾಗಿ ಗಟ್ಟಿಯಾಗಿ ಅಳತೊಡಗಿದ. ನನ್ನತ್ತ ನೋಡಿ ಹತ್ತಿರದ ಪೋಲೀಸ್ ಕಾನ್‌ಸ್ಟೇಬಲರಲ್ಲೊಬ್ಬ 'ಈಗ ಅತ್ತು ಕಣ್ಣೀರು ಸುರಿಸುವುದರಿಂದ ಏನು ಪ್ರಯೋಜನ? ಸುಟ್ಟು ಕೊಂದುಹಾಕುವ ಮೊದಲೇ ಯೋಚಿಸಬೇಕಿತ್ತು.'

'ಇದೆಲ್ಲ ಬರೀ ಸೋಗು ; ನಾಟಕ!' ಇನ್ನೊಬ್ಬ ಪೋಲೀಸರವ ನಗುತ್ತ ಹೇಳಿದ.

* * *

'ಕೃಷ್ಣಾ! ಏ ಕೃಷ್ಣಾ—ಇಲ್ಲಿ ನೋಡು. ಅಕಸ್ಮಾತ್ತಾಗಿ ಸಂತೋಷ ತುಂಬಿದ ಪ್ರಕಾಶನ ಮಾತು ಕೇಳಿ ಬಂತು.

ಒಡನೆಯೇ ತಲೆ ಎತ್ತಿ ಅತ್ತ ನೋಡಿದೆ. ತಲೆ ತಗ್ಗಿಸಿಕೊಂಡು ಬರುವ ಇನ್‌ಸ್ಪೆಕ್ಟರ್, ನನ್ನ ಪೂಜ್ಯ ಮಾವನೊಡನೆ ಕೈಬೆರಳಿಗೆ ಬ್ಯಾಂಡೇಜ್ ಕಟ್ಟಿ ಕೊಂಡಿರುವ ಮುದ್ದು ಸುಮನಾ—ಆಸ್ಪತ್ರೆಯ ಮೆಟ್ಟಲಿಳಿಯುತ್ತ ಬರುವು ದನ್ನು ನೋಡಿದೆ. ನನ್ನ ಕಣ್ಣನ್ನೇ ಒಮ್ಮೆ ನಂಬದಾದೆ.

ವಿಚಾರಿಸಿ ಕೇಳಿದಾಗ—ನಡೆದ ಕಥೆ ಇಷ್ಟೇ—

ಗ್ಯಾಸ್ ಒಲೆಯಿಂದ ಪ್ರಶರ್ ಕುಕ್ಕರ್ ಇಳಿಸುವಾಗ ಸ್ವಲ್ಪ ಅಜಾಗರೂಕತೆ ಯಿಂದಾಗಿ ಸುಮನಾಳ ಕೈಗೆ ಶಾಖ ಹೊಡೆಯಿತು. ಬಲಗೈಗೆ ಸಾಕಷ್ಟು ಶಾಖ ತಗಲಿ ಉರಿ ಜೋರಾಗತೊಡಗಿತು. ಮನೆಮದ್ದು ಮಾಡಿ, ನೋವನ್ನು ಹೆಚ್ಚಿಸಿ ಕೊಳ್ಳುವುದು ಬೇಡ—ಎಂದು ಸುಮನಾ ತಕ್ಕ ಔಷಧಿಗಾಗಿ ಆಸ್ಪತ್ರೆಯತ್ತ ಬಂದಳು. ಹಾಗೆ ಹೊರಡುವಾಗ ಪಕ್ಕದ ಮನೆಯ ಶಾಮುಲಮ್ಮನವರಿಗೆ—ಕೈಗೆ ಬೆಂಕಿತಾಗಿದ ಕಾರಣ ಆಸ್ಪತ್ರೆಗೆ ಹೋಗಿಬರಬೇಕಾಗಿದೆ. ಮನೆಯತ್ತ ಸ್ವಲ್ಪ ನೋಡಿಕೊಂಡಿರಿ—ಎಂದು ಕೆಲಸದಾಕೆಯ ಮೂಲಕ ಹೇಳಿಕಳಿಸಿ ಆಸ್ಪತ್ರೆಯತ್ತ ಬಂದಳು.

ಶ್ಯಾಮುಲಮ್ಮನವರು ಗಾಬರಿಯಾಗಿ—ಸುಮನಾ ಬೆಂಕಿ ತಾಗಿ ಆಸ್ಪತ್ರೆಗೆ ಹೋಗಿದ್ದಾಳೆಂದು ಮೀನಾಕ್ಷಮ್ಮನವರಿಗೆ ಹೇಳಿಕಳುಹಿಸಿದರು. ಮೀನಾಕ್ಷಮ್ಮ ನವರು ನಾರೀಸಹಜ ವಾಚಾಲತನದಿಂದ ಇನ್ನೂ ನಾಲ್ಕೈದು ಮನೆಯವರಿಗೆ ಉಪ್ಪು-ಖಾರ ಹಚ್ಚಿ ಹೇಳಿಕಳಿಸಿದರು. ಒಡನೆಯೇ ಕಾಲೊನಿಯ ಎಲ್ಲ ಮನೆ

ಯವರಿಗೂ ಈ 'ಸಿಹಿಸುದ್ದಿ' ಹಂಚಿಹೋಗಿ ಯಾರೂ ವಂಚಿತರಾಗದಂತಾಯಿತು.

ಹಾಗೆ ಸುದ್ದಿ ಹರಡುತ್ತ ಹೋಗುವಾಗ—ಸುಮನಾಗೆ ಬೆಂಕಿ ತಾಗಿತು—ಎಂಬುದರ ಬದಲಾಗಿ—ಸುಮನಾಗೆ ಬೆಂಕಿ ತಾಗಿಸಲಾಯಿತು—ಸುಟ್ಟುಹಾಕಲಾಯಿತು—ವರದಕ್ಷಿಣೆಗಾಗಿ ಬೆಂಕಿ ಕೊಡಲಾಯಿತು—ಎಂದು ಮೊದಲಾಗಿ ರೆಕ್ಕೆಪುಕ್ಕ ಹುಟ್ಟಿ ಸುದ್ದಿ ಹಾರಿ ಹರಡುವಂತಾಯಿತು.

ಸುದ್ದಿ ತಿಳಿದೊಡನೆಯೇ ಜಾಗೃತ ಮಹಿಳಾ ಸಮಾಜದ ಸದಸ್ಯೆಯರೊಬ್ಬರು ಪೋಲೀಸ್ ಸ್ಟೇಷನ್ನಿಗೆ ಫೋನ್ ಮಾಡಿ ಬಿಸಿ ಬಿಸಿ ಸಮಾಚಾರ ಮುಟ್ಟಿಸಿದರು. ಸ್ಟೇಷನ್ನಿಂದ ಸುದ್ದಿ ಪತ್ರಿಕಾ ಕಛೇರಿಗೂ, ಊರ ಮುಖಂಡರಿಗೂ ತಲುಪಿ ಹಾಹಾಕಾರ ಹಬ್ಬಿಹೋಯಿತು. ನನ್ನ ಮಾವನವರಿಗೂ ಸುದ್ದಿ ಮುಟ್ಟಿ ಅವರೂ ಓಡೋಡಿ ಆಸ್ಪತ್ರೆಗೆ ಬಂದು ಸೇರಿದರು.

ಈಗ, ಸತ್ಯ ಸಮಾಚಾರವೆಲ್ಲ ತಿಳಿದುಬಂದೊಡನೆಯೇ ಪೋಲೀಸರು ಮತ್ತು ಪತ್ರಕರ್ತರು ಸೇರಿ ಸಾಯಂಕಾಲದ ಸುಭಾಸ್ ಮೈದಾನದ ಸಭೆಯ 'ವಿಷಯ'ವನ್ನೇ ಬದಲಾಯಿಸಿದರು. ಕೈಕೋಳ ಬಿಚ್ಚಿ ಪೋಲೀಸ್ ಜೀಪಿನಲ್ಲೇ ನಮ್ಮನ್ನೆಲ್ಲ ಮೈದಾನಕ್ಕೆ ಕರದೊಯ್ದರು. ವೇದಿಕೆಯ ಮೇಲೆ ನನ್ನನ್ನು ಕುಳ್ಳಿರಿಸಿ ಅಮೋಘ ಅಭಿನಂದನಾ ಭಾಷಣ ಬಿಗಿದರು. ನನ್ನ ಗುಣಗಾನವನ್ನು ಸಾಕಷ್ಟು ನಡೆಸಿದರು. ನನ್ನ ಮಡದಿ ಸುಮನಾ ಪಕ್ಕದಲ್ಲಿದ್ದು ನಗುತ್ತಲೇ ಇದ್ದಳು.

ನಾನು ಸಹ ಗಂಭೀರವಾಗಿ ಎದ್ದು ನಿಂತು ಅಪಾರ ಜನಸ್ತೋಮವನ್ನು ವಂದಿಸಿದೆ. 'ಇನ್ನು ಮುಂದೆ ಎಂದೆಂದೂ ನಾನೇ ಅಡಿಗೆಕೆಲಸ ಮಾಡುವೆ. ಎಂದಿಗೂ ಸುಮನಾಳನ್ನು ಬೆಂಕಿಯ ಹತ್ತಿರ ಹೋಗಬಿಡೆ. ಎಷ್ಟೇ ಕಷ್ಟವಾದರೂ ಪೋಲೀಸರ ಛಡಿ ಏಟು ತಿಂದು ಫಾಶಿಗೆ ಆಹುತಿಯಾಗುವುದಕ್ಕಿಂತ ಸತಿಸೇವೆಯ ಸುಖವೇ ಉತ್ತಮ'—ಎಂದು ಮೊದಲಾಗಿ ಪ್ರತಿಜ್ಞೆ ಮಾಡಿ ಹೇಳಿದೆ. ನನ್ನ ಕೊರಳ ದೊಡ್ಡ ಹೂಹಾರವನ್ನು ಸುಮನಾಳ ಕುತ್ತಿಗೆಗೆ ಹಾಕಿ ಅಭಿನಂದಿಸಿದೆ.

ನೀವೂ ಹೀಗೆ ಸತಿಸೇವಾ ಸುಖ ಅನುಭವಿಸುವುದು ಒಳಿತಲ್ಲವೇ.

ಪ್ರೊ॥ ಕೆ. ರಾಮಕೃಷ್ಣ ಉಡುಪ

ಜಗತ್ತಿಗೆ ಚಲನೆ ಕೊಡಬೇಕೆನ್ನುವವನು ಮೊದಲು ತನ್ನನ್ನು ತಾನು ಚಲಿಸುವಂತೆ ಮಾಡಿಕೊಳ್ಳಲಿ.

—ಸಾಕ್ರೆಟೀಸ್

ಪುಸ್ತಕ ವಿಮರ್ಶೆ

ಕತೆಗಳು—೧೯೮೦ ಸಂ|| ಬಿ. ಶಾಮ ಸುಂದರ, ಪ್ರ|| ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪುಟಗಳು ೩೬+೨೬೦, ಮುದ್ರಣ ೧೯೮೩, ಬೆಲೆ ಒಂದೂವರೆ ರೂಪಾಯಿ.

ಪ್ರಕೃತ ಪುಸ್ತಕ ೧೯೮೦ ನೆಯ ವರ್ಷದ ಕಸ್ತೂರಿ, ಮಯೂರ, ಮಲ್ಲಿಗೆ, ಪ್ರಜಾವಾಣಿ ಮುಂತಾದ ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅನೇಕ ಕತೆಗಳಲ್ಲಿ ಉತ್ತಮವೆನಿಸಿದ ಹದಿನಾಲ್ಕು ಪ್ರಾತಿನಿಧಿಕ ಕತೆಗಳ ಸಂಪಾದಿತ ಕೃತಿ. ಸಂಕಲನದ ಇತಿಮಿತಿಯನ್ನು ಗಮನದಲ್ಲಿಟ್ಟುಕೊಂಡು ಕತೆಗಳನ್ನು ಬಹು ಎಚ್ಚರಿಕೆಯಿಂದ ಸಂಪಾದಕರು ಆಯ್ಕೆ ಮಾಡಿದ್ದಾರೆ. ಕತೆಯ ಆಯ್ಕೆಗೆ ಕಥಾವಸ್ತು ವೈವಿಧ್ಯ, ಬಳಸಿರುವ ಭಾಷೆ, ಹೇಳುವಲ್ಲಿ ಅನುಸರಿಸಿರುವ ರೀತಿ ಮತ್ತು ಎಷ್ಟರ ಮಟ್ಟಿಗೆ ಜನಜೀವನಕ್ಕೆ ಹತ್ತಿರವಾದವು, ಸಮಾಜವನ್ನು ಅವು ಪ್ರತಿಬಿಂಬಿಸಿರುವ ಬಗೆ ಮತ್ತು ಪರಿಣಾಮ ಮುಂತಾದ ವಿಚಾರಗಳನ್ನು ಗಮನದಲ್ಲಿ ಇರಿಸಿಕೊಳ್ಳಲಾಗಿದೆ. ಪೂರ್ವಕಲ್ಪಿತ ಪ್ರಚೋದನೆಗಳನ್ನು ಇಟ್ಟುಕೊಳ್ಳದೆ ಕತೆಗಳನ್ನು ಓದುವ ಮೊದಲೇ ಹಾಗಿರಬೇಕು, ಹೀಗಿದ್ದರೆ ಉತ್ತಮ ಎನ್ನುವ ಭಾವನೆಗಳನ್ನು ತುಂಬಿಕೊಳ್ಳದೆ ಕತೆ ಓದಬೇಕೇ ಹೊರತು ಯಾರು ಬರೆದಿದ್ದಾರೆ, ಹೆಂಗಸೇ....ಕುಮಾರಿಯೇ, ಶ್ರೀಮತಿಯೇ, ಗಂಡಸೇ....ವಿದ್ಯಾರ್ಥಿಯೇ ಕಾಲೇಜಿನ ಉಪನ್ಯಾಸಕರೇ, ಹೆಸರಾದವರೇ, ಯಾವ ಡಿಗ್ರಿಗಳಿವೆ, ಯಾವ ಉದ್ಯೋಗದಲ್ಲಿದ್ದಾರೆ, ಯಾವ ಜಾತಿ ಯಾವ ಗುಂಪು ಇತ್ಯಾದಿಗಳ ಗೋಜಲನ್ನು ತಲೆಗೆ ತುಂಬಿಕೊಂಡು ಕತೆ ಓದಿದರೆ ಅದರ ನಿಜವಾದ ರುಚಿ ನಮಗೆ ತಿಳಿಯುವುದಾದರೂ ಹೇಗೆ? (ಅರಿಕೆ ಪು viii)—ಈ ಮನೋಭಿಪ್ರಾಯದ ಸಂಪಾದಕರು ಓದುಗರಿಗೆ ಎಂತಹ ಕತೆಗಳನ್ನು ಸಂಪಾದಿಸಿಕೊಡಬಹುದು ಎಂಬುದನ್ನು ಓದುಗರು ಸುಲಭವಾಗಿಯೇ ಊಹಿಸಿಕೊಳ್ಳಬಹುದು.

ಸಂಕಲನದಲ್ಲಿ ಆಡಂಬರವಿಲ್ಲದ, ಮನಮುಟ್ಟುವ ಸರಳ ನಿರೂಪಣೆಯ ಕತೆಗಳ ಜೊತೆಗೆ ಸ್ವಲ್ಪ ಸಂಕೀರ್ಣ ಎನ್ನಬಹುದಾದ ಕತೆಗಳೂ ಇವೆ. ದಲಿತ ವರ್ಗಗಳ ನೋವನ್ನು ಬಿಂಬಿಸುವ, ಸಾಮಾಜಿಕ ವೈಷಮ್ಯಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸುವ, ಗ್ರಾಮ್ಯ ಜೀವನದ ಆಡುಭಾಷೆಯ ಮಣ್ಣಿನ ವಾಸನೆಯನ್ನು ಹೊಮ್ಮಿಸುವ, ನಮ್ಮ ನಿತ್ಯ ಜೀವನದಲ್ಲಿ ಮಾರ್ಗದರ್ಶನ ನೀಡುವಂತಹ ಕತೆಗಳೂ ಸೇರಿವೆ.

ಕಂ. ವೀರಭದ್ರಪ್ಪನವರ 'ಕತ್ತಲನು ತ್ರಿಶೂಲ ಹಿಡಿದ ಕಥೆ' ನಮ್ಮ ನಾಗರಿಕ

ಸಮಾಜ ವ್ಯವಸ್ಥೆಯಲ್ಲಿರುವ ಅವ್ಯವಸ್ಥೆಯ ಯಥಾವತ್ತಾದ ಚಿತ್ರಣ. ಒಂದು ಹಿಡಿ ಅನ್ನಕ್ಕಾಗಿ ಪರಿತಪಿಸುವ ಕತ್ತಲನಂತಹ ಮಂದಿ, ಸಮಾಜದ ದುಷ್ಪ್ರವೃತ್ತಿಯನ್ನು ಸಹಿಸಿ ಸಾಕಾದಾಗ, ಎಷ್ಟರಮಟ್ಟಿಗೆ ಪ್ರತಿಭಟಿಸುತ್ತಾರೆ ಎಂಬ ಅಂಶ ಈ ಕತೆಯಲ್ಲಿ ವ್ಯಕ್ತವಾಗುತ್ತದೆ. ಕಾಳೇಗೌಡ ನಾಗವಾರ ಅವರ 'ಪರಸ್ಪರ' ಎಂಬ ಕತೆ ಯುವಕ ಯುವತಿಯರ ಮನದ ದ್ವಂದ್ವ, ಅನಿಸಿಕೆ, ಪ್ರೇಮ ಮತ್ತು ಜಾತಿ ಇವುಗಳ ಬಗ್ಗೆ ಇರುವ ಧೋರಣೆಗಳನ್ನು ಧ್ವನಿಸುತ್ತದೆ. ಮಾನವ ಇದ್ದ ಹಾಗೇ ಇರಲಾರ, ಬದುಕುವ ಜೀವ ಬದಲಾಗಲೇಬೇಕು ಎಂಬ ಅಂಶವನ್ನು ಬೇಲೂರು ರಾಮಮೂರ್ತಿಯವರ 'ಸಂಧಾನ' ಕತೆ ಸೂಚಿಸುತ್ತದೆ. ಬೊಳುವಾರು ಮಹಮದ್ ಕುಂಞ ಅವರ 'ಸೈತಾನ', ಮಾನವರ ಪಾಶವೀ ಪ್ರವೃತ್ತಿಯನ್ನು ಸಾರಾಸಗಟು ಬಯಲಿಗೆಳೆಯುವ ಒಂದು ಉತ್ತಮ ಕತೆಯಾದರೆ ಧರ್ಮದ ಹೆಸರಿನಲ್ಲಿ ದಾಸ್ಯ ಹೇಗೆ ಅಡಗಿದೆ ಎಂಬುದನ್ನು ಸಮರ್ಥವಾಗಿ ಚಿತ್ರಿಸುತ್ತದೆ ಫಕೀರ ಮುಹಮ್ಮದ್ ಕಟ್ಪಾಡಿ ಅವರ ಕತೆ 'ಒಂದು ಹಗಲು ಒಂದು ರಾತ್ರಿ.' ದೇವರು-ಧರ್ಮ-ಜಾತಿ ಈ ಪ್ರಬಲ ಶಕ್ತಿಗಳ ಹೆಸರಿನಲ್ಲಿ ನಡೆಯುವ ಶೋಷಣೆಗೆ ಇತಿಮಿತಿಯೇ ಇಲ್ಲ. ಧರ್ಮದ ನೆಪದಲ್ಲಿ ತಮ್ಮ ಸ್ವಪ್ರತಿಷ್ಠೆಗೆ ಶ್ರೀಮಂತರು ಯಾವ ಕಾರ್ಯವನ್ನು ಕಟ್ಟುನಿಟ್ಟಾಗಿ ಆಚರಿಸುವರೋ ಅದನ್ನೇ ಬಡವರು ಆಚರಿಸದಿದ್ದರೂ ಯಾರೂ ಕೇಳುವುದಿಲ್ಲ. ಇಂದಿನ ಬದಲಾಗುತ್ತಿರುವ ಬದಲಾಗಿರುವ ಸಮಾಜಕ್ಕನುಗುಣವಾಗಿ ನಮ್ಮ ಸಂಪ್ರದಾಯಗಳೂ ಬದಲಾಗಬೇಕು. ಆಗ ಮಾತ್ರ ಯಶಸ್ವೀ ಜೀವನ ಸಾಧ್ಯ. ಈ ನಿಯಮಕ್ಕನುಗುಣವಾಗಿ ನಡೆದುಕೊಳ್ಳಲು ನಿಶ್ಚಯಿಸುತ್ತಾರೆ ಈ ಕತೆಯಲ್ಲಿನ ಪ್ರಮುಖ ಪಾತ್ರಗಳಾದ ಸಲ್ಮಾ ಮತ್ತು ಅಬ್ದುಲ್ಲಾ. ಅಮಾನವೀಯ ಸಂಪ್ರದಾಯಗಳ ವಿರುದ್ಧ ಹೋರಾಡುತ್ತಿರುವ ಇಂದಿನ ಪ್ರಜ್ಞಾವಂತ ಜನರ ಪರವಾಗಿ ಕಟ್ಪಾಡಿಯವರು ಸಲ್ಮಾ ಮತ್ತು ಅಬ್ದುಲ್ಲಾರ ಮೂಲಕ ಸಾಮಾಜಿಕ ಪಿಡುಗಿನ ಕಡೆಗೆ ನಮ್ಮ ದೃಷ್ಟಿಯನ್ನು ಸೆಳೆದಿದ್ದಾರೆ.

ಇಂತಹ ಕತೆಗಳ ಜೊತೆಗೆ ಕೇರಳದ ಒಂದು ವಿಚಿತ್ರ ಪದ್ಧತಿಯನ್ನು ಕುರಿತಾದ ಗಂಗಾ ಪಾದೇಕಲ್ ಅವರ 'ಪುಲಪೇಡಿ', ದೇಹಕ್ಕೂ ಮನಸ್ಸಿಗೂ ಇರುವ ಸಂಬಂಧದ ಮೇಲೆ ಹೆಣೆದಿರುವ ಬಿ. ಇಂದಿರ ಅವರ 'ಗೊಡ್ಡು', ಮಾನವ ಸಹಜ ಗುಣ ಪರಿಸ್ಥಿತಿಗೆ ಹೇಗೆ ಸ್ಪಂದಿಸುತ್ತದೆ ಎಂಬ ವಿಚಾರವನ್ನು ವ್ಯಕ್ತಿಗಳ ಮೂಲಕವೇ ಸಮರ್ಥವಾಗಿ ಚಿತ್ರಿಸುವ ಶಾಂತರಸರ 'ಸೆಳೆತ'—ಇವು ಓದುಗರನ್ನು ತಟ್ಟುತ್ತವೆ, ಮುಟ್ಟುತ್ತವೆ. ಮನಸ್ಸಿನಾಳಕ್ಕೆ ಇಳಿಯುತ್ತವೆ. ಇಂತಹ

ಕತೆಗಳನ್ನು ಒಳಗೊಂಡಿರುವ ಒಂದು ಉತ್ತಮ ಕಥಾಸಂಕಲನ, ಕತೆಗಳು–ಗ್ಗಲಂ.

ಆರ್. ರಾಮಕೃಷ್ಣ

* * *

ಕರಾವು—ಲೇಖಕರು : ಮಳಲಿ ವಸಂತಕುಮಾರ್

'ಕರಾವು' ಎಂದರೆ ಹಾಲು ಕರೆಯುವ ಹಸು. ಕವಿ ಮನಸ್ಸು ಎಂಬುದು ಭಾವನೆಗಳ ಹಾಲನ್ನು ಸೂಸುವ ಒಂದು ಹಸು. ಹಸುವಿನ ಹಾಲು ನಾಲಿಗೆಗೆ ರುಚಿ, ದೇಹಕ್ಕೆ ಹಿತಕರ. ಅದರಲ್ಲಿ ವರ್ಜ್ಯವಾದದ್ದೇನೂ ಇರುವುದಿಲ್ಲ. ಆದರೆ ಕವಿಭಾವಗಳೆಲ್ಲವೂ ಶುದ್ಧ ಹಾಲಿನಂತೆಯೇ ಇರಲಾರವು. ರಸಿಕನಿಗೆ ಅವುಗಳಲ್ಲಿ ಕೆಲವು ಸ್ವಾದ್ಯ, ಕೆಲವು ತ್ಯಾಜ್ಯ.


'ಕರಾವು' ಎಂಬುದು ಮಳಲಿ ವಸಂತಕುಮಾರರ ಒಂದು ಕವನ ಸಂಗ್ರಹದ ಶೀರ್ಷಿಕೆ. ಇದರಲ್ಲಿರುವ ಮೂವತ್ತೆರಡು ರಚನೆಗಳಲ್ಲಿ ಕೆಲವು ಗಟ್ಟಿಹಾಲು; ಇನ್ನು ಕೆಲವು ಕೊಂಚ ತೆಳ್ಳಗೆ; ಮತ್ತೂ ಕೆಲವು ನೀರುಹಾಲು! (ಹಾಲಿನಂತೆ ಇರುವ ನೀರು ಅಥವಾ ನೀರು ಸೇರಿದ ಹಾಲು). ಕವಿತೆಗಳಲ್ಲಿ ಕೆಲವಕ್ಕೆ ಸಮಾನ ವಸ್ತುವಾದರೆ, ಮಿಕ್ಕವುಗಳಲ್ಲಿ ವಿಷಯ ವೈವಿಧ್ಯವಿದೆ. ಇಲ್ಲಿರುವುದೆಲ್ಲ ಮುಕ್ತ ಛಂದವಾದರೂ ಅದರಲ್ಲೊಂದು ಗತಿಬದ್ಧತೆಯನ್ನು ಕಾಣುತ್ತೇವೆ. ಒಂದೆರಡು ಸಣ್ಣ ಪುಟ್ಟ ದೋಷಗಳನ್ನು (ಅವು ಮುದ್ರಣದ್ದೂ ಆಗಿರಬಹುದು) ಬಿಟ್ಟರೆ ಭಾಷೆಯೂ ಸುಲಭವಾಗಿದೆ.

ಚಮ್ಮಾರನೊಬ್ಬನ ಬಡಬದುಕನ್ನು ಕನ್ನಡಿಸುವ 'ಕರ್ಮ', ಡಂಭಾಚಾರದ ವಿಡಂಬನೆಯಾಗಿರುವ 'ಕ್ರಾಂತಿ', ಗಾಳಿಗೋಪುರದಲ್ಲಿ ಕನಸು ಕಾಣುತ್ತಿರುವವರನ್ನು ಕುರಿತ 'ಕವಿಗಳು', ತೆರೆದ ಕಣ್ಣು-ಮನಸ್ಸುಗಳಿಂದ ಲೋಕವನ್ನು ನೋಡು, ಮುರುಕು ಕನ್ನಡಿಯಿಂದಲ್ಲ ಎಂದು ಬೋಧಿಸುವ 'ನವ್ಯಕವಿಗೆ', ಸೌಂದರ್ಯವೇ ಶಿವನೆಂಬುದನ್ನು ಸಾರುವ 'ಶಿವ ನೋಯನೆ', ಪ್ರೇಮಪತ್ರಗಳನ್ನು ಕುರಿತಾದ 'ಕಾಗದ ಕನ್ಯೆಯರು'—ಇವುಗಳನ್ನು ನಾಲಗೆ ಚಪ್ಪರಿಸುತ್ತದೆ, ಮನಸ್ಸು ಮೆಚ್ಚುತ್ತದೆ. ಗಾಂಧಿ, ಸುಭಾಸ್, ಶ್ರೀ, ಕುವೆಂಪು, ಪು.ತಿ.ನ.—ಮುಂತಾದ ವ್ಯಕ್ತಿ ವಿಷಯಕವಾದ ಕೃತಿಗಳಲ್ಲಿ ಎತ್ತಿ ಹೇಳಬೇಕಾದ ಭಾವ ಸಂಪತ್ತಾಗಲೀ ವರ್ಣನ ವಿಶೇಷವಾಗಲೀ ಇಲ್ಲ. ಆದರೆ 'ಅಹಲ್ಯಾ' ಎಂಬುದರಲ್ಲಿ ಕವಿದೃಷ್ಟಿಯನ್ನು ಒಪ್ಪುವುದು ಕಷ್ಟವಾದರೂ, ನಿರೂಪಣೆ ಸೊಗಸಾಗಿದೆ. ಪ್ರಕೃತ ಕವಿ 'ನವ್ಯ ಮುದ್ರಾಧಾರಿ' ಎಂದು ಹೇಳಲಾಗದಿದ್ದರೂ—'ರವಿಕೆಯ

ಮರೆಯ ಮೈ ಬೆವರಿನೊಳದೇಕೆ ನಾರುಹಿಕೆ' ಎಂದು ನವ್ಯಕವಿಯನ್ನೇ ಪ್ರಶ್ನಿಸಿದ್ದರೂ—ನವ್ಯ ಪಂಥಕ್ಕೆ ಅನಿವಾರ್ಯವೆನಿಸಿರುವ 'ಕಾಮವಾಸನೆ' ಇಲ್ಲಿಯೂ ನಾಲ್ಕಾರು ಪದ್ಯಗಳಲ್ಲಿ ಘಾಟಾಗಿ ಮೂಗಿಗೆ ಹೊಡೆಯುತ್ತಿದೆ; ಅಲ್ಲಲ್ಲಿ botic imagesyಗಳು ಕಣ್ಣನ್ನು ಕುಕ್ಕುತ್ತವೆ. ಗದ್ಯತನವೇ ಹೆಚ್ಚಾಗಿರುವ ಪದ್ಯಗಳೂ ಒಂದೆರಡಿವೆ.

ಆದರೂ 'ಕರಾವಿ'ನಲ್ಲಿ ಎದ್ದು ಕಾಣುವ ಸತ್ವವನ್ನೂ, ಸ್ವತ್ವವನ್ನೂ ಕಡೆಗಾಣುವಂತಿಲ್ಲ. ಬದುಕಿನ ಸಿಹಿ–ಕಹಿಗಳ ಮೇಲೆ ಕವಿಮನಸ್ಸು ಚೆನ್ನಾಗಿ ಕಾವು ಕೂರಬಲ್ಲದು; ವಿನೂತನ ಭಾವಗಳನ್ನು ಹೊರತೆಗೆಯಬಲ್ಲ:ದು—'ಸೂರ್ಯನಿಗೇ ಸೆಕೆಯಾಗಿತ್ತು, ಗಾಳಿ ಬೆಂದಿತ್ತು', 'ನಿಮ್ಮ ಪಾದರಕ್ಷೆಯೇ ನನ್ನ ಶ್ರೀರಕ್ಷೆ', 'ಕಟ್ಟುಕತೆಗಳ ಕದೀಮರು', 'ಕಿಜ್ಕೊಟ್ಟಿಯ ಕಿರುಸ್ಥಳವಷ್ಟೇ ದೃಷ್ಟಿಗಳವಲ್ಲ' ಮುಂತಾದ ಪಂಕ್ತಿಗಳು ಓದುಗನ ಮನಸ್ಸಿನಲ್ಲಿ 'ಪಳಂಚನೆ' ಮಿಂಚುತ್ತವೆ, ಚಿಂತನೆಗೆ ಹಚ್ಚುತ್ತವೆ.

ಎಂ. ರಾಮಚಂದ್ರ



ಸುವರ್ಣ ಲೇಪದಿಂದ ಸಿಹಿ ಹಚ್ಚದ ಅರ್ಜಿಗಳು ಅವರಿಗೆ ರುಚಿ ಎನಿಸುವುದಿಲ್ಲ. ಮರಳಿ ಕೊಡಲ್ಪಡುತ್ತವೆ; ಒಮ್ಮೊಮ್ಮೆ ಸ್ವೀಕರಿಸಲ್ಪಟ್ಟರೂ ಮೂಲೆಗೆ ಸೇರಿಸಲ್ಪಡುವವೇ ವಿನಾ ಓದಲ್ಪಡುವುದಿಲ್ಲ.

—ಮ್ಯೂಸಿಂಗರ್

ಹಣವೆಂದರೆ ತಳವೆ ಇಲ್ಲದ ಸಮುದ್ರ, ಮರ್ಯಾದೆ, ಸದಸದ್ವಿವೇಕಸತ್ವ ಎಲ್ಲವೂ ಅದರಲ್ಲಿ ಮುಳುಗಿ ಹೋಗುತ್ತವೆ.

—ಕೋರ್ನ್ಲೀ

ದೇವರು ನಮ್ಮನ್ನು ಪಾರು ಮಾಡಬೇಕೆಂದರೆ, ನಾವು ಮೊದಲು ಮೋಸದ ಬಲೆಯಿಂದ ಬಿಡಿಸಿಕೊಳ್ಳಬೇಕು.

—ಆಗಸ್ಟೀನ್

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಬಿಡಿ ಪ್ರತಿ: ಒಂದು ರೂಪಾಯಿ

ವಾರ್ಷಿಕ ಚಂದಾ: ೧೦ ರೂಪಾಯಿ

ಸಾರ್ವಜನಿಕ ವಿದ್ಯಾವಂತರ ಉಪಯೋಗಕ್ಕಾಗಿ, ಮುಖ್ಯವಾಗಿ ಗ್ರಾಮಸ್ಥರ ಮತ್ತು ಗ್ರಾಮ ಪುಸ್ತಕ ಭಂಡಾರಗಳ ಅಧಿಕಾರಿಗಳ ಉಪಯೋಗಕ್ಕಾಗಿ ಈ ಪತ್ರಿಕೆ ಪ್ರಕಟವಾಗುತ್ತಿದೆ.

(ಅ) ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿಕೊಡುವುದು.

(ಆ) ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳನ್ನು ಪ್ರಕಟಿಸುವುದು.

(ಇ) ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು.

(ಈ) ಪುಸ್ತಕ ಭಂಡಾರ ವ್ಯವಸ್ಥೆ ವಿಚಾರವಾಗಿ ಲೇಖನಗಳನ್ನು ಪ್ರಕಟಿಸುವುದು

(ಉ) ಒಬ್ಬ ಲೇಖಕರ ಎಲ್ಲ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. ಒಂದು ವಿಷಯದ ಮೇಲೆ ಬರೆದಿರುವ ಅನೇಕ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು.

(ಊ) ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕಥೆಗಳು, ಕವಿತೆಗಳು, ಪ್ರಬಂಧಗಳ ಮತ್ತು ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು.

(ಋ) ಕಲಾಚಿತ್ರಗಳನ್ನು ಅಚ್ಚು ಮಾಡುವುದು.

(ೠ) ಕನ್ನಡದಲ್ಲಿ ಪ್ರಕಟವಾದ ಅತಿ ಮುಖ್ಯ ಲೇಖನದ ಸಾರಾಂಶವನ್ನು ಪ್ರಕಟಿಸುವುದು.

(ಎ) ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು.

ಪ್ರಧಾನ ಕಾರ್ಯದರ್ಶಿ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಕೃಷ್ಣಮೂರ್ತಿಪುರಂ :: ಮೈಸೂರು-೪

Reg. No. KRNN. 29 / WPP 6 | LICENSE No. 21
LICENSED TO POST WITHOUT PREPAYMEN

ನೀವು ಓದಲೇಬೇಕಾದ ಪುಸ್ತಕಗಳು....

ಜನಪ್ರಿಯ ವಾಲ್ಮೀಕಿ ರಾಮಾಯಣ

ಶರಣ ಚರಿತಾಮೃತ

ನನ್ನೂರು

ಗೋಕುಲ

ಭಗತ್‌ಸಿಂಗ್

ಸಿ. ವಿ. ರಾಮನ್

ವಚನ ಭಾಗವತ

ನಳಚರಿತ್ರೆಯ ಸಂಗ್ರಹ

ನಕ್ಷತ್ರ ವೀಕ್ಷಣೆ

ಕರ್ನಾಟಕ ಹವಾಸೂಚಿ

ಕನ್ನಡ ಪರಂಪರೆ

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು
ತರಿಸಿ ಓದಿರಿ

Edited by R. Boraiah, Printed by H. G. Ramaswamy Iyeng Manager, Karnataka State Adult Education Council Pre and Published by Karnataka State Adult Education Coun Mysore city (India)